
ಮಂಗಳವಾರ, ಜೂನ್ 20, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಅಲಂಕಾರ
ಗುಜರಾತ್‌ನ ಅಹಮದಾಬಾದ್‌ನಲ್ಲಿ ಸೋಮವಾರ ಜಗನ್ನಾಥ ರಥೋತ್ಸವದ ಅಂಗವಾಗಿ ಆನೆಗೆ ಅಲಂಕಾರ ಮಾಡಿದ ಯುವತಿ

‘ಡೆಕ್ಕನ್ ಹೆರಾಲ್ಡ್’, ‘ಪ್ರಜಾವಾಣಿ’ ಅಮೃತ ಸಡಗರ: ಕೆ.ಎನ್. ಗುರುಸ್ವಾಮಿ ನೆನಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡೆಕ್ಕನ್ ಹೆರಾಲ್ಡ್’ ಮತ್ತು ‘ಪ್ರಜಾವಾಣಿ’ ದಿನಪತ್ರಿಕೆಗಳ ಸ್ಥಾಪಕರಾದ ಕೆ.ಎನ್. ಗುರುಸ್ವಾಮಿ ಅವರನ್ನು ಸ್ಮರಿಸುವ ಅಮೃತ ಗಳಿಗೆಗೆ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ಸೋಮವಾರ ಸಾಕ್ಷಿಯಾಯಿತು.

ಗುರುಸ್ವಾಮಿ ಅವರ ಮೊಮ್ಮಗ ಕೆ.ಎನ್. ಹರಿಕುಮಾರ್ ಅವರು ಬರೆದಿರುವ ‘ಗ್ರ್ಯಾಂಡ್ ಫಾದರ್ ಅಂಡ್ ಗ್ರ್ಯಾಂಡ್ ಮದರ್: ಎ ಮೆಮೊರ್’ (ಇಂಗ್ಲಿಷ್) ಹಾಗೂ ‘ಅಜ್ಜ–ಅಜ್ಜಿ ನೆನಪುಗಳು’ (ಕನ್ನಡ) ಕೃತಿಗಳ ಕುರಿತು ಗಣ್ಯರು ಮಾತನಾಡಿದರು. ಗುರುಸ್ವಾಮಿಯವರ ಜೊತೆ ಒಡನಾಟ ಹೊಂದಿದ್ದ ಹಲವರು ತಮ್ಮ ನೆನಪುಗಳನ್ನು ಹಂಚಿಕೊಂಡರು.

ಮಾನವೀಯತೆಯ ಗಣಿಯಾಗಿದ್ದ ಗುರುಸ್ವಾಮಿ ಅವರ ವ್ಯಕ್ತಿತ್ವ, ಹವ್ಯಾಸ, ನೇರ ನಡೆ, ನುಡಿಯನ್ನು ಗಣ್ಯರು ಅನಾವರಣಗೊಳಿಸಿದರು. ಸಾರ್ವಜನಿಕ ಜೀವನದಲ್ಲಿ ದಿನಪತ್ರಿಕೆಗಳು ಜನರ ಭಾವನೆಗಳನ್ನು ರೂಪಿಸುವಲ್ಲಿ ವಹಿಸಬೇಕಾದ ಪಾತ್ರದ ಕುರಿತು ಅವರು ಹೊಂದಿದ್ದ ನಿಲುವುಗಳನ್ನು ವಿಶ್ಲೇಷಿಸಿದರು.

ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರ ವಿಡಿಯೊ ಭಾಷಣವನ್ನು ಬಿತ್ತರಿಸಲಾಯಿತು. ‘ಯಶಸ್ವಿ ಉದ್ಯಮಿಯಾಗಿದ್ದ ಗುರುಸ್ವಾಮಿ ಅವರು ದಿನಪತ್ರಿಕೆಗಳನ್ನು ಸಾಮಾಜಿಕ ಆಂದೋಲನದ ರೂಪದಲ್ಲಿ ಬೆಳೆಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅಬಕಾರಿ ಉದ್ಯಮದಲ್ಲೂ ಅವರು ಹಲವಾರು ಸವಾಲುಗಳನ್ನು ಎದುರಿಸಿದ್ದರು. ಅವರ ಬದುಕು ಎಲ್ಲರಿಗೂ ಸ್ಫೂರ್ತಿಯಾಗಿತ್ತು’ ಎಂದು ಸ್ಮರಿಸಿದರು.

‘ಆಗ ಪತ್ರಿಕೋದ್ಯಮ ಬಹಳ ಕಷ್ಟಕರವಾಗಿತ್ತು. ಕೆ.ಎನ್. ಹರಿಕುಮಾರ್, ಕೆ.ಎನ್. ತಿಲಕುಮಾರ್ ಮತ್ತು ಕೆ.ಎನ್. ಶಾಂತಕುಮಾರ್ ಅವರು ಪತ್ರಿಕೋದ್ಯಮಕ್ಕೆ ಹೊಸ ಆಯಾಮ ಮತ್ತು ಮುನ್ನೋಟ ನೀಡುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಿದರು’ ಎಂದರು.




ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಸೋಮವಾರ ನಡೆದ ಕೆ.ಎನ್. ಗುರುಸ್ವಾಮಿ ಅವರ ನೆನಪಿನ ಸಂಜೆ ಕಾರ್ಯಕ್ರಮದಲ್ಲಿ ಕೆ.ಎನ್. ಹರಿಕುಮಾರ್ ಮಾತನಾಡಿದರು (ಎಡಚಿತ್ರ). ಭಾಗವಹಿಸಿದ್ದ ಗಣ್ಯರು –ಪ್ರಜಾವಾಣಿ ಚಿತ್ರ

ಗುರುಸ್ವಾಮಿ ಅವರ ಕಾರ್ಯವೈಖರಿ ಮತ್ತು ಪತ್ರಿಕಾ ಧರ್ಮದ ಕುರಿತು ಹೊಂದಿದ್ದ ನಿಲುವುಗಳನ್ನು ವಿಶ್ಲೇಷಿಸಿದ ಪತ್ರಕರ್ತ ಜಿ.ಎನ್. ರಂಗನಾಥರಾವ್, ‘ಕೆ.ಎನ್. ಗುರುಸ್ವಾಮಿ ಅವರಿಗೆ ಪತ್ರಿಕಾ ಧರ್ಮದ ಬಗ್ಗೆ ಸ್ಪಷ್ಟ ಕಲ್ಪನೆ ಇತ್ತು. ಲೋಕಜ್ಞಾನ ನೀಡುವ ಮೂಲಕ ಸಾರ್ವಜನಿಕ ಬದುಕನ್ನು ಹಸನುಗೊಳಿಸುವ ದಿಸೆಯಲ್ಲಿ ದಿನಪತ್ರಿಕೆಗಳು ಜನಾಭಿಪ್ರಾಯ ರೂಪಿಸಬೇಕು. ಜನರ ಭಾವನೆಗಳಿಗೆ ಎಂದಿಗೂ ನೋವುಂಟು ಮಾಡಬಾರದು ಎನ್ನುವ ನಿಲುವು ಹೊಂದಿದ್ದರು’ ಎಂದು ವಿವರಿಸಿದರು.

‘ಕೆ.ಎನ್. ಗುರುಸ್ವಾಮಿ ಅವರ ಗುಣಗಳನ್ನು ಕೆ.ಎನ್. ಹರಿಕುಮಾರ್ ಅವರು ತಮ್ಮ ಕೃತಿಯಲ್ಲಿ ನಿರ್ಮೋಹಿಯಾಗಿ, ನಿರ್ಲಿಪ್ತತೆಯಿಂದ ವಸ್ತುನಿಷ್ಠೆಯಿಂದ ಬರೆದಿದ್ದಾರೆ. ಡೆಕ್ಕನ್ ಹೆರಾಲ್ಡ್ ಸ್ಥಾಪನೆ ಕುರಿತ ವಿವಾದದ ಬಗ್ಗೆಯೂ ಸಮಾಜವಿಜ್ಞಾನಿಯಾಗಿ, ಮಾನವಶಾಸ್ತ್ರಜ್ಞರಾಗಿ ವಿಶ್ಲೇಷಿಸಿದ್ದಾರೆ. ತಮ್ಮ ಅಜ್ಜನ ಬದುಕು ಮತ್ತು ಉದ್ಯಮಶೀಲತೆಯನ್ನು ಸಾರ್ವಜನಿಕರಿಗೆ ತೆರೆದಿಟ್ಟಿದ್ದಾರೆ. ಈ ಕೃತಿ ಆಕರ ಗ್ರಂಥವಾಗಿದೆ’ ಎಂದು ಅಭಿಪ್ರಾಯಪಟ್ಟರು. ಕೃತಿ ಮತ್ತು ಗುರುಸ್ವಾಮಿ ಅವರ ವ್ಯಕ್ತಿತ್ವ ಕುರಿತು ಮಾತನಾಡಿದ ಕೆ.ಎನ್. ಹರಿಕುಮಾರ್, ‘ನಮ್ಮ ಅಜ್ಜ ಮೂಲತಃ ಉದ್ಯಮಿ. ಪತ್ರಿಕೋದ್ಯಮ ಅವರ ಜೀವನದ ಭಾಗವಾಗಿತ್ತು. ಆದರೆ, ಪತ್ರಿಕೋದ್ಯಮವನ್ನು ಲಾಭದ ಉದ್ಯಮದ ದೃಷ್ಟಿಯಿಂದ ಆರಂಭಿಸಲಿಲ್ಲ. ಆಗಿನ ದಿನಗಳಲ್ಲಿ ದಿನಪತ್ರಿಕೆಗಳು ಲಾಭದಾಯಕವಾಗಿರಲಿಲ್ಲ. ಸುಮಾರು 10 ವರ್ಷ ನಷ್ಟ ಅನುಭವಿಸಬೇಕಾಯಿತು. ಅವರು ಬದುಕನ್ನು ಪ್ರೀತಿಸಿದ್ದರು ಮತ್ತು ಆನಂದಿಸಿದ್ದರು. ದಿನಪತ್ರಿಕೆಯು ಪ್ರಜಾಪ್ರಭುತ್ವದ ಆಶಯದ ರೂಪವಾಗಿದೆ ಎಂದು ನಂಬಿದ್ದರು. ಸಾಂಪ್ರದಾಯಿಕ ವ್ಯಕ್ತಿತ್ವ ಹೊಂದಿದ್ದ ಅವರು ಆಧುನಿಕ ಜಗತ್ತನ್ನು ಪ್ರವೇಶಿಸಿದ್ದರು’ ಎಂದು ನೆನಪಿಸಿಕೊಂಡರು.

ಗುರುಸ್ವಾಮಿ ಅವರು ಕುದುರೆ ರೇಸ್ ಮತ್ತು ಟರ್ಫ್ ಕ್ಲಬ್ ಜತೆ ಹೊಂದಿದ್ದ ಅವಿನಾಭಾವ ಸಂಬಂಧದ ಬಗ್ಗೆ ಪತ್ರಕರ್ತ, ವಕೀಲ ಪಿ.ಜಿ. ಬೆಳ್ಳಿಯಪ್ಪ ಅವರು ವಿಶ್ಲೇಷಿಸಿದರು.

‘ಡೆಕ್ಕನ್ ಹೆರಾಲ್ಡ್’ ಮತ್ತು ‘ಪ್ರಜಾವಾಣಿ’ ಬೆಳೆದು ಬಂದ ಹಾದಿ ಮತ್ತು ಈ ಪತ್ರಿಕೆಗಳು ಹೊಂದಿದ್ದ ಜನಪರ ಆಶಯಗಳು, ಸಮಾಜಮುಖಿ ಚಿಂತನೆ ಕುರಿತು ವಿಶ್ಲೇಷಿಸಿದ ಲೇಖಕಿ, ಇತಿಹಾಸ ತಜ್ಞೆ ಜಾನಕಿ ನಾಯರ್ ಅವರು, ರೈತ, ಕಾರ್ಮಿಕ, ಗೋಕಾಕ್ ಚಳವಳಿಗಳು ಸೇರಿದಂತೆ ವಿವಿಧ ಸಂದರ್ಭಗಳಲ್ಲಿ ಜನಾಭಿಪ್ರಾಯ ರೂಪಿಸಿದ್ದನ್ನು ವಿವರಿಸಿದರು.

ಸಿಬ್ಬಂದಿ ಕೊರತೆ ತಾಂತ್ರಿಕ ತೊಂದರೆಯಿಂದಾಗಿ ಬಸ್ ಸಂಚಾರ ಸ್ಥಗಿತ • ‘ಶಕ್ತಿ’ಯಿಂದಾಗಿ ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಮೂಲೆ ಸೇರಿರುವ 2,404 ಬಸ್‌ಗಳು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಸಾರಿಗೆ ಸಂಸ್ಥೆಗಳಲ್ಲಿ ಒಟ್ಟು 23,978 ಬಸ್‌ಗಳಿದ್ದು, ಅವುಗಳ ಪೈಕಿ ತಾಂತ್ರಿಕ ತೊಂದರೆ, ಸಿಬ್ಬಂದಿ ಕೊರತೆ ಮತ್ತಿತರ ಕಾರಣಗಳಿಂದ 2,404 ಬಸ್‌ಗಳು ಸಂಚರಿಸುತ್ತಿಲ್ಲ.

‘ಶಕ್ತಿ’ ಯೋಜನೆ ಜಾರಿಯಾಗಿ ಪ್ರಯಾಣಿಕರ ಸಂಖ್ಯೆ ಹೆಚ್ಚಿದ ಮೇಲೆ ಇಷ್ಟು ಬಸ್‌ಗಳು ಓಡಾಡದೇ ನಿಂತಿರುವುದು ಗಮನಕ್ಕೆ ಬಂದಿದೆ.

ಪ್ರತಿ ವರ್ಷ 1000 ಬಸ್ ಖರೀದಿಸಬೇಕು ಎಂಬ ನಿಯಮ ಇದೆ. ಕಳೆದ ಐದು ವರ್ಷಗಳಿಂದ ಖರೀದಿ ನಡೆದೇ ಇಲ್ಲ. ಹಿಂದೆ ರಾಜ್ಯದಲ್ಲಿ ಸಾರಿಗೆ ಬಸ್‌ನಲ್ಲಿ ದಿನಕ್ಕೆ 84.5 ಲಕ್ಷ ಜನ ಪ್ರಯಾಣಿಸುತ್ತಿದ್ದರು. ಶಕ್ತಿ ಯೋಜನೆ ಜಾರಿಯಾದ ಮೇಲೆ ನಿತ್ಯ ₹ 1.12 ಕೋಟಿ ಜನರು ಪ್ರಯಾಣಿಸುತ್ತಿದ್ದಾರೆ. ಈ ಪ್ರಮಾಣಕ್ಕೆ ಅನುಗುಣವಾಗಿ 3,000 ಹೆಚ್ಚುವರಿ ಬಸ್‌ಗಳ ಅವಶ್ಯಕತೆ ಇದೆ. ಇಷ್ಟು ಬಸ್‌ಗಳನ್ನು ಖರೀದಿಸಿದರೆ ಅವುಗಳ ನಿರ್ವಹಣೆಗೆ ಬೇಕಾದ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕಾಗುತ್ತದೆ.

ಎರಡು ತಿಂಗಳಲ್ಲಿ ಸಹಜ ಸ್ಥಿತಿಗೆ: ‘ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿರುವುದರಿಂದ ಸದ್ಯ ಸ್ವಲ್ಪ ಸಮಸ್ಯೆಯಾಗಿದೆ. ಎರಡು ತಿಂಗಳಲ್ಲಿ ಸಹಜ ಸ್ಥಿತಿಗೆ ಮರಳಲಿದೆ. ಆಗ ಎಷ್ಟು ಜನ ಪ್ರಯಾಣಿಸುತ್ತಾರೆ ಎಂದು ನೋಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಎಲ್ಲ ಮಾರ್ಗಗಳಲ್ಲಿ ಜನಸಂದಣಿ ಇಲ್ಲ. ಧರ್ಮಸ್ಥಳ ಸಹಿತ ಕೆಲವು ಪ್ರದೇಶಗಳಿಗೆ ಹೋಗುವ ಬಸ್‌ಗಳಲ್ಲಿ ಮಾತ್ರ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದು, ಪರಿಶೀಲಿಸಲಾಗುವುದು ಎಂದರು.

ಬಸ್ ಖರೀದಿ ಅಗತ್ಯ: ‘ಬಿಎಂಟಿಸಿಗೆ ಬಸ್ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. ಕೆಎಸ್‌ಆರ್‌ಟಿಸಿಗೆ ಬಸ್ ಖರೀದಿ ಆಗಲಿದೆ. ‘ಶಕ್ತಿ’ ಯೋಜನೆ ಜಾರಿಯಾದ ಮೇಲೆ ಪ್ರಯಾಣಿಕರ ಸಂಖ್ಯೆ ಹೆಚ್ಚಿರುವುದರಿಂದ ಹೆಚ್ಚುವರಿ ಬಸ್ ಅಗತ್ಯ ಇರುವುದು ನಿಜ. ಎಷ್ಟು ಬೇಕು ಎಂಬುದನ್ನು ಈಗಲೇ ತೀರ್ಮಾನಿಸಲು ಆಗುವುದಿಲ್ಲ. ಯಾವ ಮಾರ್ಗದಲ್ಲಿ ಯಾವ ಹೊತ್ತಿನಲ್ಲಿ ಜನಸಂದಣಿ ಹೆಚ್ಚಿರುತ್ತದೆ ಎಂಬುದನ್ನು ಪರಿಶೀಲಿಸಬೇಕು. ಈಗ ಕಾಲೇಜುಗಳು ಆರಂಭಗೊಂಡಿಲ್ಲ. ಕಾಲೇಜು ಆರಂಭಗೊಂಡಾಗ ಪ್ರಯಾಣಿಕರು ಎಷ್ಟು ಹೆಚ್ಚಾಗಬಹುದು? ಈಗ ಸಂಚರಿಸುತ್ತಿರುವ ಪ್ರಯಾಣಿಕರ ಸಂಖ್ಯೆ ಮುಂದೆ ಕಡಿಮೆ ಆಗಲಿದೆ. ಅದರ ಪ್ರಮಾಣ ಎಷ್ಟು? ಎಂಬುದನ್ನು ನೋಡಿ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬು ಕುಮಾರ್ ತಿಳಿಸಿದರು.



ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಹೊರಟಿರುವ ಪ್ರಯಾಣಿಕರು ಭಾರಿ ಪ್ರಮಾಣದಲ್ಲಿ ಇದ್ದಿದ್ದರಿಂದ ಬಸ್ ಹತ್ತಲು ನೂಕುನುಗ್ಗಲು ಉಂಟಾಯಿತು

ಬಸ್‌ಗಳ ವಿವರ

ಸಂಸ್ಥೆ	ಒಟ್ಟು ಬಸ್‌ಗಳು	ಚಾಲನೆಯಲ್ಲಿರುವ ಬಸ್‌ಗಳು
ಕೆಎಸ್‌ಆರ್‌ಟಿಸಿ	8,116	7,409
ಬಿಎಂಟಿಸಿ	6,688	5,557
ಎನ್‌ಡಬ್ಲ್ಯುಕೆಆರ್‌ಟಿಸಿ	4,858	4,542
ಕೆಕೆಆರ್‌ಟಿಸಿ	4,327	4,066
ಒಟ್ಟು	23,978	21,574

8,500 ಖಾಲಿ ಇರುವ ಚಾಲಕ, ನಿರ್ವಾಹಕರ ಹುದ್ದೆ

2,000 ಮೆಕ್ಯಾನಿಕ್‌ಗಳ ಹುದ್ದೆ

1,04,450 ನಾಲ್ಕು ನಿಗಮಗಳ ಒಟ್ಟು ಸಿಬ್ಬಂದಿ

ಬಾಗಿಲಿಲ್ಲದ ಬಸ್‌ನಿಂದ ಕೆಳಗೆ ಬಿದ್ದು ವೃದ್ಧ ಸಾವು

ಮೇಲುಕೋಟೆ (ಮಂಡ್ಯ ಜಿಲ್ಲೆ): ಇಲ್ಲಿನ ಚಕ್ಕನಹಳ್ಳಿ ಬಳಿ ಸೋಮವಾರ ಪ್ರಯಾಣಿಕರಿಂದ ತುಂಬಿ ತುಳುಕುತ್ತಿದ್ದ ರಾಜ್ಯ ಸಾರಿಗೆ ಸಂಸ್ಥೆ ಬಸ್ ಫುಟ್‌ಬೋರ್ಡ್ ಮೇಲೆ ನಿಂತು ಪ್ರಯಾಣಿಸುತ್ತಿದ್ದ ಅರಕನಕೆರೆ ಗ್ರಾಮದ ಚಲುವೇಗೌಡ (65) ಬಿದ್ದು ಸ್ಥಳದಲ್ಲೇ ಮೃತಪಟ್ಟರು. ಮಹಿಳೆಯರೇ ಹೆಚ್ಚಿದ್ದ ಬಸ್‌ನೊಳಗೆ ಹೋಗಲು ಅವರಿಗೆ ಆಗಿರಲಿಲ್ಲ.



ಚಲುವೇಗೌಡ

ಬಸ್ ಮೇಲುಕೋಟೆಯಿಂದ ಮಂಡ್ಯಕ್ಕೆ ತೆರಳುತ್ತಿತ್ತು. ಶಕ್ತಿ ಯೋಜನೆ ಜಾರಿಯಾದ ನಂತರ ಹೆಚ್ಚಿನ ಮಹಿಳೆಯರು ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯಕ್ಕೆ ಭೇಟಿ ನೀಡುತ್ತಿದ್ದಾರೆ.

ಬಸ್‌ಗೆ ಬಾಗಿಲು ಇಲ್ಲದ ಕಾರಣ ಅವರು ಅಪಾಯಕಾರಿ ಸ್ಥಿತಿಯಲ್ಲೇ ಪ್ರಯಾಣಿಸುತ್ತಿದ್ದರು. ಬಸ್ ಜಕ್ಕನಹಳ್ಳಿ ಬಳಿ ದಿಢೀರ್ ವೇಗ ಹೆಚ್ಚಿಸಿಕೊಂಡಿದ್ದರಿಂದ ಜಾರಿ ಬಿದ್ದು ಮೃತಪಟ್ಟರು.

‘ಡೋರ್ ಇಲ್ಲದ ಬಸ್ ಓಡಿಸುತ್ತಿರುವುದರಿಂದಲೇ ವೃದ್ಧ ಮೃತಪಟ್ಟರು’ ಎಂದು ಆರೋಪಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು. ‘ಬಾಗಿಲು ಇಲ್ಲದಿದರೂ ಆರ್‌ಟಿಒ ಅಧಿಕಾರಿಗಳು ಹೇಗೆ ಅನುಮತಿ ನೀಡಿದರು’ ಎಂದು ಪ್ರಶ್ನಿಸಿದರು. ಸ್ಥಳಕ್ಕೆ ಬಂದ ವಿಭಾಗೀಯ ನಿಯಂತ್ರಣಾಧಿಕಾರಿ ಎಸ್.ಬಿ ನಾಗಾರಾಜು ಪರಿಶೀಲನೆ ನಡೆಸಿ, ಮೃತ ವ್ಯಕ್ತಿಯ ಕುಟುಂಬ ಸದಸ್ಯರಿಗೆ ಸ್ಥಳದಲ್ಲೇ ₹ 25 ಸಾವಿರ ಪರಿಹಾರ ನೀಡಿದರು. ನಿಗಮದಿಂದ ₹ 2.5 ಲಕ್ಷ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

‘ಶಕ್ತಿ: ಒತ್ತಡ ತಡೆಗೆ ಚಿಂತನೆ’

ಬೆಂಗಳೂರು: ‘ಮಹಿಳೆಯರ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವ ‘ಶಕ್ತಿ’ ಯೋಜನೆಯಿಂದ ಸರ್ಕಾರಿ ಬಸ್‌ಗಳಲ್ಲಿ ಭಾರಿ ಒತ್ತಡ ಸೃಷ್ಟಿಯಾಗುವುದು ಮುಂದುವರಿದರೆ 15 ದಿನಗಳ ಬಳಿಕ ಕೆಲವು ಬದಲಾವಣೆಗಳನ್ನು ತರುವ ಚಿಂತನೆ ಇದೆ’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಎಲ್ಲರೂ ಒಂದೇ ಸಮಯದಲ್ಲಿ ತೀರ್ಥ ಕ್ಷೇತ್ರಗಳಿಗೆ ಹೊರಟಿರುವುದರಿಂದ ಬಸ್‌ನಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಇದನ್ನು ನಿಯಂತ್ರಿಸಲು ಮುಂಗಡ ಕಾಯ್ದಿರಿಸುವ ಪದ್ಧತಿಯನ್ನು ಜಾರಿಗೆ ತರಬೇಕು ಎಂಬ ಚಿಂತನೆ ಇದೆ. ಆಗ ಸೀಟು ಭರ್ತಿಯಿದ್ದಾಗ ಉಳಿದವರು ತಮ್ಮ ಪ್ರಯಾಣವನ್ನು ಮುಂದಕ್ಕೆ ಹಾಕಿಕೊಂಡು ಸೀಟು ಇದ್ದ ದಿನ ಹೋಗುತ್ತಾರೆ. ಈ ಮುಂಗಡ ಕಾಯ್ದಿರಿಸುವುದನ್ನೂ ಉಚಿತ ಮಾಡಬೇಕು. ಎಲ್ಲವನ್ನು ಗಮನಿಸಲು ಅಧಿಕಾರಿಗಳಿಗೆ ತಿಳಿಸಿದ್ದೇನೆ. ಮುಂದೆ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.

ವಾರದಲ್ಲೇ ಮಹಿಳೆಯರ ಉಚಿತ ಪ್ರಯಾಣಕ್ಕೆ ₹ 70 ಕೋಟಿಯಷ್ಟು ವೆಚ್ಚವಾಗಿದೆ. ಇನ್ನೂ ಹತ್ತು ವರ್ಷಗಳ ಕಾಲ ಈ ಯೋಜನೆ ಇರಲಿದೆ. ಮಹಿಳೆಯರು ಯೋಜನೆಯ ಅನುಕೂಲ ಪಡೆಯಲು ತರಾತುರಿ ಮಾಡಿ, ಒತ್ತಡ ಸೃಷ್ಟಿಸಬಾರದು’ ಎಂದರು.

‘ಶಕ್ತಿ’ಯಿಂದ ದೇವಸ್ಥಾನಗಳಿಗೆ ಭಕ್ತರ ಸಂಖ್ಯೆ ದ್ವಿಗುಣ: ಪ್ರಿಯಾಂಕ್

ಬೆಂಗಳೂರು: ‘ಶಕ್ತಿ’ ಯೋಜನೆಯಿಂದ ದೇವಸ್ಥಾನ ಮತ್ತು ಪೂಜಾ ಕೇಂದ್ರಗಳಿಗೆ ಬರುವ ಭಕ್ತರ ಸಂಖ್ಯೆ ದ್ವಿಗುಣವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಟ್ವೀಟ್ ಮಾಡಿದ್ದಾರೆ.

ಹಿಂದುತ್ವ ಜನರನ್ನು ಧರ್ಮದ ದಾರಿಯಲ್ಲಿ ಸಾಗಿಸುವ ಬದಲಿಗೆ ಸಮಾಜವನ್ನು ವಿಭಜಿಸುವ ದ್ವೇಷ ಮತ್ತು ಅಸೂಯೆಯ ಕೂಪಕ್ಕೆ ತಳ್ಳಿತ್ತು. ದ್ವೇಷಕ್ಕೆ ಜನರನ್ನು ದೇವರ ಬಳಿ ಕರೆದೊಯ್ಯಲು ಸಾಧ್ಯವಿಲ್ಲ. ಪ್ರೀತಿ ಹಾಗೂ ಕಾಂಗ್ರೆಸ್‌ನ ‘ಶಕ್ತಿ’ ಜನರನ್ನು ತಮ್ಮ ಪೂಜಾ ಸ್ಥಳಗಳಿಗೆ ಮತ್ತಷ್ಟು ಹತ್ತಿರ ಮಾಡಿದೆ ಎಂದು ಹೇಳಿದ್ದಾರೆ.

‘ರಾಜಕೀಯ ಆಡಳಿತ ಸಂಸ್ಥೆ ಸ್ಥಾಪನೆಗೆ ಚಿಂತನೆ’

ಪ್ರಜಾವಾಣಿ ವಾರ್ತೆ

ಮಂಗಳೂರು: ಯುವ ಸಮುದಾಯ ಪ್ರಜಾಪ್ರಭುತ್ವದ ಕುರಿತು ಅಧ್ಯಯನ ನಡೆಸಲು ಮತ್ತು ರಾಜಕೀಯದ ಬಗ್ಗೆ ತಿಳಿದುಕೊಳ್ಳಲು ಅನುಕೂಲ ಆಗುವಂತೆ ‘ಕರ್ನಾಟಕ ರಾಜಕೀಯ ಆಡಳಿತ ಸಂಸ್ಥೆ’ ಆರಂಭಿಸುವ ಚಿಂತನೆ ಇದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ನಗರದ ಪುರಭವನದಲ್ಲಿ ತುಳು ಪರಿಷತ್ ಸೋಮವಾರ ಆಯೋಜಿಸಿದ್ದ ನಾಗರಿಕ ಸನ್ಮಾನ ಸಮಾರಂಭಕ್ಕೂ ಮೊದಲು ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದ ಅವರು ಈ ವಿಷಯ ತಿಳಿಸಿದರು.

ರಾಜ್ಯದಲ್ಲಿ ವಿವಿಧ ವಿಷಯಗಳ ಅಧ್ಯಯನಕ್ಕೆ ಸಂಸ್ಥೆಗಳು ಇವೆ. ಆದರೆ ರಾಜಕೀಯದ ಬಗ್ಗೆ ತಿಳಿದುಕೊಳ್ಳಲು ಮತ್ತು ರಾಜಕಾರಣಿ ಆಗಲು ಇಷ್ಟಪಡುವವರಿಗೆ ತರಬೇತಿ ಸಿಗುತ್ತಿಲ್ಲ. ಹೀಗಾಗಿ ಈ ಯೋಜನೆಯ ಬಗ್ಗೆ ಚಿಂತನೆ ನಡೆದಿದೆ. ಸರ್ಕಾರದ ಯಾವುದಾದರೂ ಖಾಲಿ ಕಟ್ಟಡದಲ್ಲಿ ಸದ್ಯ ಸಂಸ್ಥೆಯನ್ನು ಆರಂಭಿಸಲಾಗುವುದು ಎಂದು ಅವರು ವಿವರಿಸಿದರು.

‘ಸ್ಪೀಕರ್ ಎಂದಿಗೂ ಪ್ರತಿಪಕ್ಷಗಳ ಮಿತ್ರ ಆಗಿರುತ್ತಾರೆ. ಆದರೂ ಅವರು ಆಡಳಿತ ಪಕ್ಷದ ಪರವಾಗಿ ಇರುವವರು ಎಂಬ ಸಂದೇಹ ವಿರೋಧ ಪಕ್ಷಗಳಿಗೆ ಇದ್ದೇ ಇರುತ್ತದೆ. ಇದನ್ನು ತೊಡೆದು ಹಾಕಲು ಪ್ರಯತ್ನಿಸಿ, ಸರ್ಕಾರ ಸಮರ್ಪಕವಾಗಿ ಕೆಲಸ ಮಾಡುವಂತೆ ಸೂಚಿಸುವೆ’ ಎಂದರು.

ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ: ಫಲಿತಾಂಶ ಇಂದು

ಬೆಂಗಳೂರು: 2023ನೇ ಸಾಲಿನ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಫಲಿತಾಂಶವು ಜೂನ್ 20ರಂದು (ಮಂಗಳವಾರ) ಪ್ರಕಟವಾಗಲಿದ್ದು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಜಾಲತಾಣವಾದ https://karresults.nic.inನಲ್ಲಿ ಬೆಳಿಗ್ಗೆ 11ರ ನಂತರ ವೀಕ್ಷಿಸಬಹುದು ಎಂದು ಮಂಡಳಿ ನಿರ್ದೇಶಕ (ಪರೀಕ್ಷೆಗಳು) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 23ರಿಂದ ಜೂನ್ 3ರ ತನಕ ಪೂರಕ ಪರೀಕ್ಷೆಗಳು ನಡೆದಿದ್ದವು.

ಕಾಡಾನೆ ದಾಳಿ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ತಾಲ್ಲೂಕಿನ ಅಚ್ಚಲು ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ಜಮೀನಿಗೆ ಹೊರಟಿದ್ದ ಅಕ್ಕ-ತಂಗಿಯ ಮೇಲೆ ಒಂಟಿ ಸಲಗ ದಾಳಿ ನಡೆಸಿದ್ದು, ಅಕ್ಕ ಜಯಮ್ಮ(50) ಮೃತಪಟ್ಟಿದ್ದಾರೆ. ತಂಗಿ ವೆಂಕಟ ಲಕ್ಷ್ಮಮ್ಮ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.



ಜಯಮ್ಮ

ಎಳ್ಳು ಕೊಯ್ಯಲು ಬೆಳಗ್ಗೆ ಜಮೀನಿಗೆ ಹೊರಟಿದ್ದ ಇವರ ಮೇಲೆ ಸಲಗ ದಾಳಿ ನಡೆಸಿದೆ. ಜಯಮ್ಮನನ್ನು ಸೊಂಡಲಿನಿಂದ ಎತ್ತಿ ನೆಲಕ್ಕೆ ಬಿಸಾಡಿ, ಕಾಲಿನಿಂದ ತುಳಿದು ಸಾಯಿಸಿದೆ. ಕಿರುಚಾಟ ಕೇಳಿ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಜನರು ನೆರವಿಗೆ ಧಾವಿಸಿದ್ದಾರೆ. ಜನರ ಗುಂಪು ಕಂಡು ಆನೆ ಕಾಡಿನತ್ತ ಓಡಿದೆ.

ಒಂದು ತಿಂಗಳ ಅಂತರದಲ್ಲಿ ರಾಮನಗರ ಜಿಲ್ಲೆಯ ಕಾಡಂಚಿನ ಭಾಗದಲ್ಲಿ ನಡೆದ ಕಾಡಾನೆಗಳ ದಾಳಿಯಲ್ಲಿ ಒಟ್ಟು ಮೂವರು ಸಾವಿಗೀಡಾಗಿದ್ದಾರೆ.

ಕನಕಗಿರಿ: ಬಾಲಕ ಸಾವು ವಾಂತಿ–ಭೇದಿ ಶಂಕೆ

ಕನಕಗಿರಿ (ಕೊಪ್ಪಳ ಜಿಲ್ಲೆ): ಇಲ್ಲಿನ ಎಸ್.ಸಿ. ಕಾಲೊನಿಯ ಬಾಲಕ ಕನಕರಾಯ (5) ಸೋಮವಾರ ಮೃತಪಟ್ಟಿದೆ. ವಾಂತಿ – ಭೇದಿಯಿಂದಾಗಿಯೇ ಮಗು ಮೃತಪಟ್ಟಿದೆ ಎಂದು ಪೋಷಕರು ಆರೋಪಿಸಿದ್ದಾರೆ.



ಕನಕರಾಯ

‘ಮಗುವಿಗೆ ಸೋಮವಾರ ಮೂರು ಬಾರಿ ವಾಂತಿ ಹಾಗೂ ಎರಡು ಬಾರಿ ಭೇದಿಯಾಗಿದ್ದರಿಂದ ಕನಕಗಿರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿತ್ತು. ವೈದ್ಯರು ಚಿಕಿತ್ಸೆ ನೀಡಿದ ಬಳಿಕ ಮಧ್ಯಾಹ್ನದ ವೇಳೆಗೆ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದರಿಂದ ಮನೆಗೆ ಕಳುಹಿಸಲಾಯಿತು. ಮಗುವಿನ ತಾಯಿ ಮನೆಯಲ್ಲಿ ಇಡ್ಲಿ ತಿನ್ನಿಸಿದ ನಂತರ ವಾಂತಿ ಮಾಡಿಕೊಂಡಿದೆ. ಮಗು ಬುದ್ಧಿಮಾಂದ್ಯವಿದ್ದು ಸಂಪೂರ್ಣವಾಗಿ ವಾಂತಿ ಮಾಡುವಂತೆ ತಾಯಿ ನೋಡಿಕೊಳ್ಳಬೇಕಾಗಿತ್ತು. ಬಳಿಕ ಬಾಯಿಯನ್ನು ಸ್ವಚ್ಛವಾಗಿ ತೊಳೆಸಬೇಕಿತ್ತು. ವಾಂತಿ ಪೂರ್ಣ ಪ್ರಮಾಣದಲ್ಲಿ ಆಗದ ಕಾರಣ ಅದು ಶ್ವಾಸಕೋಶದ ಒಳಗೆ ಹೋಗಿ ಮಗು ಮೃತಪಟ್ಟಿದೆ’ ಎಂದು ಡಿಎಚ್‌ಒ ಡಾ. ಅಲಕಾನಂದ ಮಳಗಿ ತಿಳಿಸಿದ್ದಾರೆ.

‘ವಾಂತಿ ಹಾಗೂ ಭೇದಿಯಿಂದಾಗಿ ಮಗು ನಿಶ್ಯಕ್ತಿಯಾಗಿತ್ತು. ಪೂರ್ಣ ಪ್ರಮಾಣದಲ್ಲಿ ಗುಣಮುಖವಾಗದಿದ್ದರೂ ಆರೋಗ್ಯ ಕೇಂದ್ರದಿಂದ ಮನೆಗೆ ಕಳುಹಿಸಿದ್ದು ಏಕೆ’ ಎಂದು ಮಗುವಿನ ಸಂಬಂಧಿ ಲಿಂಗಪ್ಪ ಪೂಜಾರ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ರತ್ನಂ ಪಾಂಡೆಯ, ‘ಬಾಲಕ ವಾಸವಿದ್ದ ಬಡಾವಣೆಯಲ್ಲಿ ಒಂದು ತಿಂಗಳಲ್ಲಿ ವಾಂತಿ–ಭೇದಿ ಪ್ರಕರಣಗಳು ಪತ್ತೆಯಾಗಿಲ್ಲ. ಪ್ರಾಥಮಿಕ ಮಾಹಿತಿ ಪ್ರಕಾರ ಶ್ವಾಸಕೋಶದ ಸಮಸ್ಯೆಯಿಂದಾಗಿ ಬಾಲಕ ಮೃತಪಟ್ಟಿದ್ದಾನೆ ಎಂದು ಗೊತ್ತಾಗಿದೆ. ಮರಣೋತ್ತರ ಪರೀಕ್ಷೆ ನಡೆಸಲು ಸೂಚಿಸಿದ್ದೇನೆ’ ಎಂದರು.

52 ವಿದ್ಯಾರ್ಥಿನಿಯರು ಅಸ್ವಸ್ಥ

ಪ್ರಜಾವಾಣಿ ವಾರ್ತೆ

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಕೋಡ್ಲಾದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ 52 ವಿದ್ಯಾರ್ಥಿನಿಯರು ಕಲುಷಿತ ನೀರು ಮತ್ತು ಊಟ ಸೇವಿಸಿ ಅಸ್ವಸ್ಥರಾಗಿದ್ದು, ಸೇಡಂ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಭಾನುವಾರ ರಾತ್ರಿ ಊಟ ಮಾಡಿದ ಬಳಿಕ 23 ವಿದ್ಯಾರ್ಥಿನಿಯರಲ್ಲಿ ಹೊಟ್ಟೆನೋವು, ತಲೆನೋವು ಕಾಣಿಸಿಕೊಂಡಿತು. ಕೆಲ ವಿದ್ಯಾರ್ಥಿನಿಯರಿಗೆ ವಾಂತಿಯಾಗಿದೆ.

‘ವಿದ್ಯಾರ್ಥಿನಿಯರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಬಹುತೇಕ ವಿದ್ಯಾರ್ಥಿನಿಯರು ವಾಂತಿ, ತಲೆನೋವು ಮತ್ತು ಹೊಟ್ಟೆನೋವಿನಿಂದ ಬಳಲಿದ್ದಾರೆ’ ಎಂದು ಆಸ್ಪತ್ರೆಯ ವೈದ್ಯ ಡಾ.ನಾಗನಾಥ ‘ಪ್ರಜಾವಾಣಿ’ಗೆ ತಿಳಿಸಿದರು. ಸೋಮವಾರ ಸಹ ಹಲವರು ಅಸ್ವಸ್ಥರಾಗಿದ್ದರಿಂದ ಮತ್ತೆ 29 ವಿದ್ಯಾರ್ಥಿನಿಯರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ವಿಷಯ ತಿಳಿದ ಪೋಷಕರು ಧಾವಿಸಿ ಬಂದು ಮಕ್ಕಳ ಆರೋಗ್ಯ ವಿಚಾರಿಸಿದರು.

‘ವಿದ್ಯಾರ್ಥಿಗಳು ಸೇವಿಸಿದ ಆಹಾರ, ನೀರು ಮತ್ತು ಇನ್ನಿತರ ಅಡುಗೆ ಪದಾರ್ಥಗಳ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಾಜಶೇಖರ ಮಾಲಿ ತಿಳಿಸಿದರು.

ತನಿಖೆ ನಡೆಸಲಾಗುತ್ತಿದ್ದು, ಕಾರಣ ಪತ್ತೆಯಾದ ಬಳಿಕ ಕ್ರಮ ಕೈಗೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಪಿ.ಶುಭ ತಿಳಿಸಿದರು.

ಹಲ್ಲಿ ಬಿದ್ದ ಸಾರು ಸೇವಿಸಿದ 23 ವಿದ್ಯಾರ್ಥಿಗಳು ಆಸ್ಪತ್ರೆಗೆ

ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಹಾರೂಗೊಪ್ಪದ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ಸೋಮವಾರ ಬೆಳಿಗ್ಗೆ ಹಲ್ಲಿ ಬಿದ್ದ ಸಾರು ಸೇವಿಸಿ 23 ವಿದ್ಯಾರ್ಥಿಗಳು ಅಸ್ವಸ್ಥಗೊಂಡು, ಇಂಚಲ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ.

‘ವಿದ್ಯಾರ್ಥಿಗಳಿಗೆ ಚಪಾತಿ, ಅನ್ನ, ಸಾರು ನೀಡಲಾಗಿತ್ತು. ಸಾರಿನಲ್ಲಿ ಹಲ್ಲಿ ಬಿದ್ದಿದ್ದರಿಂದ ಕೆಲ ಸಮಯದ ನಂತರ ಮಕ್ಕಳಿಗೆ ಹೊಟ್ಟೆ ನೋವು ಕಾಣಿಸಿಕೊಂಡಿತ್ತು’ ಎಂದು ನಿಲಯದ ಸಿಬ್ಬಂದಿ ತಿಳಿಸಿದರು.

ಸವದತ್ತಿ ಹಿಂದುಳಿದ ವರ್ಗಗಳ ಇಲಾಖೆ ತಾಲ್ಲೂಕು ಅಧಿಕಾರಿ ಆರ್.ಎಸ್.ಪಾಟೀಲ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ವಿಚಾರಿಸಿದರು.

ಗೃಹ ಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಕೆ
2ನೇ ದಿನವೂ ಸರ್ವರ್ ಸಮಸ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗೃಹ ಜ್ಯೋತಿ’ ಯೋಜನೆಗೆ ಅರ್ಜಿ ಸಲ್ಲಿಸಲು 2ನೇ ದಿನವಾದ ಸೋಮವಾರವೂ ರಾಜ್ಯದ ಹಲವು ಜಿಲ್ಲೆಗಳಲ್ಲಿ ಸರ್ವರ್ ಸಮಸ್ಯೆಯಿಂದ ವಿದ್ಯುತ್ ಗ್ರಾಹಕರು ಕಷ್ಟಪಟ್ಟರು. ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳ ಮೂಲಕ ಗ್ರಾಹಕರಿಗೆ ಅರ್ಜಿ ಸಲ್ಲಿಸಲು ಸಾಧ್ಯವಾಗಲಿಲ್ಲ.

ಇನ್ನು ಬೆಂಗಳೂರು ಒನ್, ಕರ್ನಾಟಕ ಒನ್, ಮಂಗಳೂರು ಒನ್, ಗ್ರಾಮ ಪಂಚಾಯಿತಿ, ನಾಡ ಕಚೇರಿಗಳಲ್ಲಿ ನೋಂದಣಿಗೆ ನೂಕುನುಗ್ಗಲು ಇತ್ತು. ಬೆಂಗಳೂರಿನ ಹಲವು ನೋಂದಣಿ ಕೇಂದ್ರಗಳಲ್ಲಿ ಗ್ರಾಹಕರ ದಟ್ಟಣೆ ಕಂಡುಬಂತು. ಬೆಳಿಗ್ಗೆಯೇ ಕೇಂದ್ರಗಳಿಗೆ ಬಂದಿದ್ದ ಗ್ರಾಹಕರು ಸರದಿಯಲ್ಲಿ ನಿಂತಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ‘ಕರ್ನಾಟಕ ಒನ್’ ಮತ್ತು ‘ಮಂಗಳೂರು ಒನ್’ ಕೇಂದ್ರಗಳಿಗೆ ಲಗ್ಗೆ ಇರಿಸಿದ ಮೆಸ್ಕಾಂ ಗ್ರಾಹಕರ ಪೈಕಿ, ಬಹುತೇಕರಿಗೆ ಸರ್ವರ್ ಸಮಸ್ಯೆಯಿಂದ ನೋಂದಣಿ ಸಾಧ್ಯವಾಗಲಿಲ್ಲ.

ಮಂಗಳೂರಿನಲ್ಲಿ ಆರು ಕರ್ನಾಟಕ ಒನ್ ಕೇಂದ್ರಗಳಿದ್ದು, ಎಲ್ಲ ಕಡೆಯೂ ಬೆಳಿಗ್ಗೆಯಿಂದ ಗ್ರಾಹಕರು ಸರದಿಯಲ್ಲಿ ನಿಂತಿದ್ದರು. ಮಧ್ಯಾಹ್ನದ ವರೆಗೆ ಆಧಾರ್ ಜೋಡಣೆ ಮತ್ತು ನೋಂದಣಿಯಾದರೂ ನಂತರ ಸರ್ವರ್ ಕೈಕೊಟ್ಟಿತು. ಗ್ರಾಮೀಣ ಪ್ರದೇಶಗಳಲ್ಲೂ ತಾಂತ್ರಿಕ ಸಮಸ್ಯೆ ತಲೆದೋರಿತ್ತು.

ಉಡುಪಿಯಲ್ಲಿ ಸರ್ವರ್ ಸಮಸ್ಯೆಯಿಂದ ಮಧ್ಯಾಹ್ನದ ವರೆಗೆ ಮಾತ್ರ ಸೇವೆ ಲಭ್ಯವಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸರ್ವರ್ ಸಮಸ್ಯೆ ಹೆಚ್ಚು ಕಾಡಲಿಲ್ಲ.

ತುಮಕೂರಿನಲ್ಲಿ ನೋಂದಣಿಗೆ ಜನರು ಇಡೀ ದಿನ ಕಷ್ಟಪಟ್ಟರು. ಸಂಜೆ 4 ಗಂಟೆಯ ನಂತರ ಅರ್ಧ ಗಂಟೆ ಕಾಲ ಮಾತ್ರ ನೋಂದಣಿ ಸಾಧ್ಯವಾಯಿತು. ನಂತರ, ಮತ್ತೆ ಸರ್ವರ್ ಸಮಸ್ಯೆ ಎದುರಾಯಿತು. ಮಾಲೂರಿನಲ್ಲಿ ಬೆಸ್ಕಾಂ ಕಾರ್ಯಾಲಯ, ಪಾಲನೆ ಶಾಖಾ ಕಚೇರಿಗಳು, ನಾಡ ಕಚೇರಿಗಳಿಗೆ ಬಂದಿದ್ದ ಗ್ರಾಹಕರು ಗಂಟೆಗಟ್ಟಲೆ ಕಾದು ಮನೆಗಳಿಗೆ ಮರಳಿದರು. ಕೋಲಾರದಲ್ಲಿ ಗ್ರಾಹಕರು ನಿರಾಸೆ ಅನುಭವಿಸಿದರು.

1.61 ಲಕ್ಷ ಮಂದಿ ನೋಂದಣಿ

200 ಯೂನಿಟ್ ವರೆಗೆ ಉಚಿತ ವಿದ್ಯುತ್ ಪಡೆಯಲು ರಾಜ್ಯದಲ್ಲಿ ಎರಡು ದಿನಗಳಲ್ಲಿ ಒಟ್ಟು 1,61,958 ಗ್ರಾಹಕರು ನೋಂದಾಯಿಸಿಕೊಂಡಿದ್ದಾರೆ.

ಸೋಮವಾರ ಒಂದೇ ದಿನ ಬೆಂಗಳೂರು ಒನ್, ಕರ್ನಾಟಕ ಒನ್ ಹಾಗೂ ಗ್ರಾಮ ಒನ್‌ನಲ್ಲಿ 1,06,958 ಗ್ರಾಹಕರು ನೋಂದಣಿ ಮಾಡಿಕೊಂಡರು.

‘ಪಂಚಾಯಿತಿ ಸದಸ್ಯರು ಅತಿಥಿ ಶಿಕ್ಷಕರಾಗುವಂತಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ ಸದಸ್ಯರನ್ನು ಅತಿಥಿ ಶಿಕ್ಷಕರನ್ನಾಗಿ ನೇಮಿಸುವಂತಿಲ್ಲ ಎಂದು ಶಿಕ್ಷಣ ಇಲಾಖೆಯ ಆಯುಕ್ತ ಆರ್.ವಿಶಾಲ್ ಸ್ಪಷ್ಟನೆ ನೀಡಿದ್ದಾರೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ದೊಡ್ಡರಾಂಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸ್ಥಳೀಯ ಗ್ರಾಮ ಪಂಚಾಯಿತಿ ಸದಸ್ಯೆ ಎಸ್.ಎಂ. ರಜನಿ ಅವರನ್ನು ಅತಿಥಿ ಶಿಕ್ಷಕರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಹಾಗೂ ಚಿಕ್ಕನಾಯಕನಹಳ್ಳಿ ಶಿಕ್ಷಣಾಧಿಕಾರಿಯವರು ಶಿಕ್ಷಣ ಇಲಾಖೆಯಿಂದ ಸ್ಪಷ್ಟೀಕರಣ ಕೇಳಿದ್ದರು.

ಇದಕ್ಕೆ ಉತ್ತರ ನೀಡಿರುವ ಅವರು, ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವ ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿದ್ದರೆ ಸದಸ್ಯರಾಗಲು ಅನರ್ಹರಾಗುತ್ತಾರೆ ಎಂದು ತಿಳಿಸಿದೆ.

ಹಿಂದೆ ಅಕ್ಷರ ದಾಸೋಹ ಅಡುಗೆ ಸಿಬ್ಬಂದಿ ಸ್ಥಳೀಯ ಚುನಾವಣೆಯಲ್ಲಿ ಸ್ಪರ್ಧಿಸಿ ಚುನಾಯಿತರಾದಾಗ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿತ್ತು ಎಂದು ಅವರ ಜ್ಞಾಪನ ಪತ್ರ ಉಲ್ಲೇಖಿಸಿದೆ.

ಗುಲಬರ್ಗಾ ವಿ.ವಿ ಘಟಿಕೋತ್ಸವ : ಡಾಕ್ಟರೇಟ್ ಪ್ರದಾನ

ಹಳಬರ ಹೆಸರು ಹೇಳಿದ ರಾಜ್ಯಪಾಲ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಗುಲಬರ್ಗಾ ವಿಶ್ವವಿದ್ಯಾಲಯದ 41ನೇ ಘಟಿಕೋತ್ಸವದಲ್ಲಿ ಸಭಿಕರನ್ನುದ್ದೇಶಿಸಿ ಮಾತನಾಡಿದ ವಿ.ವಿ. ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪ್ರಸಕ್ತ ಸಾಲಿನಲ್ಲಿ ಗೌರವ ಡಾಕ್ಟರೇಟ್ ಪಡೆದವರ ಹೆಸರಿನ ಬದಲು ಕಳೆದ ವರ್ಷ ಡಾಕ್ಟರೇಟ್ ಪಡೆದವರ ಹೆಸರುಗಳನ್ನು ವಾಚಿಸಿದರು.

ಇದರಿಂದಾಗಿ ಕುಲಪತಿ ಪ್ರೊ. ದಯಾನಂದ ಅಗಸರ ಹಾಗೂ ಅಧಿಕಾರಿಗಳು ಗೊಂದಲಕ್ಕೊಳಗಾದರು. ಈ ಬಾರಿ ಕಲಬುರಗಿಯ ಶಿಲ್ಪಕಲಾವಿದ ಮಾನಯ್ಯ ಬಡಿಗೇರ, ಬೀದರ್ ಜಿಲ್ಲೆಯ ಶಿಕ್ಷಣ ತಜ್ಞ ಹಾಗೂ ಸಾಹಿತಿ ತಾತ್ಯಾರಾವ ಪಾಟೀಲ ಹಾಗೂ ಬೆಂಗಳೂರಿನ ವಿಜ್ಞಾನಿ ಶ್ರೀನಾಥ ಡಿ.ಎನ್. ಅವರಿಗೆ ರಾಜ್ಯಪಾಲರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ‘ಬೆಲ್ದಾಳ ಸಿದ್ದರಾಮ ಶರಣರು, ಬೀದರ್‌ನ ಗುರಮ್ಮ ಸಿದ್ದಾರೆಡ್ಡಿ, ಕಲಬುರಗಿಯ ವೇಣುಗೋಪಾಲ ಹೆರೂರ, ಬೀದರ್‌ನ ಡಾ. ಬಸವರಾಜ ಪಾಟೀಲ ಅಷ್ಟೂರ, ಮಂಗಳೂರಿನ ಯೇನಪೋಯೆ ಅಬ್ದುಲ್ಲಾ ಕುನ್ಹಿ, ಬೆಂಗಳೂರಿನ ಡಾ. ಗೌತಮ ರಾಧಾಕೃಷ್ಣ ದೇಸಿರಾಜು ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಸಂತಸವಾಗುತ್ತಿದೆ’ ಎಂದರು. ವಾಸ್ತವವಾಗಿ ಕಳೆದ ವರ್ಷ ಗೆಹಲೋತ್ ಅವರೇ ಈ ಗಣ್ಯರಿಗೆ ಡಾಕ್ಟರೇಟ್ ನೀಡಿದ್ದರು. ಈ ಕುರಿತು ಮಾಹಿತಿ ನೀಡಿದ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು, ‘ಗೌರವ ಡಾಕ್ಟರೇಟ್ ಪುರಸ್ಕೃತರ ಪಟ್ಟಿಯನ್ನು ಜಿಲ್ಲಾಡಳಿತವೇ ರಾಜ್ಯಪಾಲರ ಕಚೇರಿಗೆ ಕಳುಹಿಸಿಕೊಟ್ಟಿತ್ತು. ಇದರಲ್ಲಿ ವಿ.ವಿ.ಯಿಂದ ತಪ್ಪಾಗಿಲ್ಲ’ ಎಂದರು.

ಎಸ್‌ಇಪಿ ಜಾರಿಗೆ ಬದ್ಧ: ಎಂ.ಸಿ. ಸುಧಾಕರ್

‘ಚುನಾವಣೆಯಲ್ಲಿ ನಮ್ಮ ಪಕ್ಷ ನೀಡಿದ ಭರವಸೆಯಂತೆ ರಾಷ್ಟ್ರೀಯ ಶಿಕ್ಷಣ ನೀತಿಯ (ಎನ್‌ಇಪಿ) ಬದಲಾಗಿ ರಾಜ್ಯದ ಶಿಕ್ಷಣ ನೀತಿ (ಎಸ್‌ಇಪಿ)ಯನ್ನು ತರಲು ಬದ್ಧವಾಗಿದೆ. ಆದರೆ, ಎನ್‌ಇಪಿ ಪಠ್ಯಕ್ರಮದ ಅನುಸಾರ ಈಗಾಗಲೇ ವಿದ್ಯಾರ್ಥಿಗಳು ಎರಡು ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದಾರೆ. ಹೀಗಾಗಿ, ಹೊಸ ನೀತಿಯನ್ನು ಹೇಗೆ ಅನುಷ್ಠಾನಗೊಳಿಸಬೇಕು ಎಂಬ ಬಗ್ಗೆ ವರದಿ ನೀಡಲು ತಜ್ಞರ ಉಪ ಸಮಿತಿಯನ್ನು ನೇಮಕ ಮಾಡಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಘಟಿಕೋತ್ಸವದ ಬಳಿಕ ತಿಳಿಸಿದರು.

ಲಿಥಿಯಂ ಕೋಶಗಳ ₹8,000 ಕೋಟಿ ಹೂಡಿಕೆಗೆ ಒಲವು

ಬೆಂಗಳೂರು: ವಿದ್ಯುತ್ ಚಾಲಿತ ವಾಹನಗಳಿಗೆ ಅಗತ್ಯವಾದ ಲಿಥಿಯಂ ಕೋಶಗಳ ತಯಾರಿಕೆಗೆ ಹೆಸರಾಗಿರುವ ಇಂಟರ್ ನ್ಯಾಷನಲ್ ಬ್ಯಾಟರಿ ಕಂಪನಿ (ಐಬಿಸಿ) ರಾಜ್ಯದಲ್ಲಿ ₹8,000 ಕೋಟಿ ಬಂಡವಾಳ ಹೂಡಲು ಆಸಕ್ತಿ ತೋರಿದೆ.

ಈ ಸಂಬಂಧ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಕಂಪನಿಯ ಪ್ರತಿನಿಧಿಗಳೊಂದಿಗೆ ಸೋಮವಾರ ಪ್ರಾಥಮಿಕ ಹಂತದ ಮಾತುಕತೆ ನಡೆಸಿದರು.

'ವಿದ್ಯುತ್ ಚಾಲಿತ ವಾಹನಗಳ ಕ್ಷೇತ್ರ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. ಆದರೆ, ನಮ್ಮಲ್ಲಿ ಲಿಥಿಯಂ ಕೋಶಗಳ ಉತ್ಪಾದನೆ ನಡೆಯುತ್ತಿಲ್ಲ.ಈಗ ಐಬಿಸಿ ಕಂಪನಿ ಮುಂದೆ ಬಂದಿದ್ದು, ಇದೊಂದು ಉತ್ತಮ ಬೆಳವಣಿಗೆ' ಎಂದು ಪಾಟೀಲ ಹೇಳಿದರು.

'ಈ ಕಂಪನಿಯು ದೇವನಹಳ್ಳಿ ಬಳಿ ಇರುವ ಐಟಿಐಆರ್ ಪಾರ್ಕ್‌ನಲ್ಲಿ 100 ಎಕರೆ ಜಮೀನು ಕೇಳಿದೆ. ಕಂಪನಿ ಕೇಳಿರುವ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೂ ವಿಸ್ತೃತವಾಗಿ ಚರ್ಚಿಸಲಾಗುವುದು' ಎಂದೂ ತಿಳಿಸಿದರು.

ಮಂಗಳವಾರ, ಜೂನ್ 20, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 170 | ಪುಟ 14
• www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಂಖ್ಯೆ-ಸುದ್ದಿ
ಕೇಂದ್ರ ಸರ್ಕಾರದ ಉದ್ದಿಮೆ ಸಂಸ್ಥೆಗಳಲ್ಲಿ ಗುತ್ತಿಗೆಗೆ ಆದ್ಯತೆ, ದಲಿತರ ನೌಕರಿಗೆ ಕತ್ತರಿ

'ರಾ' ಮುಖ್ಯಸ್ಥರಾಗಿ ರವಿ ಸಿನ್ಹಾ ನೇಮಕ 3A

ಚಂಡಮಾರುತದ ನಂತರ ವಾಯುಭಾರ ಕುಸಿತ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
63,168	18,755	₹61,250 (ಬೆಂಗಳೂರು)	₹74,800 (ಬೆಂಗಳೂರು)	81.93

ಇನ್ನೂ ಖಾತರಿಯಾಗದ ಅಕ್ಕಿ ಲಭ್ಯತೆ • ಛತ್ತೀಸಗಢ, ಪಂಜಾಬ್‌ನತ್ತ ಈಗ ರಾಜ್ಯದ ಚಿತ್ತ

ಅನ್ನಭಾಗ್ಯ: ಜು.1ರಿಂದ ಅನುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನ್ನ ಭಾಗ್ಯ' ಯೋಜನೆಯಡಿ ಪ್ರತಿ ತಿಂಗಳು ತಲಾ ಹತ್ತು ಕೆ.ಜಿ. ಅಕ್ಕಿ ವಿತರಿಸುವ 'ಗ್ಯಾರಂಟಿ' ಅನುಷ್ಠಾನ ಸರ್ಕಾರಕ್ಕೆ ಕಗ್ಗಂಟಾಗಿ ಪರಿಣಮಿಸಿದೆ. ಈ ಹಿಂದೆ ಘೋಷಿಸಿದಂತೆ ಜುಲೈ 1ರಿಂದಲೇ ಈ ಯೋಜನೆಗೆ ಚಾಲನೆ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲೇ ಅನುಮಾನ ಶುರುವಾಗಿವೆ.

ಕಾಂಗ್ರೆಸ್ ಪಕ್ಷವು ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದಂತೆ, ಅಂತ್ಯೋದಯ ಮತ್ತು ಆದ್ಯತಾ (ಬಿಪಿಎಲ್) ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಎಲ್ಲ ಸದಸ್ಯರಿಗೆ ಪ್ರತಿ ತಿಂಗಳಿಗೆ ತಲಾ 10 ಕೆ.ಜಿ. ಅಕ್ಕಿ ವಿತರಿಸಲು ರಾಜ್ಯ ಸರ್ಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ. ಯೋಜನೆ ಜಾರಿಗೆ ಪ್ರತಿ ತಿಂಗಳು 2.28 ಲಕ್ಷ ಟನ್ ಅಕ್ಕಿಯನ್ನು ಖರೀದಿಸಬೇಕಿದೆ. ಭಾರತೀಯ ಆಹಾರ ನಿಗಮ (ಎಫ್‌ಸಿಐ) ಅಕ್ಕಿ ಪೂರೈಕೆಗೆ ನಿರಾಕರಿಸಿರುವುದರಿಂದ 'ಅನ್ನ ಭಾಗ್ಯ' ಯೋಜನೆಯ 'ಗ್ಯಾರಂಟಿ' ಅನುಷ್ಠಾನದ ದಿನಾಂಕ ನಿಗದಿ ಮಾಡುವುದು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಮೂಲಗಳು ಹೇಳಿವೆ.

ಮುಕ್ತ ಮಾರುಕಟ್ಟೆ ವ್ಯಾಪಾರ ಯೋಜನೆ (ಒಎಂಎಸ್‌ಎಸ್) ಅಡಿಯಲ್ಲಿ ಎಫ್‌ಸಿಐನಿಂದ ಪ್ರತಿ ತಿಂಗಳು 2.28 ಲಕ್ಷ ಟನ್ ಅಕ್ಕಿಯನ್ನು ಖರೀದಿಸಿ, ಪಡಿತರ ಚೀಟಿದಾರರಿಗೆ ವಿತರಿಸುವ ಪ್ರಸ್ತಾವವಿತ್ತು. ಅದೇ ನಿರೀಕ್ಷೆಯಲ್ಲಿ ಜುಲೈ 1ರಿಂದಲೇ ಯೋಜನೆಗೆ ಚಾಲನೆ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಸಂಪುಟದ ಸದಸ್ಯರು ಘೋಷಣೆ ಮಾಡಿದ್ದರು.

4ನೇ ಪುಟ ನೋಡಿ

10 ಕೆ.ಜಿ. — ತಲಾ ಸದಸ್ಯನಿಗೆ ವಿತರಿಸಬೇಕಾದ ಅಕ್ಕಿ ಪ್ರಮಾಣ

2.28 ಲಕ್ಷ ಟನ್ — ಪ್ರತಿ ತಿಂಗಳು ಖರೀದಿಸಬೇಕಾದ ಅಕ್ಕಿ ಪ್ರಮಾಣ

₹842 ಕೋಟಿ — ತಲಾ ಹತ್ತು ಕೆ.ಜಿ. ವಿತರಿಸಿದರೆ ತಿಂಗಳಿಗೆ ಬೇಕಾಗುವ ಮೊತ್ತ

₹10,092 ಕೋಟಿ — ಅನ್ನ ಭಾಗ್ಯದ ಯೋಜನೆಗೆ ಒಂದು ವರ್ಷಕ್ಕೆ ಆಗುವ ವೆಚ್ಚ



ಎಫ್‌ಸಿಐ ಸಹಕರಿಸದಿದ್ದರೆ ಸಂಕಷ್ಟ?

'ಒಎಂಎಸ್‌ಎಸ್ ಅಡಿಯಲ್ಲಿ ಎಫ್‌ಸಿಐ ಅಕ್ಕಿ ಪೂರೈಸದಿದ್ದರೆ 'ಅನ್ನ ಭಾಗ್ಯ' ಗ್ಯಾರಂಟಿ ಯೋಜನೆಯ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ಸಂಕಷ್ಟಕ್ಕೆ ಸಿಲುಕಬಹುದು' ಎಂಬ ಆತಂಕ ಅಧಿಕಾರಿಗಳ ವಲಯದಲ್ಲಿದೆ.

'ಎಫ್‌ಸಿಐನಿಂದ ಅಕ್ಕಿ ಖರೀದಿಸಿದರೆ ಸಾಗಾಣಿಕೆ ವೆಚ್ಚ ಕಡಿಮೆ ಇರುತ್ತದೆ. ಎಫ್‌ಸಿಐ ಗೋದಾಮಿನಿಂದ ರಾಜ್ಯ ಸರ್ಕಾರದ ಸಗಟು ಗೋದಾಮಿಗೆ ಸಾಗಿಸುವ ವೆಚ್ಚ ಮಾತ್ರ ಇರುತ್ತದೆ. ಹೊರ ರಾಜ್ಯಗಳಿಂದ ಅಕ್ಕಿ ಖರೀದಿಸಿದರೆ ಸಾಗಣೆ ವೆಚ್ಚವೇ ಹತ್ತಾರು ಪಟ್ಟು ಹೆಚ್ಚಬಹುದು. ಖಾಸಗಿಯವರಿಂದ ಖರೀದಿಸಿದರೂ ದುಬಾರಿ ಆಗುತ್ತದೆ ಎನ್ನುತ್ತವೆ' ಮೂಲಗಳು.

'ಖಾಸಗಿಯವರಿಂದ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸಲು ಟೆಂಡರ್ ಪ್ರಕ್ರಿಯೆ ನಡೆಸಬೇಕಾಗುತ್ತದೆ. ಪ್ರತಿ ತಿಂಗಳು 2.28 ಲಕ್ಷ ಟನ್‌ನಷ್ಟು ಅಕ್ಕಿ ಪೂರೈಸುವ ಸಾಮರ್ಥ್ಯ ಒಬ್ಬರಿಗೇ ಇರುವುದಿಲ್ಲ. ಪೂರೈಕೆದಾರರನ್ನು ಗುರುತಿಸಿ, ಗುಣಮಟ್ಟದ ಅಕ್ಕಿ ಖರೀದಿಯೇ ಸವಾಲಾಗಬಹುದು' ಎನ್ನುತ್ತಾರೆ ಅಧಿಕಾರಿಗಳು.

ಕೇಂದ್ರದ ಬಳಿ ಅಕ್ಕಿ ಇದ್ದರೂ ನೀಡುತ್ತಿಲ್ಲ. ಅಕ್ಕಿ ವಿತರಣೆ ತಡವಾದರೆ ಅದಕ್ಕೆ ಬಿಜೆಪಿ, ಕೇಂದ್ರ ಸರ್ಕಾರ ಮತ್ತು ಪ್ರಧಾನಿ ನೇರ ಹೊಣೆ

ಕೆ.ಎಚ್. ಮುನಿಯಪ್ಪ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

ಎಫ್‌ಸಿಐನಿಂದಲೇ ಅಕ್ಕಿ ಖರೀದಿಸಬೇಕೆಂದೇನೂ ಇಲ್ಲ. ಕೊಟ್ಟ ಮಾತು ಉಳಿಸಿಕೊಳ್ಳಲಾಗದೆ ತಪ್ಪು ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದ್ದಾರೆ

ಬಸವರಾಜ ಬೊಮ್ಮಾಯಿ, ನಿಕಟಪೂರ್ವ ಮುಖ್ಯಮಂತ್ರಿ

ಕಾಂಗ್ರೆಸ್, ಬಿಜೆಪಿ ಪರಸ್ಪರ ಪ್ರತಿಭಟನೆ ಇಂದು

ಎಫ್‌ಸಿಐನಲ್ಲಿ ದಾಸ್ತಾನು ಇರುವ ಅಕ್ಕಿಯನ್ನು ರಾಜ್ಯದ 'ಅನ್ನ ಭಾಗ್ಯ' ಯೋಜನೆಗೆ ಪೂರೈಸಲು ನಿರಾಕರಿಸಿರುವ ಕೇಂದ್ರ ಸರ್ಕಾರದ ನಿರ್ಧಾರ ವಿರೋಧಿಸಿ ಕಾಂಗ್ರೆಸ್ ಪಕ್ಷವು ಮಂಗಳವಾರ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಲಿದೆ.

ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಪ್ರತಿಭಟನೆ ನಡೆಯಲಿದೆ. ಸಚಿವರು, ಶಾಸಕರು ಸೇರಿದಂತೆ ಕಾಂಗ್ರೆಸ್‌ನ ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಬಿಜೆಪಿಯಿಂದ ಹೋರಾಟ: ರಾಜ್ಯ ಸರ್ಕಾರದ ಜನ ವಿರೋಧ ನೀತಿಗಳನ್ನು ಖಂಡಿಸಿ ಮತ್ತು 10 ಕೆ.ಜಿ ಅಕ್ಕಿ ವಿತರಿಸಬೇಕು ಎಂದು ಆಗ್ರಹಿಸಿ ಮಂಗಳವಾರ ಬೆಂಗಳೂರು ಸೇರಿ 10 ಕಡೆಗಳಲ್ಲಿ ಹೋರಾಟ ನಡೆಸುವುದಾಗಿ ಶಾಸಕ ಆರ್.ಅಶೋಕ ತಿಳಿಸಿದರು.



ಆತುರ ಬೆಂಗಳೂರಿನಲ್ಲಿ ಗೃಹ ಜ್ಯೋತಿ ಯೋಜನೆ ನೋಂದಣಿಗಾಗಿ ಬಂದಿದ್ದ ಗ್ರಾಹಕರಿಗೆ ನೋಂದಣಿ ಕೇಂದ್ರದ ಸಿಬ್ಬಂದಿ ಸೋಮವಾರ ನೆರವಾದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

2ನೇ ದಿನವೂ ಸರ್ವರ್ ಸಮಸ್ಯೆ 11

ಬಿಬಿಎಂಪಿ ಚುನಾವಣೆ ವಿಳಂಬ ಸಾಧ್ಯತೆ

ವಾರ್ಡ್ ವಿಂಗಡಣೆಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆ ಹಿನ್ನೆಲೆಯಲ್ಲಿ ನಡೆಸಲಾಗಿದ್ದ ನಗರ ವ್ಯಾಪ್ತಿಯಲ್ಲಿನ ಕೆಲವು ವಿಧಾನಸಭೆ ಕ್ಷೇತ್ರಗಳ ವಾರ್ಡ್ ಮರು ವಿಂಗಡಣೆಯಲ್ಲಿ ಸಣ್ಣಪುಟ್ಟ ಲೋಪದೋಷಗಳಿವೆ. ಅವುಗಳನ್ನು ಸರಿಪಡಿಸಿದ ನಂತರವೇ ಚುನಾವಣೆ ನಡೆಸುವ ವಿಚಾರದಲ್ಲಿ ಮುಂದಡಿ ಇರಿಸಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಬಿಬಿಎಂಪಿ ವಾರ್ಡ್ ಮರುವಿಂಗಡಣೆ ಮಾಡಿ ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು 2022ರ ಜುಲೈ 14ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಎತ್ತಿಹಿಡಿದಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಮಾಜಿ ಮೇಯರ್ ಬಿ.ಎನ್. ಮಂಜುನಾಥ ರೆಡ್ಡಿ ಮತ್ತಿತರರು ಸಲ್ಲಿಸಿರುವ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

3A ಪುಟ ನೋಡಿ

ಖಾಲಿಸ್ತಾನ ಉಗ್ರ ಹರ್ದೀಪ್ ಸಿಂಗ್ ಕೆನಡಾದಲ್ಲಿ ಹತ್ಯೆ

ನವದೆಹಲಿ (ಪಿಟಿಐ): ಭಾರತಕ್ಕೆ ಬೇಕಾಗಿದ್ದ, ಖಾಲಿಸ್ತಾನ ಉಗ್ರ ಹರ್ದೀಪ್ ಸಿಂಗ್ ನಿಜ್ಜರ್‌ನನ್ನು ಕೆನಡಾದಲ್ಲಿ ಅಪರಿಚಿತ ವ್ಯಕ್ತಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆಂದು ಅಧಿಕಾರಿಗಳು ಸೋಮವಾರ ಹೇಳಿದ್ದಾರೆ.



ಕೆನಡಾದ ಸರ್ರೆ ನಗರದ ಗುರುದ್ವಾರದ ಹೊರಗೆ ಭಾನುವಾರ ರಾತ್ರಿ 8.27ರಲ್ಲಿ (ಸ್ಥಳೀಯ ಕಾಲಮಾನ) ನಿಜ್ಜರ್ ಮೇಲೆ ಅಪರಿಚಿತ ವ್ಯಕ್ತಿಗಳಿಬ್ಬರು ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ನಿಜ್ಜರ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಗುರುದ್ವಾರದ ಪಾರ್ಕಿಂಗ್ ಸ್ಥಳದಲ್ಲಿದ್ದ ಕಾರಿನಲ್ಲಿ ನಿಜ್ಜರ್ ಶವ ಪತ್ತೆಯಾಗಿದೆ. ನಿಜ್ಜರ್ ಮೂಲತಃ ಪಂಜಾಬ್‌ನ ಜಲಂಧರ್‌ನ ಭರ್ಸಿಂಗ್‌ಪುರ ಗ್ರಾಮದ ನಿವಾಸಿ.

9ನೇ ಪುಟ ನೋಡಿ

ಮಣಿಪುರ: ನಿಲ್ಲದ ಗುಂಡಿನ ದಾಳಿ 9

ಮಳೆ ಕೊರತೆ – ಮೋಡ ಬಿತ್ತನೆಯ ಚಿಂತನೆ ಸದ್ಯಕ್ಕಿಲ್ಲ: ಕೃಷ್ಣ ಬೈರೇಗೌಡ

ಜುಲೈನಲ್ಲಿ ಬರ ಘೋಷಣೆ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಈ ಬಾರಿ ಮಳೆ ಕೊರತೆಯಾಗಿದೆ. ಈಗಿರುವ ಪರಿಸ್ಥಿತಿ ಮುಂದುವರಿದರೆ ಜುಲೈ ಆರಂಭದಲ್ಲಿ ಬರ ಘೋಷಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ರಾಜ್ಯದಲ್ಲಿ ಮುಂಗಾರು ಮಳೆ ಕೊರತೆಯಿಂದಾಗಿ 806 ಜನವಸತಿ ಪ್ರದೇಶಗಳಲ್ಲಿ ನೀರಿನ ಅಭಾವ ಇದೆ. ಈ ಸ್ಥಳಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು ಕೊಳವೆಬಾವಿಗಳಿಂದ ನೀರು ಪೂರೈಸಲಾಗುತ್ತಿದೆ. ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲೂ ನೀರಿನ ಅಭಾವ ಇದೆ' ಎಂದು ಹೇಳಿದರು. 'ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ರಾಜ್ಯದಲ್ಲಿ ಉತ್ತಮ ಮಳೆಯಾಗಲಿದೆ. ಹೀಗಾಗಿ, ಸರ್ಕಾರ ಮೋಡ ಬಿತ್ತನೆ ಬಗ್ಗೆ ಸದ್ಯಕ್ಕೆ ಚಿಂತನೆ ಮಾಡಿಲ್ಲ' ಎಂದರು.

130 ಪ್ರಕರಣ ವಿಚಾರಣೆ ಬಾಕಿ: ಇಲಾಖೆಯಲ್ಲಿ 130 ವಿವಿಧ ಪ್ರಕರಣಗಳ ವಿಚಾರಣೆಗೆ ಅನುಮತಿ ನೀಡದ ಹಿಂದಿನ ಸರ್ಕಾರ, ಅವುಗಳನ್ನು ಬಾಕಿ ಉಳಿಸಿಕೊಂಡಿದೆ ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

4ನೇ ಪುಟ ನೋಡಿ

ಮಾರ್ಗಸೂಚಿ ದರ ಪರಿಷ್ಕರಣೆ ಸಾಧ್ಯತೆ

'ರಾಜ್ಯದಲ್ಲಿ 2018ರ ನಂತರ ಆಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಿಸಿಲ್ಲ. ಶೀಘ್ರವೇ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ಮಾರ್ಗಸೂಚಿ ದರ ಪರಿಷ್ಕರಣೆಯಾಗದ ಕಾರಣ ರೈತರಿಗೂ ಅನ್ಯಾಯವಾಗುತ್ತಿದೆ. ಆಸ್ತಿಗಳ ಮಾರುಕಟ್ಟೆ ಮೌಲ್ಯಕ್ಕೆ ತಕ್ಕಂತೆ ಮಾರ್ಗಸೂಚಿ ದರ ಬದಲಾವಣೆ ಮಾಡಲಾಗುವುದು' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮಾರುಕಟ್ಟೆ ದರಕ್ಕಿಂತ ಮಾರ್ಗಸೂಚಿ ದರ ಅತಿ ಕಡಿಮೆ ಇದ್ದರೆ ಕಪ್ಪು ಹಣದ ವಹಿವಾಟು ಹೆಚ್ಚಾಗುತ್ತದೆ. ಈ ಮೊದಲು ಪ್ರತಿ ಎರಡು ವರ್ಷಗಳಿಗೊಮ್ಮೆ ಮಾರ್ಗಸೂಚಿ ದರ ಪರಿಷ್ಕರಿಸಲಾಗುತ್ತಿತ್ತು. ಆದರೆ, ಕೋವಿಡ್ ಮತ್ತಿತರ ಕಾರಣಗಳಿಗೆ ಸ್ಥಗಿತಗೊಳಿಸಲಾಗಿತ್ತು' ಎಂದು ವಿವರಿಸಿದರು.

251 ಉಪನೋಂದಣಿ ಕಚೇರಿಗಳಲ್ಲಿ ಕಾವೇರಿ–2: 'ಪ್ರಸ್ತುತ ನೋಂದಣಿ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಲಾಗಿದ್ದು, ನಾಗರಿಕ ಸ್ನೇಹಿ ಹಾಗೂ ಸರಳ ಮತ್ತು ಸುಲಭವಾದ ಕಾವೇರಿ–2 ತಂತ್ರಾಂಶವನ್ನು ಇಲ್ಲಿಯವರೆಗೆ ರಾಜ್ಯದ 251 ಉಪನೋಂದಣಿ ಕಚೇರಿಗಳಲ್ಲಿ ಅಳವಡಿಸಲಾಗಿದೆ' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ರಾಜಸ್ವ ಸಂಗ್ರಹ (₹ಕೋಟಿಗಳಲ್ಲಿ)

ತಿಂಗಳು	2022-23	2023-24
ಏಪ್ರಿಲ್	1,276	1,273
ಮೇ	1,224	1,352
ಜೂನ್ (16ರವರೆಗೆ)	721	800

'ಕಾವೇರಿ–2 ಅಳವಡಿಸಿದ ಬಳಿಕ ನೋಂದಣಿ ಕಡಿಮೆಯಾಗಿಲ್ಲ. ವಾಡಿಕೆಗಿಂತ ಹೆಚ್ಚು ನೋಂದಣಿ ನಡೆಯುತ್ತಿವೆ. ಕಳೆದ ವರ್ಷ ಮೇ ತಿಂಗಳಲ್ಲಿ ಸಂಗ್ರಹಿಸಲಾದ ನೋಂದಣಿ ಶುಲ್ಕಕ್ಕಿಂತ ಈ ಬಾರಿ ಸುಮಾರು ₹130 ಕೋಟಿ ಹೆಚ್ಚು ಸಂಗ್ರಹಿಸಲಾಗಿದೆ. ಈ ವ್ಯವಸ್ಥೆಯಿಂದ ಸೋರಿಕೆ, ವಂಚನೆ ಮತ್ತು ಆಸ್ತಿಗಳ ಮೌಲ್ಯವನ್ನು ಕಡಿಮೆ ಮಾಡುವುದನ್ನು ತಡೆಗಟ್ಟಲು ಸಾಧ್ಯ. ಮತ್ತೊಬ್ಬರ ಹೆಸರಿನಲ್ಲಿರುವ ಆಸ್ತಿಗಳನ್ನು ಅಕ್ರಮಗಳ ಮೂಲಕ ನೋಂದಣಿ ಮಾಡುವುದನ್ನು ಸಹ ತಡೆಯಬಹುದು. ಯಾವುದೇ ರೀತಿ ಲೋಪವಾದರೂ ಉಪನೋಂದಣಾಧಿಕಾರಿಗಳೇ ಹೊಣೆಗಾರರಾಗಿರುತ್ತಾರೆ. ನಗರ ಪ್ರದೇಶಗಳಲ್ಲೂ ಆಸ್ತಿಗಳ ನೋಂದಣಿಗೆ ಕಾವೇರಿ–2 ತಂತ್ರಾಂಶ ವಿಸ್ತರಿಸುವ ಉದ್ದೇಶವಿದೆ. ಆದರೆ, ನಗರಸಭೆಗಳು ಇನ್ನೂ ಸಿದ್ಧವಾಗಿಲ್ಲ' ಎಂದು ತಿಳಿಸಿದರು.

ಅಮೆರಿಕಕ್ಕೆ ಇಂದು ಮೋದಿ

ಮಾನವ ಹಕ್ಕು ಸಂಘಟನೆಗಳಿಂದ ಪ್ರತಿಭಟನೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ನಾಲ್ಕು ದಿನಗಳ ಭೇಟಿಗೆ ಮಂಗಳವಾರ ಅಮೆರಿಕಕ್ಕೆ ತೆರಳುವರು.

ಭಾರತದಲ್ಲಿ ಪ್ರಜಾಪ್ರಭುತ್ವದ ಕಡೆಗಣನೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಆರೋಪ ಕುರಿತಂತೆ ಪ್ರವಾಸದ ವೇಳೆ ಕೆಲ ಸಂಘಟನೆಗಳು ಪ್ರತಿಭಟನೆ ನಡೆಸಬಹುದು ಎಂಬ ವರದಿಗಳನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ರಕ್ಷಣಾ ಕ್ಷೇತ್ರದ ಸಹಕಾರ ಬಲವರ್ಧನೆಗೆ ಆಶಾವಾದ ವ್ಯಕ್ತಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಪ್ರವಾಸದ ವಿವರ ನೀಡಿದ ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ ಅವರು, ಪ್ರಧಾನಿ ಭೇಟಿಯು ಉಭಯ ರಾಷ್ಟ್ರಗಳ ಬಾಂಧವ್ಯ ಬಲಪಡಿಸುವಲ್ಲಿ ಮೈಲಿಗಲ್ಲು ಆಗಲಿದೆ ಎನ್ನುವ ಮೂಲಕ 'ಸಕಾರಾತ್ಮಕ ಆಸಕ್ತ' ಅಂಶಗಳಿಗೆ ಹೆಚ್ಚಿನ ಆದ್ಯತೆ ನೀಡಿದರು.

'ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಜೋ ಬೈಡನ್ ನಡುವೆ ವಾಷಿಂಗ್ಟನ್ ಡಿ.ಸಿಯಲ್ಲಿ ನಡೆಯಲಿರುವ ಮಾತುಕತೆಯ ರಕ್ಷಣಾ ಕ್ಷೇತ್ರದಲ್ಲಿ



ಸಹಕಾರ ಬಲಪಡಿಸುವುದಷ್ಟೇ ಅಲ್ಲ, ಉಭಯ ದೇಶಗಳ ನಡುವೆ ಉದ್ಯಮ ಕ್ಷೇತ್ರದ ಪ್ರಗತಿ, ಸಹ ಉತ್ಪಾದನೆಗೂ ನೀಲನಕ್ಷೆ ನೀಡಲಿದೆ' ಎಂದು ಹೇಳಿದರು.

ಮೋದಿ ಪ್ರವಾಸದ ಅವಧಿಯಲ್ಲಿ ಅಲ್ಲಿನ ಹಲವು ಮಾನವ ಹಕ್ಕು ಸಂಘಟನೆಗಳು ನ್ಯೂಯಾರ್ಕ್, ವಾಷಿಂಗ್ಟನ್ ಡಿ.ಸಿ.ಯಲ್ಲಿ ಪ್ರತಿಭಟಿಸಲು ಉದ್ದೇಶಿಸಿವೆ. ಮಾನವ ಹಕ್ಕುಗಳ ಉಲ್ಲಂಘನೆ, ಧಾರ್ಮಿಕ ಸ್ವಾತಂತ್ರ್ಯ ಹತ್ತಿಕ್ಕುವ ಕುರಿತ ಆತಂಕವನ್ನು ಮೋದಿ ಅವರಿಗೆ ಮನವರಿಕೆ ಮಾಡುವಂತೆ ಬೈಡನ್ ಅವರಿಗೆ ಈ ಮೂಲಕ ಆಗ್ರಹಪಡಿಸುತ್ತಿವೆ. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಮತ್ತು ಹ್ಯೂಮನ್ ರೈಟ್ಸ್ ವಾಚ್ ಸಂಸ್ಥೆಗಳು 'ಗುಜರಾತ್‌ನಲ್ಲಿ 2002ರಲ್ಲಿ ನಡೆದ ಕೋಮುಗಲಭೆ ಸಂದರ್ಭದಲ್ಲಿ ಮೋದಿ ಪಾತ್ರ' ಕುರಿತಂತೆ ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶಿಸಲೂ ಯೋಜನೆ ಹಮ್ಮಿಕೊಂಡಿವೆ.

'ನಮಗೆ ವಿಶಾಲವಾದ ಸಕಾರಾತ್ಮಕ ಆಸಕ್ತಿ ಕುರಿತು ಅರಿವಿದೆ. ಸಾಕ್ಷ್ಯ ಆಧಾರಿತ, ಸಕಾರಾತ್ಮಕ ಅಂಶಗಳು ನಮ್ಮ ಸಂಬಂಧ ಗಟ್ಟಿಗೊಳಿಸಿವೆ ಎಂಬ ಅರಿವು ನಮಗಿದೆ' ಎಂದು ಸಂಭವನೀಯ ಪ್ರತಿಭಟನೆ ಕುರಿತ ಪ್ರಶ್ನೆಗೆ ಕ್ವಾತ್ರಾ ಪ್ರತಿಕ್ರಿಯಿಸಿದರು.

ಮೋದಿ ಅವರು ಪ್ರಧಾನಿಯಾದ ಬಳಿಕ ಅಮೆರಿಕಕ್ಕೆ ಹಲವು ಬಾರಿ ಪ್ರವಾಸ ತೆರಳಿದ್ದಾರೆ. ಇದು, ಅವರ ಮೊದಲ ಅಧಿಕೃತ ಭೇಟಿಯಾಗಿದೆ. ಭೇಟಿ ಅವಧಿಯಲ್ಲಿ ಅಧ್ಯಕ್ಷ ಜೋ ಬೈಡನ್ ಅವರೊಂದಿಗೆ ದ್ವಿಪಕ್ಷೀಯ ವ್ಯಾಪಾರ, ಹೂಡಿಕೆ ಬಾಂಧವ್ಯ ಹಾಗೂ ಸಂವಹನ, ಬಾಹ್ಯಾಕಾಶ ಮತ್ತು ಉತ್ಪಾದನೆ ಕ್ಷೇತ್ರದಲ್ಲಿ ಪಾಲುದಾರಿಕೆ ವೃದ್ಧಿ ಕುರಿತು ಚರ್ಚಿಸುವರು ಎಂದು ತಿಳಿಸಿದರು.

'ಅಮೆರಿಕ ಪ್ರವಾಸ ಬಳಿಕ ಪ್ರಧಾನಿ ಅವರು ಈಜಿಪ್ಟ್‌ಗೆ ಎರಡು ದಿನಗಳ ಭೇಟಿಗಾಗಿ ಇದೇ 24ರಂದು ತೆರಳುವರು' ಎಂದು ತಿಳಿಸಿದರು.

ಇನ್ನೊಂದು ಸುದ್ದಿ 8

ಗುಡಿ ಪೌಳಿಯಿಂದ ಕಲ್ಲಂಗಡಿ ಹಣ್ಣು ಬೀದಿಗೆ ಚೆಲ್ಲಿದ ಘಟನೆ ಇನ್ನೂ ಮಾಸಿಲ್ಲ

ವ್ಯಾಪಾರಿ ನಬೀಸಾಬ್ ಈಗ ವಾಚ್‌ಮನ್!

• ಬಿ.ಜೆ.ಧನ್ಯಪ್ರಸಾದ್

ಧಾರವಾಡ: ಶ್ರೀರಾಮಸೇನೆ ಸಂಘಟನೆ ಕಾರ್ಯಕರ್ತರು ಕಳೆದ ವರ್ಷ ತಮ್ಮ ಅಂಗಡಿ ಮೇಲೆ ದಾಳಿ ನಡೆಸಿ ಹಣ್ಣುಗಳನ್ನು ಬೀದಿಗೆ ಚೆಲ್ಲಿದ್ದ ಘಟನೆಯ ಬಳಿಕ ವ್ಯಾಪಾರಿ ನಬೀಸಾಬ್ ಗೌಸುಸಾಬ್ ಕಿಲ್ಲೇದಾರ ಅವರ ಬದುಕೂ ಚೆಲ್ಲಾಪಿಲ್ಲಿಯಾಗಿದೆ. 80ರ ಇಳಿವಯಸ್ಸಿನಲ್ಲಿ ಈ ವ್ಯಾಪಾರಿ ಜೀವನ ನಿರ್ವಹಣೆಗಾಗಿ ಈಗ ಕಾವಲುಗಾರ (ವಾಚ್‌ಮನ್) ಆಗಿದ್ದಾರೆ.

ನುಗ್ಗಿಕೇರಿಯ ಹನುಮಂತ ದೇವರ ಗುಡಿಯ ಪೌಳಿಯಲ್ಲಿ ನಬೀಸಾಬ್ ಅವರ ಕಲ್ಲಂಗಡಿ ಹಣ್ಣಿನ ಅಂಗಡಿ ಇತ್ತು. ವರ್ಷದ ಹಿಂದೆ ಅವರ ಅಂಗಡಿ ಮೇಲೆ ದಾಳಿ ನಡೆದಿತ್ತು. ಬಳಿಕ ಹಣ್ಣಿನ ವ್ಯಾಪಾರವನ್ನೇ ಬಿಟ್ಟುಕೊಟ್ಟಿದ್ದ ಅವರು, ಸದ್ಯ ಕೊಪ್ಪದಕೇರಿಯ ವಿಲ್ಲಾದಲ್ಲಿ ಕಾವಲುಗಾರನಾಗಿ ಕೆಲಸ ಮಾಡುತ್ತಿದ್ದಾರೆ.

ವಿಲ್ಲಾದ ಪಾರ್ಕಿಂಗ್ ಭಾಗದಲ್ಲಿ ಪಿಲ್ಲರ್‌ಗಳಿಗೆ ತಗಡು ಜೋಡಿಸಿ ನಿರ್ಮಿಸಿರುವ ಚಿಕ್ಕಗೂಡಿನಲ್ಲಿ ನಬೀಸಾಬ್ ಮತ್ತು ಪತ್ನಿ ಶಕಿನಾ ಬಾನು ಆಶ್ರಯ ಪಡೆದಿದ್ದಾರೆ. ಅವರ ಮೊಮ್ಮಕ್ಕಳು ಆಗಾಗ ಇಲ್ಲಿಗೆ ಬಂದು ಭೇಟಿಯಾಗುತ್ತಾರೆ.



ಧಾರವಾಡದ ಕೊಪ್ಪದಕೇರಿಯ ವಿಲ್ಲಾವೊಂದರ ಪಾರ್ಕಿಂಗ್ ಜಾಗದಲ್ಲಿ ನಬೀಸಾಬ್ ಮತ್ತು ಪತ್ನಿ ಶಕೀನಾ ಆಶ್ರಯ ಪಡೆದಿರುವುದು –ಪ್ರಜಾವಾಣಿ ಚಿತ್ರ/ ಬಿ.ಎಂ.ಕೇದಾರನಾಥ

ನಬೀಸಾಬ್ ಸಂಕಷ್ಟದ ದಿನಗಳನ್ನು ದೂಡುತ್ತಿದ್ದಾರೆ. ಅಹಿತಕರ ಘಟನೆಯ ನೆನಪು ಮಾಸಿಲ್ಲ. ಮತ್ತೆ ವ್ಯಾಪಾರ ಶುರುಮಾಡಲು ಅವ್ಯಕ್ತ ಭಯ ಒಂದೆಡೆಯಾದರೆ, ಬಂಡವಾಳದ ಕೊರತೆ ಇನ್ನೊಂದೆಡೆ. ಅದಕ್ಕೆ ಹಣ್ಣಿನ ವ್ಯಾಪಾರದಿಂದಲೇ ದೂರ ಉಳಿದಿದ್ದಾರೆ. ಬದುಕು ಕಟ್ಟಿಕೊಳ್ಳಲು ನೆರವು ಸಿಗಬಹುದೇ ಎಂಬ ನಿರೀಕ್ಷೆಯಲ್ಲಿ ಅವರು ಮತ್ತು ಕುಟುಂಬ ಇದೆ.

'ಕುಂದುಗೋಳ ತಾಲ್ಲೂಕಿನ ಬಿಲೆಬಾಳ ನಮ್ಮೂರು. ಧಾರವಾಡಕ್ಕೆ ಬಂದು 15 ವರ್ಷಗಳಾದವು. ಹೊಟ್ಟೆಪಾಡಿಗೆ ಹಣ್ಣಿನ ವ್ಯಾಪಾರ ಮಾಡುತ್ತಿದ್ದೆ. ಕಳೆದ ವರ್ಷ ನಡೆದ ಘಟನೆ ನಂತರ ವ್ಯಾಪಾರ ಕೈಬಿಟ್ಟಿರುವೆ' ಎಂದು ನಬೀಸಾಬ್ 'ಪ್ರಜಾವಾಣಿ'ಗೆ ತಿಳಿಸಿದರು.

'ಊರಿನಲ್ಲಿ ಸ್ವಲ್ಪ ಜಮೀನಿದೆ. ಅದರ ಮೇಲೆ ಸಾಲ ಪಡೆದಿರುವೆ. ಕಾವಲುಗಾರನಾಗಿ ಕೆಲಸ ಮಾಡುತ್ತಿದ್ದೇನೆ. ವಾರಕ್ಕೆ ₹1,500 ಪಗಾರ ಇದೆ. ಬಿದ್ದು ಕಾಲಿಗೆ ಸ್ವಲ್ಪ ಪೆಟ್ಟಾಗಿದೆ. ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಲು ಹಣ ಇಲ್ಲ. ಬದುಕು ಮೂರಾಬಟ್ಟೆಯಾಗಿದೆ' ಎಂದು ಅವರು ಗೋಳು ತೋಡಿಕೊಂಡರು. 'ನನಗೆ ಮೂವರು ಪುತ್ರರು ಇದ್ದಾರೆ. ಅವರ ಸಂಸಾರ ಬೇರೆಡೆ ಇದೆ. ಪತ್ನಿಯೊಂದಿಗೆ ಇಲ್ಲಿದ್ದೇನೆ. ಮತ್ತೆ ಹಣ್ಣಿನ ವ್ಯಾಪಾರ ಮಾಡುವ ಆಲೋಚನೆ ಇದೆ. ಆದರೆ, ಬಂಡವಾಳ ಇಲ್ಲ. ಸರ್ಕಾರ ನೆರವು ನೀಡಿದರೆ ಮರುಜೀವ ಸಿಕ್ಕಂತಾಗುತ್ತದೆ' ಎಂದು ಅವರು ಹೇಳಿದರು.

ಸಂಕಷ್ಟದಲ್ಲಿರುವ ನಬೀಸಾಬ್ ಅವರ ಕುಟುಂಬಕ್ಕೆ ಸರ್ಕಾರ ಪರಿಹಾರ ನೀಡಬೇಕು. ಕೋಮುದ್ವೇಷ ಹರಡುವ ಹುನ್ನಾರಗಳ ಮೇಲೆ ನಿಗಾ ಇಡಲು 'ಟಾಸ್ಕ್ ಫೋರ್ಸ್' ರಚಿಸಬೇಕು

ಬಸವರಾಜ ಸೂಳಿಬಾವಿ
ಸಂಚಾಲಕ, ಸಂವಿಧಾನ ಸಂರಕ್ಷಣಾ ವೇದಿಕೆ

ಶೆಟ್ಟರ್, ಬೋಸರಾಜು 'ಕೈ' ಅಭ್ಯರ್ಥಿಗಳು


ಪ್ರಜಾವಾಣಿ ವಾರ್ತೆ

ನವದೆಹಲಿ: ವಿಧಾನ ಪರಿಷತ್‌ನ ಮೂರು ಸ್ಥಾನಗಳಿಗೆ ಇದೇ 30ರಂದು ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಜಗದೀಶ ಶೆಟ್ಟರ್, ತಿಪ್ಪಣ್ಣಪ್ಪ ಕಮಕನೂರ ಹಾಗೂ ಸಚಿವ ಎನ್.ಎಸ್. ಬೋಸರಾಜು ಕಣಕ್ಕೆ ಇಳಿಯಲಿದ್ದಾರೆ.

ಲಕ್ಷ್ಮಣ ಸವದಿ, ಬಾಬುರಾವ್ ಚಿಂಚನಸೂರ ಹಾಗೂ ಆರ್.ಶಂಕರ್ ರಾಜೀನಾಮೆಯಿಂದ ತೆರವಾಗಿರುವ ಮೂರು ಸ್ಥಾನಗಳಿಗೆ ಈ ಉಪಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಕೆಗೆ ಮಂಗಳವಾರ ಕೊನೆಯ ದಿನ. ಮೂರೂ ಸ್ಥಾನಗಳ ಚುನಾವಣೆಗೆ ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸಲಾಗಿದೆ. ವಿಧಾನಸಭೆಯಿಂದ ನಡೆಯಲಿರುವ ಚುನಾವಣೆ ಇದಾಗಿದ್ದರಿಂದ 135 ಸದಸ್ಯ ಬಲವನ್ನು ಹೊಂದಿರುವ ಕಾಂಗ್ರೆಸ್ ಮೂರೂ ಸ್ಥಾನಗಳಲ್ಲಿ ನಿರಾಯಾಸವಾಗಿ ಗೆಲ್ಲಲಿದೆ. ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸದಿರಲು ನಿರ್ಧರಿಸಿದೆ. ಬಿಜೆಪಿ ಸಹ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದುಅನುಮಾನ.



ಜಗದೀಶ ಶೆಟ್ಟರ್



ಬೋಸರಾಜು



ತಿಪ್ಪಣ್ಣಪ್ಪ ಕಮಕನೂರ

ಬಿಜೆಪಿ ಟಿಕೆಟ್ ಕೈತಪ್ಪಿದ ಕಾರಣಕ್ಕೆ ವಿಧಾನಸಭಾ ಚುನಾವಣೆಗೆ ಮುನ್ನ ಶೆಟ್ಟರ್ ಅವರು ಕಾಂಗ್ರೆಸ್‌ಗೆ ಸೇರಿದ್ದರು. ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದಲ್ಲಿ ಸ್ಪರ್ಧಿಸಿ ಅವರು ಸೋತಿದ್ದರು. ಶೆಟ್ಟರ್ ಆಯ್ಕೆಗೊಂಡ ಬಳಿಕ ಪರಿಷತ್‌ನಲ್ಲಿ 2028ರ ಜೂನ್ 14ರ ವರೆಗೆ ಸದಸ್ಯರಾಗಿರಲಿದ್ದಾರೆ.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಂಚಾರ ಪರಿಸ್ಥಿತಿ ಅವಲೋಕನ, ದಟ್ಟಣೆ ನಿಯಂತ್ರಣಕ್ಕೆ ಕ್ರಮ

20 ಜಂಕ್ಷನ್‌ಗಳಲ್ಲಿ ಡ್ರೋನ್ ಬಳಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದ 20 ಜಂಕ್ಷನ್‌ಗಳಲ್ಲಿ ನಿತ್ಯವೂ ಉಂಟಾಗುವ ಸಂಚಾರ ದಟ್ಟಣೆ ನಿಯಂತ್ರಿಸಲು ಮುಂದಾಗಿರುವ ಪೊಲೀಸರು, ಜಂಕ್ಷನ್‌ಗಳಲ್ಲಿ ಸೋಮವಾರ ಡ್ರೋನ್ ಹಾರಿಸಿ ಪರಿಸ್ಥಿತಿ ಅವಲೋಕನ ನಡೆಸಿದರು.

'ನಗರದ ಸಂಚಾರ ದಟ್ಟಣೆಯಿಂದ ಜನ ಬೇಸತ್ತಿದ್ದಾರೆ. ದಟ್ಟಣೆ ನಿಯಂತ್ರಿಸಲು ತ್ವರಿತ ಕ್ರಮ ಕೈಗೊಳ್ಳಿ' ಎಂದು ಗೃಹ ಸಚಿವ ಜಿ. ಪರಮೇಶ್ವರ್ ಅವರು ಇತ್ತೀಚೆಗಷ್ಟೇ ಪೊಲೀಸರಿಗೆ ಸೂಚನೆ ನೀಡಿದ್ದರು. ಇದರ ಬೆನ್ನಲ್ಲೇ 20 ಜಂಕ್ಷನ್‌ಗಳ ಪಟ್ಟಿ ಮಾಡಿರುವ ಸಂಚಾರ ಪೊಲೀಸರು, ಅಲ್ಲಿಯ ದಟ್ಟಣೆಗೆ ಪರಿಹಾರ ಕಂಡು ಹಿಡಿಯುತ್ತಿದ್ದಾರೆ.

ಸುರಕ್ಷಿತ ನಗರ ಯೋಜನೆಯಡಿ ಎಂಟು ಡ್ರೋನ್ ಕ್ಯಾಮೆರಾಗಳನ್ನು ಖರೀದಿಸಲಾಗಿದೆ. ಅದರಲ್ಲಿ ನಾಲ್ಕು ಕ್ಯಾಮೆರಾಗಳನ್ನು ಸಂಚಾರ ಪೊಲೀಸರಿಗೆ ನೀಡಲಾಗಿದೆ. ಅದೇ ಡ್ರೋನ್‌ಗಳನ್ನು ಸಂಚಾರ ಪೊಲೀಸರು ಸೋಮವಾರ ಪ್ರಾಯೋಗಿಕವಾಗಿ ಬಳಕೆ ಮಾಡಿದರು. ಯಾವ ರಸ್ತೆಯಲ್ಲಿ ಎಷ್ಟು ದಟ್ಟಣೆ ಇದೆ? ಅದಕ್ಕೆ ಕಾರಣವೇನು? ಎಂಬುದನ್ನು ದೃಶ್ಯಗಳ ಸಮೇತ ಸೆರೆ ಹಿಡಿದರು.

'ಹೆಬ್ಬಾಳ, ಗೊರಗುಂಟೆಪಾಳ್ಯ, ಟಿನ್ ಫ್ಯಾಕ್ಟರಿ, ಬನಶಂಕರಿ, ಸಾರಕ್ಕಿ ಜಂಕ್ಷನ್, ಇಬ್ಬಲೂರು, ಟ್ರಿನಿಟಿ ವೃತ್ತ, ಕೆ.ಆರ್. ವೃತ್ತ ಸೇರಿ 20 ಜಂಕ್ಷನ್‌ಗಳಲ್ಲಿ ಡ್ರೋನ್ ಹಾರಿಸಿ ಮಾಹಿತಿ ಕಲೆ ಹಾಕಲಾಗಿದೆ. ದಟ್ಟಣೆ ತಡೆಯಲು ಕೆಲ ಪ್ರಾಥಮಿಕ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆ. ಶಾಶ್ವತ ಪರಿಹಾರಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಗಳು ಸಂಚಾರ ನಿರ್ವಹಣಾ ಕೇಂದ್ರದ (ಟಿಎಂಸಿ) ಸರ್ವರ್‌ಗೆ ರವಾನೆಯಾಗಲಿದೆ. ಡ್ರೋನ್ ಬಳಕೆ ಬಗ್ಗೆ ಸಿಬ್ಬಂದಿಗೆ ಈಗಾಗಲೇ ತರಬೇತಿ ನೀಡಲಾಗಿದೆ' ಎಂದು ಹೇಳಿದರು.

ರಾಗಿ, ಜೋಳ ಖರೀದಿಗೆ ಆಗ್ರಹ

ಬೆಂಗಳೂರು: ಅನ್ನಭಾಗ್ಯ ಯೋಜನೆಗೆ ರಾಗಿ ಮತ್ತು ಜೋಳವನ್ನು ನಮ್ಮ ರೈತರಿಂದ ಖರೀದಿಸಿ ಬಳಸಿಕೊಳ್ಳಬೇಕು ಎಂದು ಕೃಷಿ ಬೆಲೆ ಆಯೋಗದ ಮಾಜಿ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಸಲಹೆ ನೀಡಿದ್ದಾರೆ.

ಅಕ್ಕಿಯನ್ನು ಒದಗಿಸಲು ಕೇಂದ್ರ ನಿರಾಕರಿಸಿದೆ. ಅದಕ್ಕೆ ಬದಲಿಯಾಗಿ ರಾಗಿ, ಜೋಳವನ್ನು ನೀಡಬೇಕು. ಸದ್ಯಕ್ಕೆ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ರಾಗಿ, ಜೋಳ ಸಿಗದೇ ಇರಬಹುದು. ಸ್ವಾಮಿನಾಥನ್ ಸಮಿತಿಯ ಶಿಫಾರಸಿನಂತೆ ಬೆಂಬಲ ಬೆಲೆಯ ಆಧಾರದಲ್ಲಿ ಖರೀದಿಸುವ ಆಶ್ವಾಸನೆ ನೀಡಿದರೆ ರೈತರು ಮುಂಗಾರಿನಲ್ಲಿ ಬೆಳೆಯಬಹುದು ಎಂದು ತಿಳಿಸಿದ್ದಾರೆ.

ಪಡಿತರ ಅಕ್ಕಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವ ಆರೋಪವೂ ಇದೆ. ರಾಗಿ, ಜೋಳ ಖರೀದಿಯಿಂದ ಅದಕ್ಕೆ ಕಡಿವಾಣ ಬೀಳಲಿದೆ. ಅಪೌಷ್ಟಿಕ ಸಮಸ್ಯೆಯನ್ನು ಹೋಗಲಾಡಿಸಲೂ ಉಪಯೋಗವಾಗಲಿದೆ ಎಂದರು.

ಟಿಟಿಕೆ ಪ್ರೆಸ್ಟೀಜ್‌ನಿಂದ ಹೊಸ ಉತ್ಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಟಿಕೆ ಪ್ರೆಸ್ಟೀಜ್ ಕಂಪನಿಯು ಹಾರ್ಡ್ ಅನೋಡೈಜ್ಡ್ 'ಸ್ವಚ್ಛ್' ಪ್ರೆಶರ್ ಕುಕ್ಕರ್ ಮತ್ತು ನಕ್ಷತ್ರ ಹಾರ್ಡ್ ಅನೋಡೈಜ್ಡ್ ಡ್ಯುಯೊ ಸ್ವಚ್ಛ್ ಪ್ರೆಶರ್ ಕುಕರ್ ಎನ್ನುವ ಎರಡು ಹೊಸ ಕುಕ್ಕರ್‌ಗಳನ್ನು ಬಿಡುಗಡೆ ಮಾಡಿದೆ. ನಕ್ಷತ್ರ ಸ್ವಚ್ಛ್ 2 ಲೀಟರ್ ಮಾದರಿಯ ಬೆಲೆ ₹1850. ಪಾಪ್ಯುಲರ್ ಸ್ವಚ್ಛ್ 2 ಲೀಟರ್ ಮಾದರಿಯ ಬೆಲೆ ₹1,750 ಎಂದು ಪ್ರಕಟಣೆ ತಿಳಿಸಿದೆ.

ನಡ್ಡಾ, ಮಾಳವೀಯ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಆ ಪಕ್ಷದ ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಘಟಕದ ಮುಖ್ಯಸ್ಥ ಅಮಿತ್ ಮಾಳವೀಯ ತಿರುಚಿದ ವಿಡಿಯೊ ತುಣುಕನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುವ ಮೂಲಕ ಕಾಂಗ್ರೆಸ್ ಪಕ್ಷದ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಕೆಪಿಸಿಸಿ ಸಂವಹನ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಅವರೊಂದಿಗೆ ಪೊಲೀಸ್ ಠಾಣೆಗೆ ಬಂದ ಅವರು, ಬಿಜೆಪಿ ನಾಯಕರ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿ ದೂರು ಸಲ್ಲಿಸಿದರು. ಚಂಡೀಗಢದ ಬಿಜೆಪಿ ಮಾಹಿತಿ ತಂತ್ರಜ್ಞಾನ ಘಟಕದ ಅಧ್ಯಕ್ಷ ಅರುಣ್ ಸೂದ್ ವಿರುದ್ಧವೂ ಕ್ರಮಕ್ಕೆ ಆಗ್ರಹಿಸಿದರು.

'ಅಮಿತ್ ಮಾಳವೀಯ ಅವರು ಜೂನ್ 17ರಂದು ತಮ್ಮ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ತಿರುಚಿದ ವಿಡಿಯೊ ತುಣುಕನ್ನು ಹಂಚಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷ ದೇಶದ್ರೋಹಿ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದೆ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಿದೇಶಗಳಿಗೆ ಹೋಗಿ ಭಾರತದ ವಿರುದ್ಧ ಚಟುವಟಿಕೆ ನಡೆಸುತ್ತಿದ್ದಾರೆ ಎಂಬ ಆರೋಪ ಮಾಡಿದ್ದಾರೆ. ಈ ರೀತಿ ಸುಳ್ಳು ಆರೋಪ ಮಾಡಿರುವವರ ವಿರುದ್ಧ ಎಫ್‌ಐಆರ್ ದಾಖಲಿಸಿ, ಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ದೂರು ಸಲ್ಲಿಸಿದ ಬಳಿಕ ಪತ್ರಕರ್ತರ ಜತೆ ಮಾತನಾಡಿದ ಪ್ರಿಯಾಂಕ್, 'ಬಿಜೆಪಿಯ ಸುಳ್ಳಿನ ಕೈಗಾರಿಕೆಯನ್ನು ಬಂದ್ ಮಾಡುತ್ತೇವೆ. ಅಮಿತ್ ಮಾಳವೀಯ ಅವರು ಬೆಂಗಳೂರಿಗೆ ಬಂದು ಕಾಂಗ್ರೆಸ್ ವಿರುದ್ಧದ ಆರೋಪ ಸಾಬೀತು ಮಾಡಲಿ. ಇಲ್ಲವಾದರೆ ಕ್ಷಮೆ ಕೇಳಿ, ಮುಂದೆ ಈ ರೀತಿ ಮಾಡುವುದಿಲ್ಲ ಎಂಬ ಮುಚ್ಚಳಿಕೆ ಬರೆದುಕೊಡಲಿ' ಎಂದರು.

ಟಿಕೆಟ್ ರಹಿತ ಪ್ರಯಾಣ: 3,315 ಮಂದಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿಯಲ್ಲಿ ಮೇನಲ್ಲಿ ಟಿಕೆಟ್ ರಹಿತವಾಗಿ ಪ್ರಯಾಣಿಸಿದ 3,315 ಪ್ರಯಾಣಿಕರಿಗೆ ದಂಡ ವಿಧಿಸಲಾಗಿದೆ.

ಮೇನಲ್ಲಿ 14,710 ಟ್ರಿಪ್‌ಗಳನ್ನು ತಪಾಸಣೆ ನಡೆಸಲಾಗಿತ್ತು. ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 3,315 ಪ್ರಯಾಣಿಕರು ಪತ್ತೆಯಾಗಿದ್ದರು. ಅವರಿಂದ ₹6,62,260 ದಂಡ ವಸೂಲಿ ಮಾಡಲಾಯಿತು. ಸಂಸ್ಥೆಯ ನಿರ್ವಾಹಕರ ವಿರುದ್ಧ 1,288 ಪ್ರಕರಣಗಳನ್ನು ದಾಖಲಿಸಲಾಗಿದೆ.

ಮಹಿಳಾ ಪ್ರಯಾಣಿಕರಿಗೆಂದೇ ಮೀಸಲಾಗಿರುವ ಆಸನಗಳಲ್ಲಿ ಕುಳಿತು ಪ್ರಯಾಣಿಸಿದ 344ಪುರುಷ ಪ್ರಯಾಣಿಕರಿಗೆ ₹34,400 ದಂಡ ವಿಧಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಅಕ್ಕಿ ನೀಡದ ಕೇಂದ್ರ: ಸಮಾನ ಮನಸ್ಕರ ಖಂಡನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜನಸಂಖ್ಯೆಯಲ್ಲಿ ಶೇ 30ರಷ್ಟು ಜನರಿಗೆ ಆಹಾರದ ಅಭದ್ರತೆ
- ಕೂಡಲೇ ಅಕ್ಕಿ ಬಿಡುಗಡೆ ಮಾಡುವಂತೆ ಒತ್ತಾಯ
- ರಾಜ್ಯಕ್ಕೆ ಅಗತ್ಯವಿರುವ 1.66 ಲಕ್ಷ ಟನ್ ಹೆಚ್ಚುವರಿ ಅಕ್ಕಿ ಕೊಡಲು ಕಷ್ಟವೇನಿಲ್ಲ

ಬೆಂಗಳೂರು: ಆಹಾರ ನಿಗಮದಲ್ಲಿ ಹೆಚ್ಚುವರಿ ಧಾನ್ಯಗಳಿದ್ದರೂ ಕರ್ನಾಟಕಕ್ಕೆ ಪೂರೈಸದೇ ಕೇಂದ್ರ ಸರ್ಕಾರ ರಾಜಕೀಯಗೊಳಿಸಿದೆ ಎಂದು ಸಮಾನ ಮನಸ್ಕರ ಒಕ್ಕೂಟ ಆಕ್ರೋಶ ವ್ಯಕ್ತಪಡಿಸಿದೆ.

ಸಂವಿಧಾನದ ಒಕ್ಕೂಟ ತತ್ವಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರಗಳು ಸಲ್ಲಿಸುವ ಮನವಿಗಳಿಗೆ ಕೇಂದ್ರ ಸರ್ಕಾರ ಪೂರಕವಾಗಿ ಸ್ಪಂದಿಸಬೇಕು ಎಂದು ಸಮಾನ ಮನಸ್ಕರ ವೇದಿಕೆಯ ಕೆ.ಎಂ. ಮರುಳಸಿದ್ದಪ್ಪ, ಎಸ್.ಜಿ. ಸಿದ್ದರಾಮಯ್ಯ, ನಿರಂಜನಾರಾಧ್ಯ ವಿ.ಪಿ., ದಿನೇಶ್ ಅಮೀನ್ ಮಟ್ಟು, ಜಾಣಗೆರೆ ವೆಂಕಟರಾಮಯ್ಯ, ರುದ್ರಪ್ಪ ಹನಗವಾಡಿ, ಎಲ್.ಎನ್. ಮುಕುಂದರಾಜ್, ಶ್ರೀಪಾದ ಭಟ್, ವಿಮಲಾ.ಕೆ.ಎಸ್., ಜಾಫೆಟ್ ಶಾಂತಪ್ಪ, ಬಂಜಗೆರೆ ಜಯಪ್ರಕಾಶ್, ಡಾ. ವಸುಂಧರಾ ಭೂಪತಿ, ಅರ್ಕೇಶ್ ಆಗ್ರಹಿಸಿದ್ದಾರೆ.

2030ರ ಹೊತ್ತಿಗೆ ಹಸಿವು ಮುಕ್ತ ಜಗತ್ತು ಆಗಬೇಕು ಎಂಬ ಗುರಿಯನ್ನು ವಿಶ್ವಸಂಸ್ಥೆ ಇಟ್ಟುಕೊಂಡಿದೆ. ವಿಶ್ವದ ಜನಸಂಖ್ಯೆಯಲ್ಲಿ ಶೇ 30ರಷ್ಟು ಜನರು ಆಹಾರದ ಅಭದ್ರತೆ ಹೊಂದಿದ್ದಾರೆ. 72 ಕೋಟಿ ಜನರು ಹಸಿವಿನಿಂದ ಬಳಲುತ್ತಿದ್ದಾರೆ. ಕೋವಿಡ್ ಬಂದ ಮೇಲೆ ಹಸಿವಿನಿಂದ ಬಳಲುವವರ ಮತ್ತು ಆಹಾರದ ಅಭದ್ರತೆ ಇರುವವರ ಸಂಖ್ಯೆ ಹೆಚ್ಚಳವಾಗಿದೆ. ಈ ಆಘಾತವನ್ನು ತಗ್ಗಿಸಲು ಆಹಾರ ಪೂರೈಕೆ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ವಿಶ್ವ ಸಂಸ್ಥೆಯೇ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ರಾಜ್ಯವನ್ನು ಹಸಿವು ಮುಕ್ತಗೊಳಿಸಲು ಪ್ರತಿ ವ್ಯಕ್ತಿಗೆ ₹ 10 ಕೆ.ಜಿ. ಅಕ್ಕಿಯನ್ನು ನೀಡಲು ಮುಂದಾಗಿದೆ.

ಈ ಕಾರ್ಯಕ್ರಮದ ಪರಿಣಾಮಕಾರಿ ಜಾರಿಗೆ ಕೇಂದ್ರದ ನೆರವನ್ನು ಕೋರಿ ಪತ್ರ ಬರೆದಿತ್ತು. ಭಾರತೀಯ ಆಹಾರ ನಿಗಮದ ಗೋದಾಮುಗಳಲ್ಲಿ 185.58 ಲಕ್ಷ ಟನ್ ಧಾನ್ಯಗಳ ಹೆಚ್ಚುವರಿ ದಾಸ್ತಾನು ಇವೆ. ರಾಜ್ಯಕ್ಕೆ ಅಗತ್ಯವಿರುವ 1.66 ಲಕ್ಷ ಟನ್ ಹೆಚ್ಚುವರಿ ಅಕ್ಕಿ ಕೊಡಲು ಕಷ್ಟವೇನಿಲ್ಲ. ಆದರೂ ಕೇಂದ್ರ ಸರ್ಕಾರ ನಿರಾಕರಿಸಿದೆ. ಕೂಡಲೇ ಅಕ್ಕಿ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

ಕೃಷಿ ವಿವಿ: ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕನ್ನಡದಲ್ಲಿ ಕೃಷಿ ಬರವಣಿಗೆ ಪ್ರೋತ್ಸಾಹಿಸಲು 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ–2022'ರ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ.

2022ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಕೃಷಿ ಸಂಬಂಧಿತ ಕನ್ನಡ ಪುಸ್ತಕಗಳನ್ನು ಬರೆದಿರುವ ಲೇಖಕರು ಅರ್ಜಿ ಸಲ್ಲಿಸಬಹುದು.
ಪ್ರಶಸ್ತಿಯು ₹10,000 ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ.

ಜುಲೈ 30ರೊಳಗೆ ತಮ್ಮ ಕೃತಿಯ ಮೂರು ಪ್ರತಿಗಳನ್ನು ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು–560065 ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಾಹಿತಿಗಾಗಿ http://uasbangalore.edu.in ವೆಬ್ ತಾಣ, kannada.uas@gmail.com ಅಥವಾ 080-23330153ಗೆ ಸಂಪರ್ಕಿಸಿ.

ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರಾಯೋಗಿಕ ಸಂಚಾರ ಯಶಸ್ವಿ



ಬೆಂಗಳೂರು: ಬೆಂಗಳೂರು–ಧಾರವಾಡ ನಡುವೆ ಸಂಚರಿಸಲಿರುವ 'ವಂದೇ ಭಾರತ್' ರೈಲಿನ ಪ್ರಾಯೋಗಿಕ ಸಂಚಾರ ಸೋಮವಾರ ನಡೆಯಿತು.

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಬೆಳಿಗ್ಗೆ 5.45ಕ್ಕೆ ಹೊರಟ ರೈಲು ಮಧ್ಯಾಹ್ನ 12ಕ್ಕೆ ಧಾರವಾಡ ತಲುಪಿತು. ಧಾರವಾಡದಿಂದ ಮಧ್ಯಾಹ್ನ 12.22ಕ್ಕೆ ಹೊರಟು ರಾತ್ರಿ 7.20ಕ್ಕೆ ಬೆಂಗಳೂರು ತಲುಪಿತು. ಪ್ರಾಯೋಗಿಕ ಓಡಾಟದ ವೇಳೆ ಕಾರ್ಯಾಚರಣೆ, ಮೆಕ್ಯಾನಿಕಲ್, ಸಿವಿಲ್ ಎಂಜಿನಿಯರಿಂಗ್ ಮತ್ತು ಎಲೆಕ್ಟ್ರಿಕಲ್ ವಿಭಾಗದ ಹಿರಿಯ ಅಧಿಕಾರಿಗಳು ಇದ್ದರು. ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಉಪಕರಣಗಳು ಮತ್ತು ಪ್ರಯಾಣಿಕರ ಸೌಕರ್ಯಗಳಿಗೆ ಸಂಬಂಧಿಸಿದ ವಿವಿಧ ತಾಂತ್ರಿಕ ವಿಚಾರಗಳನ್ನು ಗಮನಿಸಲಾಗಿದೆ.

ಧಾರವಾಡ ಮತ್ತು ಕೆಎಸ್‌ಆರ್ ಬೆಂಗಳೂರು ನಡುವಿನ ಅಂತರ 489 ಕಿ.ಮೀ. ಇದ್ದು, ಈ ಮಾರ್ಗವನ್ನು ಸಂಪೂರ್ಣವಾಗಿ ದ್ವಿಪಥಗೊಳಿಸಲಾಗಿದೆ ಮತ್ತು ವಿದ್ಯುದ್ದೀಕರಿಸಲಾಗಿದೆ. ವಂದೇ ಭಾರತ್ ರೈಲು ಗಂಟೆಗೆ 110 ಕಿ.ಮೀ. ವೇಗದಲ್ಲಿ ಸಂಚರಿಸಿತು ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ಅವರು ಹುಬ್ಬಳ್ಳಿ ಮತ್ತು ಧಾರವಾಡ ನಿಲ್ದಾಣಗಳ ನಡುವೆ ರೈಲಿನಲ್ಲಿ ಪ್ರಯಾಣಿಸಿದರು. ಅಧಿಕಾರಿಗಳಿಂದ ಎಲ್ಲ ವಿವರ ಪಡೆದರು.

ನಿಧನ ವಾರ್ತೆ

ಡಿ.ಜಿ.ರಘು



ಬೆಂಗಳೂರು: ಕದಿರೇನಹಳ್ಳಿಯ ನಿವಾಸಿ ಡಿ.ಜಿ. ರಘು (65) ಸೋಮವಾರ ನಿಧನರಾದರು. ಡಿ.ಜಿ. ರಘು ಅವರು ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್‌ನ ಪ್ರೊಡಕ್ಷನ್ ವಿಭಾಗದಲ್ಲಿ (ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್) 35 ವರ್ಷ ಕಾರ್ಯ ನಿರ್ವಹಿಸಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸಂಜೆ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಘನ ತ್ಯಾಜ್ಯ ನಿರ್ವಹಣೆ: ದೊಡ್ಡ ವರ್ಗಾವಣೆ ಕೇಂದ್ರಗಳ ಸ್ಥಾಪನೆಗೆ ತರಾತುರಿ • ₹1,100 ಕೋಟಿ ವೆಚ್ಚಕ್ಕೆ ಸಿದ್ಧತೆ

ದೋಷಯುಕ್ತ ಗುತ್ತಿಗೆ: ₹13 ಕೋಟಿ ಬಿಡುಗಡೆ

• ಆರ್. ಮಂಜುನಾಥ್

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಕಸದ ವಿಂಗಡಣೆಗೆ ದೊಡ್ಡ ವರ್ಗಾವಣೆ ಕೇಂದ್ರಗಳನ್ನು ಸ್ಥಾಪಿಸುವ ಟೆಂಡರ್ ಪ್ರಕರಣ ಲೋಕಾಯುಕ್ತದಲ್ಲಿ ತನಿಖೆ ನಡೆಯುತ್ತಿದ್ದರೂ, ಗುತ್ತಿಗೆದಾರರಿಗೆ ₹13 ಕೋಟಿ ಹಣವನ್ನು ತರಾತುರಿಯಲ್ಲಿ ಬಿಬಿಎಂಪಿ ಬಿಡುಗಡೆ ಮಾಡಿದೆ.

'ಸಣ್ಣ ವರ್ಗಾವಣೆ ಕೇಂದ್ರಕ್ಕೆ' ಕಸ ವಿಂಗಡಣೆಗೆ ನೀಡಲಾಗುವ ಹಣಕ್ಕಿಂತ ದುಪ್ಪಟ್ಟು ವೆಚ್ಚವನ್ನು ದೊಡ್ಡ ವರ್ಗಾವಣೆ ಕೇಂದ್ರದ ನಿರ್ವಹಣೆ ನೀಡಲಾಗುತ್ತಿದೆ. ಇದು ಬಿಬಿಎಂಪಿಗೆ ಹೊರೆಯಾಗುತ್ತಿದೆ ಎಂದು ದೂರಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ 243 ವಾರ್ಡ್‌ಗಳಿಗೆ ಸಂಬಂಧಿಸಿದಂತೆ 89 ಪ್ಯಾಕೇಜ್‌ಗಳನ್ನು ಮಾಡಿ ಟೆಂಡರ್ ಕರೆಯಲಾಗಿತ್ತು. ಟೆಂಡರ್‌ನಲ್ಲಿ ನಿಯಮಗಳು ಉಲ್ಲಂಘನೆಯಾಗಿದ್ದು, ಗುತ್ತಿಗೆದಾರರು ಸಲ್ಲಿಸಿರುವ 'ಕ್ರೆಡಿಟ್ ಲೈನ್/ ಬ್ಯಾಂಕ್ ಸರ್ಟಿಫಿಕೇಟ್'ಗಳು ಕ್ರಮಬದ್ಧವಾಗಿಲ್ಲ. ಮಾನದಂಡಗಳಿಗೆ ವಿರುದ್ಧವಾಗಿದ್ದರೂ 'ಪರಿಶುದ್ಧ ವೆಂಚರ್ಸ್'ಗೆ ಕಾರ್ಯಾದೇಶ ನೀಡಲಾಗಿದೆ. ಇದನ್ನು ತಡೆಯಬೇಕು ಎಂದು ವಿಧಾನಪರಿಷತ್‌ನಲ್ಲಿ ಚರ್ಚೆಯಾಗಿತ್ತು.

ಪ್ರಜಾವಾಣಿ ವಿಶೇಷ

ಈ ಬಗ್ಗೆ ತನಿಖೆ ನಡೆಸಲಾಗುತ್ತದೆ. ಹಣ ಬಿಡುಗಡೆ ಮಾಡುವುದಿಲ್ಲ ಎಂದು ಫೆ. 23ರಂದು ಅಂದಿನ ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ ನೀಡಿದ್ದರು. ಆದರೆ ಚುನಾವಣೆ ನೀತಿಸಂಹಿತೆ ಜಾರಿಯಾಗುವ ಮುನ್ನ ₹13 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ದೂರಿದರು.

ಆರು ಕಾಂಪ್ಯಾಕ್ಟರ್, 45 ಕಂಟೈನರ್, 21 ಟ್ರಕ್, 21 ಹೂಕ್ ಲೋಡರ್‌ಗಳು ಕಾರ್ಯನಿರ್ವಹಿಸಿ, ಪ್ರತಿದಿನ ತಲಾ 150 ಮೆಟ್ರಿಕ್ ಟನ್ ತ್ಯಾಜ್ಯವನ್ನು ತಲಾ 25 ವಾರ್ಡ್‌ಗಳಿಂದ ಸಂಗ್ರಹಿಸುವ 3 ದೊಡ್ಡ ವರ್ಗಾವಣೆ ಕೇಂದ್ರ ಸ್ಥಾಪಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್)ಮುಂದಾಗಿದೆ. ನಗರದ ಕೇಂದ್ರ ಭಾಗದಲ್ಲಿ ಬೃಹತ್ ಮಟ್ಟದಲ್ಲಿ ತ್ಯಾಜ್ಯ ವಿಂಗಡಣೆ ಮಾಡಿದರೆ ಸುತ್ತಮುತ್ತ ಉಂಟಾಗುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದೆ ಕಾರ್ಯಾದೇಶವನ್ನೂ ನೀಡಿದೆ. ಇದರಲ್ಲಿ ಸಾಕಷ್ಟು ಅಕ್ರಮಗಳು, ನಿಯಮಬಾಹಿರ ದಾಖಲೆಗಳು, ಮಾನದಂಡಗಳ ಉಲ್ಲಂಘನೆ ಬಗ್ಗೆ ಲೋಕಾಯುಕ್ತಕ್ಕೂ ದೂರು ದಾಖಲಾಗಿದೆ. ಇಷ್ಟಾದರೂ ಹಣ ವ್ಯಯ ಮಾಡಲು ಬಿಎಸ್‌ಡಬ್ಲ್ಯುಎಂಎಲ್ ಮುಂದಾಗಿದ್ದು, ಬಿಬಿಎಂಪಿ ಮೂಲಕ ಗುತ್ತಿಗದಾರರಿಗೆ ಹಣವನ್ನೂ ಪಾವತಿಸಿದೆ ಎಂದರು.

'ಹಣ ಬಿಡುಗಡೆ ಮಾಡಬಾರದು ಎಂದೇನೂ ಇಲ್ಲ'

'ದೊಡ್ಡ ವರ್ಗಾವಣೆ ಕೇಂದ್ರ ಸ್ಥಾಪನೆಗೆ ಕಾರ್ಯಾದೇಶ ನೀಡಲಾಗಿದೆ. ಕಾಮಗಾರಿ ನಡೆಯುತ್ತಿದ್ದು ಅದಕ್ಕೆ ಹಣ ಬಿಡುಗಡೆ ಮಾಡಲೇಬೇಕು. ಒಂದು ದೂರು ಇದೆ ಎಂಬ ಕಾರಣಕ್ಕೆ ಗುತ್ತಿಗೆದಾರರಿಗೆ ಹಣ ಬಿಡುಗಡೆಯನ್ನು ತಡೆಯಲು ಸಾಧ್ಯವಿಲ್ಲ' ಎಂದು ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್‌ಕುಮಾರ್ ಹೇಳಿದರು.

'ಕೋರಮಂಗಲದಲ್ಲಿ ದೊಡ್ಡ ವರ್ಗಾವಣೆ ಕೇಂದ್ರ ಸಿದ್ಧಗೊಂಡಿದ್ದು, ಅದರ ಕಾರ್ಯಾಚರಣೆ ಸದ್ಯದಲ್ಲಿಯೇ ಆರಂಭವಾಗಲಿದೆ. ಜನರು ಇಲ್ಲಿ ಬಂದು ನೋಡಿದರೆ ಅದರ ವ್ಯವಸ್ಥೆ ಅರಿವಾಗುತ್ತದೆ. ಸುಮ್ಮನೆ ಎಲ್ಲವೂ ಸರಿ ಇಲ್ಲ ಎನ್ನುವುದಲ್ಲ. ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ತ್ಯಾಜ್ಯ ವಿಂಗಡಣೆ ಇಲ್ಲಿ ಸಾಧ್ಯವಿದೆ' ಎಂದರು.

ಉಪಮುಖ್ಯಮಂತ್ರಿಗೆ ಪತ್ರ

'ಸರ್ಕಾರದ ಆದೇಶ ಹಾಗೂ ನಿರ್ದೇಶನಗಳನ್ನು ಪಾಲಿಸದೆ ಬಿಎಸ್‌ಡಬ್ಲ್ಯುಎಂಎಲ್ ಹೆಸರಿನಲ್ಲಿ ಘನತ್ಯಾಜ್ಯ ವಿಲೇವಾರಿ ಕ್ಷೇತ್ರದಲ್ಲಿ ದೊಡ್ಡ ಮಾಫಿಯಾ ಕಾರ್ಯನಿರ್ವಹಿಸುತ್ತಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ, ದೊಡ್ಡ ವರ್ಗಾವಣೆ ಕೇಂದ್ರಗಳ ಎಲ್ಲ ಕಾಮಗಾರಿಗಳನ್ನು ಕೂಡಲೇ ಸ್ಥಗಿತಗೊಳಿಬೇಕು. ಈ ಅಕ್ರಮದಲ್ಲಿ ರಾಜಕೀಯ ವ್ಯಕ್ತಿಗಳು ಹಾಗೂ ಅಧಿಕಾರಿಗಳು ಭಾಗಿಯಾಗಿದ್ದು, ತನಿಖೆ ನಡೆಸಬೇಕು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆಯಲಾಗಿದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ಆರ್. ರಮೇಶ್ ತಿಳಿಸಿದರು.

'ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರದಿಂದ (ಎಸ್‌ಇಐಎಎ) ಈ ಕೇಂದ್ರಗಳ ಸ್ಥಾಪನೆಗೆ ಅನುಮತಿಯನ್ನೂ ಪಡೆದಿಲ್ಲ. ಅಲ್ಲದೆ, ಈ ಕೇಂದ್ರದ ಸುತ್ತ ಬಫರ್ ಝೋನ್ ಸ್ಥಾಪಿಸಬೇಕು. ಅಷ್ಟು ಪ್ರಮಾಣದ ಭೂಮಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಿಗುತ್ತದೆಯೇ ಎಂಬ ಪ್ರಶ್ನೆ ಉದ್ಭವವಾಗಿದ್ದು, ನಗರದ ಮಧ್ಯದಲ್ಲಿ ಕೇಂದ್ರ ಆರಂಭವಾದರೆ ನಾಗರಿಕರ ಆರೋಗ್ಯ ಕೆಡುತ್ತದೆ' ಎಂದರು.

ಕೋರಮಂಗಲದಲ್ಲಿ ಕೇಂದ್ರ!

'ಕೋರಮಂಗಲದ ಕ್ರೀಡಾ ಗ್ರಾಮದ ಬಳಿ 'ದೊಡ್ಡ ವರ್ಗಾವಣೆ ಕೇಂದ್ರ'ವನ್ನು ಬಿಎಸ್‌ಡಬ್ಲ್ಯುಎಂಎಲ್ ಆರಂಭಿಸಲು ತರಾತುರಿಯಲ್ಲಿ ಚಟುವಟಿಕೆಗಳನ್ನು ನಡೆಸಿದೆ. ಈ ಹಿಂದೆ ಇದೇ ಕೇಂದ್ರಗಳ ಸ್ಥಾಪನೆಗೆ ಕಾಂಗ್ರೆಸ್ ಮುಖಂಡರು ಪ್ರತಿಭಟಿಸಿದ್ದರು. ಇದೀಗ ಕಾಂಗ್ರೆಸ್ ಸರ್ಕಾರವೇ ಇರುವುದರಿಂದ ಕೋಟ್ಯಂತರ ರೂಪಾಯಿಯನ್ನು ಅನಗತ್ಯವಾಗಿ ವೆಚ್ಚ ಮಾಡುತ್ತಿರುವುದನ್ನು ತಡೆಯಬೇಕು' ಎಂದು ಪರಿಸರ ಕಾರ್ಯಕರ್ತ ವಿನೋದ್ ರಾಜನ್ ಆಗ್ರಹಿಸಿದರು.

'ಕೋರಮಂಗಲದಲ್ಲಿ ಬೃಹತ್ ಪ್ರಮಾಣದ ಕಸವನ್ನು ತಂದು ಹಾಕಿ, ವಿಂಗಡಣೆ ಮಾಡಿದರೆ ಜನರು ಇಲ್ಲಿ ವಾಸಿಸಲು ಸಾಧ್ಯವಾಗುವುದಿಲ್ಲ. ಈಗಾಗಲೇ ರಸ್ತೆ ಬದಿಯಲ್ಲಿ ವಿಂಗಡಣೆ ಮಾಡುವುದರಿಂದಲೇ ಸಾಕಷ್ಟು ಸಮಸ್ಯೆ ಆಗುತ್ತಿದೆ. ಇನ್ನು 150 ಮೆಟ್ರಿಕ್ ಟನ್ ಕಸ ಪ್ರತಿ ನಿತ್ಯವೂ ಇಲ್ಲಿಗೆ ಬಂದರೆ ನಮ್ಮ ಪಾಡೇನು' ಎಂದು ಸ್ಥಳೀಯ ನಿವಾಸಿ ಗೋಪಾಲರೆಡ್ಡಿ ಪ್ರಶ್ನಿಸಿದರು.



ಮಹಿಳಾ ಕಾನ್‌ಸ್ಟೆಬಲ್ ಸಾವು

ಬೆಂಗಳೂರು: ಕೆಂಗೇರಿ ಸಂಚಾರ ಠಾಣೆಯ ಕಾನ್‌ಸ್ಟೆಬಲ್ ಪ್ರಿಯಾಂಕಾ (30) ಅವರು ಹೃದಯಾಘಾತದಿಂದಾಗಿ ಭಾನುವಾರ ರಾತ್ರಿ ನಿಧನರಾದರು.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಅವರು 10 ದಿನ ರಜೆ ಪಡೆದು, ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದಲ್ಲಿದ್ದರು. ಅಲ್ಲಿಯೇ ಅವರು ತೀರಿಕೊಂಡಿದ್ದಾರೆ.

ಪ್ರಿಯಾಂಕಾ ಪತಿ ಕೋವಿಡ್‌ನಿಂದಾಗಿ 2021ರಲ್ಲಿ ತೀರಿಕೊಂಡಿದ್ದರು. ನಂತರ, ಮಗುವಿನ ಜೊತೆ ಪ್ರಿಯಾಂಕಾ ವಾಸವಿದ್ದರು. ತಂದೆ–ತಾಯಿಯನ್ನು ಕಳೆದುಕೊಂಡಿರುವ ಮಗು ಸದ್ಯ ಸಂಬಂಧಿಕರ ಬಳಿಯಿದೆ.


ಪ್ರಿಯಾಂಕಾ

ಜೆಇಇ ಅಡ್ವಾನ್ಸ್ಡ್: ಶ್ರೀಚೈತನ್ಯ ಸಂಸ್ಥೆಗೆ ಹಲವು ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯ ಫಲಿತಾಂಶ ಭಾನುವಾರ ಪ್ರಕಟವಾಗಿದ್ದು, 'ಶ್ರೀಚೈತನ್ಯ ಎಜುಕೇಷನಲ್ ಇನ್‌ಸ್ಟಿಟ್ಯೂಟ್ಸ್'ನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಪ್ರಥಮ ಎಸ್.– 102ನೇ ರ್‍ಯಾಂಕ್, ಪಿ. ಧ್ರುವ್ ಶಿವ್‌ಕಾಂತ್– 198ನೇ ರ್‍ಯಾಂಕ್, ಪ್ರತ್ಯಕ್ಷ ಜೈನ್– 407ನೇ ರ್‍ಯಾಂಕ್, ಎಂ. ಲೇಖ್ಯಾ ರೆಡ್ಡಿ– 523ನೇ ರ್‍ಯಾಂಕ್, ಆದಿತ್ಯ ಕೆ. ಅನಿಲ್– 550ನೇ ರ್‍ಯಾಂಕ್, ಮನೋಜ್ ಎನ್.ಎಚ್.– 559ನೇ ರ್‍ಯಾಂಕ್, ವಿಪುಲ್ ತೇಜವಾನಿ– 660ನೇ ರ್‍ಯಾಂಕ್, ಕಾರ್ತಿಕ್ ಕಶ್ಯಪ್– 819ನೇ ರ್‍ಯಾಂಕ್ ಮತ್ತು ಅಭಿನವ ಬಿಟ್ರಗುಂಟ– 965ನೇ ರ್‍ಯಾಂಕ್ ಪಡೆದಿದ್ದಾರೆ. ಸಂಸ್ಥೆಯ ನಿರ್ದೇಶಕಿ ಸುಷ್ಮಾ ಬೊಪಣ್ಣ ಮತ್ತು ಸಂಸ್ಥೆಯ ಸಿಬ್ಬಂದಿ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.


ಪ್ರಥಮ ಎಸ್. / ಪಿ. ಧ್ರುವ್ ಶಿವ್‌ಕಾಂತ್ / ಪ್ರತ್ಯಕ್ಷ ಜೈನ್ / ಎಂ. ಲೇಖ್ಯಾ ರೆಡ್ಡಿ / ಆದಿತ್ಯ ಕೆ. ಅನಿಲ್ / ಮನೋಜ್ ಎನ್.ಎಚ್. / ವಿಪುಲ್ ತೇಜವಾನಿ / ಕಾರ್ತಿಕ್ ಕಶ್ಯಪ್ / ಅಭಿನವ ಬಿಟ್ರಗುಂಟ

ದೊಡ್ಡನೆಕ್ಕುಂದಿ: ರಾಜಕಾಲುವೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ವಲಯ ವ್ಯಾಪ್ತಿಯ ದೊಡ್ಡನೆಕ್ಕುಂದಿ ಹಾಗೂ ಹೊಯ್ಸಳನಗರ ವ್ಯಾಪ್ತಿಯಲ್ಲಿ ಸೋಮವಾರ ಬಿಬಿಎಂಪಿ ಅಧಿಕಾರಿಗಳು ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿದರು.

ಮಹದೇವಪುರ ವಲಯ ದೊಡ್ಡನೆಕ್ಕುಂದಿ ವಾರ್ಡ್ ವ್ಯಾಪ್ತಿಯ ಸರ್ವೆ ಸಂ. 24/1, 3, 4 ಮತ್ತು 5ರ ಫರ್ನ್ ಸಿಟಿಯಲ್ಲಿ ಹಾದುಹೋಗಿರುವ ಸುಮಾರು 200 ಮೀಟರ್ ಉದ್ದದ ರಾಜಕಾಲುವೆ ಮೇಲೆ ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದ ಕಾಂಪೌಂಡ್, ಕ್ಲಬ್ ಹೌಸ್ ಕಟ್ಟಡ, ಈಜುಕೊಳ, ತ್ಯಾಜ್ಯ ನೀರು ಸಂಸ್ಕರಣಾ ಘಟಕ(ಎಸ್.ಟಿ.ಪಿ), ಕಟ್ಟಡವನ್ನು ತೆರವುಗೊಳಿಸಲಾಯಿತು.

ಫರ್ನ್ ಸಿಟಿಯ ಮುಂದೆ ಸುಮಾರು 200 ಮೀಟರ್ ಉದ್ದದ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದ್ದ ಗೌಡ್ರು ರಾಜಣ್ಣ ಹೋಟೆಲ್ ಶೆಡ್ ತೆರವು ಮಾಡಲಾಯಿತು. ಭಗಿನಿ ಹೋಟೆಲ್ ಅನ್ನು ತೆರವುಗೊಳಿಸಲು ಮುಂದಾದಾಗ ಸ್ವಯಂ ತೆರವು ಮಾಡುವುದಾಗಿ ಹೋಟೆಲ್‌ನವರು ತಿಳಿಸಿದರು. ತ್ವರಿತವಾಗಿ ತೆರವು ಮಾಡಲು ಹೋಟೆಲ್ ಮಾಲೀಕರಿಗೆ ಅಧಿಕಾರಿಗಳು ಸೂಚನೆ ನೀಡಿದರು.

ಕೆ.ಆರ್. ಪುರ ಹೊರಮಾವು ಉಪ ವಿಭಾಗದ ಹೊಯ್ಸಳನಗರ ಮುಖ್ಯ ರಸ್ತೆಯ ಪಕ್ಕದಲ್ಲಿ 4 ಮಳಿಗೆಗಳು ಹಾಗೂ 1 ಕಾರ್ ಸರ್ವೀಸ್ ಸ್ಟೇಷನ್ ಅನ್ನು ತೆರವುಗೊಳಿಸಲಾಗಿದೆ. ತೆರವು ಕಾರ್ಯಾಚರಣೆಗಾಗಿ 1 ಜೆಸಿಬಿ, 2 ಟ್ರ್ಯಾಕ್ಟರ್, 10ಕ್ಕೂ ಹೆಚ್ಚು ಗ್ಯಾಂಗ್ ಮ್ಯಾನ್ ಹಾಗೂ ರಕ್ಷಣೆಗಾಗಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲಾಗಿತ್ತು.

ಪಾಲಿಕೆ ಎಂಜಿನಿಯರ್‌ಗಳು, ಭೂ ಮಾಪಕರು, ತಹಶೀಲ್ದಾರ್ ನೇತೃತ್ವದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಲಾಯಿತು. ಭದ್ರತೆಗಾಗಿ 40ಕ್ಕೂ ಹೆಚ್ಚು ಪೊಲೀಸರು ಬಂದಿದ್ದರು. ಹಿಟಾಚಿ ಹಾಗೂ 10 ಗ್ಯಾಂಗ್ ಮ್ಯಾನ್‌ಗಳ ಸಹಯೋಗದಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ನಡೆಸಲಾಯಿತು ಎಂದು ವಲಯ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.

ತಹಶೀಲ್ದಾರ್ ಮೂಲಕ ಒತ್ತುವರಿ ಮಾಡಿರುವವರಿಗೆ ಆದೇಶಗಳನ್ನು ಜಾರಿಗೊಳಿಸಿ ಹಂತ-ಹಂತವಾಗಿ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಲಾಗುತ್ತಿದೆ ಎಂದರು.

ಬೊಮ್ಮನಹಳ್ಳಿಯಲ್ಲಿ ತೆರವು: ಬೊಮ್ಮನಹಳ್ಳಿ ವಲಯದಲ್ಲಿ ಆರು ಮಳಿಗೆಗಳನ್ನು ತೆರವು ಮಾಡಲಾಯಿತು.

ಅಂಜನಾಪುರ ವಾರ್ಡ್, ತಿಪ್ಪಸಂದ್ರ ಗ್ರಾಮ, ನಾರಾಯಣನಗರ 2ನೇ ಹಂತದ ಬಿಡಿಎ ಅನುಮೋದಿತ ಬಡಾವಣೆಯ ಸರ್ವೆ ನಂ. 1ರಲ್ಲಿ ಉದ್ಯಾನಕ್ಕಾಗಿ ಮೀಸಲಿಟ್ಟಿದ್ದ ಪ್ರದೇಶದಲ್ಲಿ ಸುಮಾರು 20x70 ವ್ಯಾಪ್ತಿಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ನಿರ್ಮಿಸಿದ್ದ 6 ಮಳಿಗೆಗಳನ್ನು ಎರಡು ಜೆಸಿಬಿಗಳ ಮೂಲಕ ತೆರವುಗೊಳಿಸಲಾಯಿತು.


ದೊಡ್ಡನೆಕ್ಕುಂದಿಯಲ್ಲಿ ಈಜುಕೊಳ ಹಾಗೂ ಕ್ಲಬ್ ಕಟ್ಟಡದ ಒತ್ತುವರಿಯನ್ನು ತೆರವು ಮಾಡಲಾಯಿತು

ಮಾಜಿ ಶಾಸಕ ನಂದೀಶ್ ರೆಡ್ಡಿ ಅಡ್ಡಿ!

ದೊಡ್ಡನೆಕ್ಕುಂದಿಯ ಫರ್ನ್ಸ್ ಸಿಟಿ ಬಡಾವಣೆಯ ವಿಲ್ಲಾದಲ್ಲಿ ಐಷಾರಾಮಿ ಕ್ಲಬ್ ಹೌಸ್ ಮತ್ತು ಈಜುಕೊಳ ತೆರವು ಕಾರ್ಯಾಚರಣೆ ವೇಳೆ ಮಾಜಿ ಶಾಸಕ ನಂದೀಶ್ ರೆಡ್ಡಿ ಜೆಸಿಬಿ ಕೀ ಕಿತ್ತುಕೊಂಡು ಅಡ್ಡಿಪಡಿಸಿದರು.

ನೂರಕ್ಕೂ ಹೆಚ್ಚು ವಿಲ್ಲಾ ನಿವಾಸಿಗಳ ಜೊತೆ ಬಂದ ನಂದೀಶ್ ರೆಡ್ಡಿ ಬಿಬಿಎಂಪಿ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡರು. 'ನೀವು ಪಕ್ಷಪಾತ ಮಾಡುತ್ತಿದ್ದಿರಿ. ತೆರವು ಮಾಡಲು ಬಂದರೆ ಜೆಸಿಬಿ ಅಡ್ಡವಾಗಿ ಕುಳಿತುಕೊಳ್ಳುತ್ತೇನೆ. ನೀವು ತೆರವು ಮಾಡಿ' ಎಂದು ಏರುಧ್ವನಿಯದಲ್ಲಿ ಹೇಳಿದರು.

'ಗರುಡಾಚಾರಪಾಳ್ಯ ಕೆರೆಯ ಆರಂಭದಿಂದ ತೆರವು ಮಾಡಿಕೊಂಡು ಬಂದರೆ ಮಾತ್ರ ಇಲ್ಲಿ ತೆರವು ಮಾಡಲು ಬಿಡುತ್ತೇವೆ. ಇಲ್ಲದಿದ್ದರೆ ತೆರವು ಮಾಡಲು ಬಿಡುವುದಿಲ್ಲ' ಎಂದು ಕೆಲ ಸಮಯ ಬಿಗಿಪಟ್ಟುಹಿಡಿದು ಕುಳಿತರು.

'ಬೇರೆ ಎಲ್ಲ ಕಡೆ ಹೈಕೋರ್ಟ್ ತಡೆಯಾಜ್ಞೆ ಇದೆ. ಇಲ್ಲಿ ಮಾತ್ರ ಒತ್ತುವರಿ ತೆರವಿಗೆ ಮುಂದಾಗಿದ್ದಿರಿ. ನಾವು ಯಾರು ರಾಜಕಾಲುವೆ ಒತ್ತುವರಿ ತೆರವಿನ ವಿರೋಧಿಗಳಲ್ಲ. ನನ್ನದು ಖಾಲಿ ಜಾಗವು ಇಲ್ಲಿಲ್ಲ. ಇದ್ದರೆ ತೆರವು ಮಾಡಿ. ಕಾಲುವೆ ಆರಂಭದಲ್ಲಿ ಹಾಗೇ ಬಿಟ್ಟು ಮಧ್ಯದಲ್ಲಿ ತೆರವು ಮಾಡಿದರೆ ಮಳೆ ನೀರು ಹೋಗುತ್ತದೆಯೇ? ಪ್ರವಾಹ ಉಂಟಾಗುವುದಿಲ್ಲವೇ' ಎಂದು ಪ್ರಶ್ನಿಸಿದರು ಬಿಬಿಎಂಪಿ ಅಧಿಕಾರಿಗಳ ನಡುವೆ ಕೆಲಕಾಲ ಘರ್ಷಣೆ ಉಂಟಾಯಿತು. ನಿವಾಸಿಗಳನ್ನು ಸಮಾಧಾನಪಡಿಸಿ ಪರಿಸ್ಥಿತಿ ತಿಳಿಗೊಳಿಸಲು ಪೊಲೀಸ್ ಅಧಿಕಾರಿಗಳು ಹರಸಹಾಸ ಪಟ್ಟರು.

ಕಿತ್ತಾಡಿಕೊಂಡ ನಿವಾಸಿಗಳು: ಬಿಬಿಎಂಪಿ ಅಧಿಕಾರಿಗಳು ವಿಲ್ಲಾ ಬಳಿ ತೆರವು ಮಾಡುವ ವೇಳೆ ಅಡ್ಡಿಪಡಿಸಲು ನೆರವಿಗೆ ಧಾವಿಸಲಿಲ್ಲ ಎಂದು ನಿವಾಸಿಗಳ ನಡುವೆ ಪರಸ್ಪರ ಮಾತಿನ ಚಕಮಕಿ ನಡೆಯಿತು. ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದಾಗ ನಿವಾಸಿಗಳನ್ನು ಪೊಲೀಸರು ಚದುರಿಸಿದರು.

ಆನ್‌ಲೈನ್‌ನಲ್ಲಿ ಋಣಾತ್ಮಕ ಬಿಲ್: ಬೆಸ್ಕಾಂ ಸ್ಪಷ್ಟನೆ

ಬೆಂಗಳೂರು: ವಿದ್ಯುತ್ ಗ್ರಾಹಕರಿಗೆ ಆನ್‌ಲೈನ್‌ನಲ್ಲಿ ಋಣಾತ್ಮಕ ಬಿಲ್‌ಗಳು ಬಂದಿದ್ದು, ಇದನ್ನು 2 ದಿನಗಳ ಒಳಗೆ ಸರಿ ಪಡಿಸಲಾಗುವುದು ಎಂದು ಬೆಸ್ಕಾಂ ತಿಳಿಸಿದೆ.

ಜೂನ್‌ನಲ್ಲಿ ಗ್ರಾಹಕರಿಗೆ ನೀಡಿರುವ ವಿದ್ಯುತ್ ಬಿಲ್‌ನ ಮಾಹಿತಿಯನ್ನು ತಂತ್ರಾಂಶದಲ್ಲಿ ಸೇರ್ಪಡೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಗ್ರಾಹಕರಿಗೆ ನೀಡಿರುವ ಭೌತಿಕ ಬಿಲ್‌ನಲ್ಲಿ ಸರಿಯಾದ ಬಿಲ್ ಮೊತ್ತ ನಮೂದಾಗಿರುತ್ತದೆ. ಆ ಮೊತ್ತವನ್ನೇ ಆನ್‌ಲೈನ್ ಪಾವತಿಯಲ್ಲಿ ನಮೂದಿಸಿ, ಪಾವತಿಸಲು ಕೋರಿದೆ. ಗೊಂದಲಗಳಿದ್ದರೆ ಆಯಾ ಉಪ ವಿಭಾಗಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು ಅಥವಾ 1912ಕ್ಕೆ ಕರೆ ಮಾಡಿ ಸಮಸ್ಯೆ ಪರಿಹರಿಸಿಕೊಳ್ಳಬಹುದು. ವಿದ್ಯುತ್ ಬಳಕೆಗೆ ಅನುಗುಣವಾಗಿಯೇ ಬಿಲ್ ನೀಡಲಾಗಿದೆ. ಅಧಿಕ ಶುಲ್ಕ ನೀಡಿಲ್ಲ. ಜುಲೈನಲ್ಲಿ ಯಾವುದೇ ಬಿಲ್ಲಿಂಗ್ ಸಮಸ್ಯೆಗಳು ಇರುವುದಿಲ್ಲ ಎಂದು ತಿಳಿಸಿದೆ.

ಬೆಂಗಳೂರಿನ ಇಎಸ್‌ಐಗೆ 'ಲಕ್ಷ್ಯ' ಪ್ರಶಸ್ತಿ

ಬೆಂಗಳೂರು: ಹೆರಿಗೆ ವಿಭಾಗ ಮತ್ತು ಹೆರಿಗೆ ಶಸ್ತ್ರಚಿಕಿತ್ಸಾ ವಿಭಾಗಗಳ ಆರೈಕೆಯಲ್ಲಿ ಗುಣಮಟ್ಟದ ಆರೈಕೆ ನೀಡಿರುವ ಬೆಂಗಳೂರಿನ ಇಎಸ್‌ಐ ಆಸ್ಪತ್ರೆ (ಇಎಸ್‌ಐಸಿ ಎಂಸಿ ಆ್ಯಂಡ್ ಪಿಐಎಂಎಸ್‌ಆರ್) ಮತ್ತು ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗಳಿಗೆ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ರಾಷ್ಟ್ರೀಯ 'ಲಕ್ಷ್ಯ' ಪ್ರಶಸ್ತಿ ಲಭಿಸಿದೆ.

ಬೆಂಗಳೂರು ಇಎಸ್‌ಐ ಆಸ್ಪತ್ರೆಯಲ್ಲಿ ಹೆರಿಗೆ ವಿಭಾಗದಲ್ಲಿ ಶೇ 96 ಮತ್ತು ಹೆರಿಗೆ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಶೇ 96 ಸಾಧನೆ ಹಾಗೂ ಭದ್ರಾವತಿ ಆಸ್ಪತ್ರೆಯಲ್ಲಿ ಹೆರಿಗೆ ವಿಭಾಗದಲ್ಲಿ ಶೇ 94 ಮತ್ತು ಹೆರಿಗೆ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಶೇ 95 ಸಾಧನೆ ಆಗಿರುವುದರಿಂದ ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಪ್ಲಾಟಿನಂ ಪ್ರಶಸ್ತಿ ನೀಡಲಾಗಿದೆ.

'ಈ ಪ್ರಶಸ್ತಿಯಿಂದಾಗಿ ನಮ್ಮ ಆಸ್ಪತ್ರೆ ರಾಷ್ಟ್ರಮಟ್ಟದಲ್ಲಿ ಗುರುತಿಸುವಂತಾಗಿದೆ. ಇದೆಲ್ಲ ನಮಗೆ ಸಂತಸ ಉಂಟು ಮಾಡಿದೆ. ನಮ್ಮೆಲ್ಲ ವೈದ್ಯರು, ಸಿಬ್ಬಂದಿ, ಇಲಾಖೆಯ ಅಧಿಕಾರಿಗಳ ಸಹಕಾರ ಇದಕ್ಕೆ ಕಾರಣ' ಎಂದು ಭದ್ರಾವತಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಶಿವಪ್ರಕಾಶ್ ಡಿ.ಎಸ್. ಪ್ರತಿಕ್ರಿಯಿಸಿದ್ದಾರೆ.

ಜುಲೈ 10ರಿಂದ 'ಒಂದು ವಾರ ಒಂದು ಲ್ಯಾಬ್' ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಮಂಡಳಿ(ಸಿಎಸ್‌ಐಆರ್)ಯಲ್ಲಿ ನಡೆಯುತ್ತಿರುವ ಸಂಶೋಧನೆ, ವೈಜ್ಞಾನಿಕ ಆವಿಷ್ಕಾರಗಳು ಹಾಗೂ ತಾಂತ್ರಿಕ ಪ್ರಗತಿಗಳನ್ನು ಜನರಿಗೆ ತಿಳಿಸುವ ಉದ್ದೇಶದಿಂದ ಜುಲೈ 10ರಿಂದ 15ರ ತನಕ 'ಒಂದು ವಾರ ಒಂದು ಲ್ಯಾಬ್' ಎಂಬ ಅಭಿಯಾನ ಆಯೋಜಿಸಲಾಗಿದೆ.


ಶ್ರೀದೇವಿ ಜಡೆ

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಸಿಎಸ್‌ಐಆರ್–4ಪಿಐ (ನಾಲ್ಕನೇ ಪ್ಯಾರಾಡೈಮ್ ಸಂಸ್ಥೆ) ಮುಖ್ಯಸ್ಥೆ ಡಾ.ಶ್ರೀದೇವಿ ಜಡೆ ಮಾತನಾಡಿ, 'ದೇಶದಲ್ಲಿ ಸಿಎಸ್‌ಐಆರ್‌ನ 37 ಪ್ರಯೋಗಾಲಯಗಳಿವೆ. ಅವುಗಳಲ್ಲಿ ಜನರಿಗೆ ಅಗತ್ಯವುಳ್ಳ ಸಂಶೋಧನೆಗಳು ನಿತ್ಯವೂ ನಡೆಯುತ್ತಲೇ ಇರುತ್ತವೆ. ಆವಿಷ್ಕಾರಗಳು ವಿದ್ಯಾರ್ಥಿಗಳಿಗೆ, ರೈತರಿಗೆ ಹಾಗೂ ವಿಜ್ಞಾನ ಕ್ಷೇತ್ರದ ಆಸಕ್ತರಿಗೆ ಇದುವರೆಗೂ ತಿಳಿಯುತ್ತಿರಲಿಲ್ಲ. ಇವುಗಳ ಅನುಕೂಲಗಳ ಬಗ್ಗೆ ತಿಳಿಸಲು ಕೇಂದ್ರ ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಜಿತೇಂದ್ರ ಸಿಂಗ್ ಅವರ ಸೂಚನೆಯಂತೆ ಅಭಿಯಾನ ಆಯೋಜಿಸಲಾಗಿದೆ. ದೇಶದ ಎಲ್ಲ ಪ್ರಯೋಗಾಲಯಗಳಲ್ಲೂ ಅಭಿಯಾನ ನಡೆಯುತ್ತಿದೆ. ಸೆಪ್ಟೆಂಬರ್‌ಗೆ ಅಭಿಯಾನ ಮುಕ್ತಾಯವಾಗಲಿದೆ' ಎಂದರು

ಸೂಪರ್ ಕಂಪ್ಯೂಟಿಂಗ್ ಸೌಲಭ್ಯದ ಕೊಠಡಿ ಉದ್ಘಾಟನೆ ಜೂನ್ 21ರಂದು ನಡೆಯಲಿದೆ. ಸಿಎಸ್‌ಐಆರ್‌ನ ಮಹಾ ನಿರ್ದೇಶಕಿ ಡಾ.ಎನ್.ಕಲೈಸೆಲ್ವಿ ಹಾಗೂ ಕೆಎಸ್‌ಎಂಡಿಎ ಆಯುಕ್ತ ಡಾ.ಮನೋಜ್ ರಂಜನ್ ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀದೇವಿ ಹೇಳಿದರು. ಹವಾಮಾನ ಬದಲಾವಣೆ, ಸ್ಮಾರ್ಟ್ ಕೃಷಿ, ಮೇಘಸ್ಫೋಟ, ಸೂಪರ್ ಕಂಪ್ಯೂಟಿಂಗ್, ಭೂಗೋಳ, ವೈಮಾನಿಕ ಕ್ಷೇತ್ರ, ಆಹಾರ ಕ್ಷೇತ್ರವೂ ಸೇರಿ ಹಲವು ಸಂಶೋಧನೆಗಳು ಸಂಸ್ಥೆಯಲ್ಲಿ ನಡೆಯುತ್ತಿವೆ ಎಂದರು.ಅಭಿಯಾನದ ಸಂಯೋಜಕ ಡಾ.ಇಮ್ತಿಯಾಜ್ ಪರ್ವೇಜ್ ಮಾತನಾಡಿ, 'ಜು.6 ದಿನ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದರು. ಡಾ.ಜಿ.ಕೆ.ಪಾತ್ರ, ಡಾ.ಆರ್.ಪಿ.ತಂಗವೇಲು, ಎಂ.ಕೆ. ಶಾರದಾ, ಡಾ.ವಿ.ಅನಿಲ್ ಕುಮಾರ್ ಇದ್ದರು.

ಮುಖ್ಯಾಂಶಗಳು

- ವಿದ್ಯಾರ್ಥಿಗಳಿಗೆ ವೀಕ್ಷಣೆಗೆ ಅವಕಾಶ
- ಜೂನ್ 21ರಂದು ಸೂಪರ್ ಕಂಪ್ಯೂಟಿಂಗ್ ಲ್ಯಾಬ್ ಅನಾವರಣ
- ನವೋದ್ಯಮಿಗಳ ಜತೆಗೆ ಒಪ್ಪಂದಕ್ಕೆ ಸಹಿ

ಬಿಎಂಟಿಸಿ ಬಸ್‌ನಲ್ಲಿ ಪೊಲೀಸ್ ಕಮಿಷನರ್ ಬಿ. ದಯಾನಂದ್ ಪ್ರಯಾಣ

ಮಹಿಳೆಯರ ಸುರಕ್ಷತೆ: ಪೊಲೀಸರ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಸುರಕ್ಷತೆಗಾಗಿ ಹಲವು ಕ್ರಮ ಕೈಗೊಂಡಿರುವ ಪೊಲೀಸರು, ನಗರದ ಹಲವು ಸ್ಥಳಗಳಲ್ಲಿ ಸೋಮವಾರ ಸಂಚರಿಸಿ ಜಾಗೃತಿ ಮೂಡಿಸಿದರು.

'ಮಹಿಳೆಯರ ಸುರಕ್ಷತೆ ನಮ್ಮ ಆದ್ಯತೆ' ಅಭಿಯಾನದ ಅಂಗವಾಗಿ ಪೊಲೀಸ್ ಕಮಿಷನರ್ ಬಿ. ದಯಾನಂದ್ ಸೇರಿದಂತೆ ಬಹುತೇಕ ಪೊಲೀಸ್ ಅಧಿಕಾರಿಗಳು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡಿ ಜನರಿಗೆ ಜಾಗೃತಿ ಬರಹವುಳ್ಳ ಕರಪತ್ರಗಳನ್ನು ಹಂಚಿದರು. ಬಸ್‌ಗಳಲ್ಲಿ ಸಂಚರಿಸಿ, 'ಮಹಿಳೆಯರು ಹಾಗೂ ಮಕ್ಕಳ ರಕ್ಷಣೆಗೆ ನಾವಿದ್ದೇವೆ. ಯಾವುದೇ ತುರ್ತು ಸಂದರ್ಭದಲ್ಲೂ ನಮ್ಮ 112ಕ್ಕೆ ಕರೆ ಮಾಡಿ' ಎಂದು ಧೈರ್ಯ ತುಂಬಿದರು.

ಸುರಕ್ಷಿತ ನಗರ ಯೋಜನೆಯಡಿ ನಗರದ 30 ಸ್ಥಳಗಳಲ್ಲಿ ಸುರಕ್ಷತಾ ದ್ವೀಪ ಸ್ಥಾಪಿಸಲಾಗಿದೆ. ಯಾರಾದರೂ ಮಹಿಳೆಯರು, ತೊಂದರೆಗೆ ಸಿಲುಕಿದರೆ ತುರ್ತು ಸಹಾಯಕ್ಕಾಗಿ ಸುರಕ್ಷತಾ ದ್ವೀಪದಲ್ಲಿರುವ ಬಟನ್ ಒತ್ತಬೇಕು. ದೃಶ್ಯದ ಸಮೇತ ನಿಯಂತ್ರಣ ಕೊಠಡಿಗೆ ಮಾಹಿತಿ ರವಾನೆಯಾಗಲಿದೆ. ಪೊಲೀಸ್ ಸಿಬ್ಬಂದಿ ತ್ವರಿತವಾಗಿ ಸ್ಥಳಕ್ಕೆ ಬಂದು ನೆರವು ನೀಡಲಿದ್ದಾರೆ. ಈ ವ್ಯವಸ್ಥೆ ಬಳಕೆ ಬಗ್ಗೆ ಪೊಲೀಸರು, ಮಹಿಳೆಯರಿಗೆ ಮಾಹಿತಿ ನೀಡಿದರು.

'ನಿಮ್ಮ ವ್ಯಾಪ್ತಿಯ ಠಾಣೆ ಯಾವುದು, ದೂರು ದಾಖಲು ಸೇರಿದಂತೆ ಪೊಲೀಸ್ ವ್ಯವಸ್ಥೆಯ ಮಾಹಿತಿ ತಿಳಿಯಲು ಕೆಎಸ್‌ಪಿ (ಕರ್ನಾಟಕ ರಾಜ್ಯ ಪೊಲೀಸ್) ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಿ' ಎಂದು ಪೊಲೀಸರು ಕೋರಿದರು.

ಶಿವಾಜಿನಗರ ನಿಲ್ದಾಣಕ್ಕೆ ಬಂದಿದ್ದ ಕಮಿಷನರ್ ಬಿ. ದಯಾನಂದ್, ಬಿಎಂಟಿಸಿ ಬಸ್ ಏರಿದರು. ಬಸ್‌ನಲ್ಲಿ ಪ್ರಯಾಣಿಸಿದ ಅವರು, ಮಹಿಳಾ ಪ್ರಯಾಣಿಕರಿಗೆ ಕರಪತ್ರ ಹಂಚಿದರು.

ಮಹಿಳೆಯರಿಗೆ ಮೀಸಲಿದ್ದ ಆಸನಗಳ ಬಳಿ ನಿಂತುಕೊಂಡಿದ್ದ ದಯಾನಂದ್, 'ಮಹಿಳೆಯರು–ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಯಾರೊಬ್ಬರೂ ಹೆದರಬಾರದು. ಯಾವುದೇ ತುರ್ತು ಸಂದರ್ಭದಲ್ಲಾದರೂ ಪೊಲೀಸರು ನಿಮ್ಮ ಜೊತೆ ಇರಲಿದೆ' ಎಂದರು.

ಕಮಿಷನರ್ ಜೊತೆಗಿದ್ದ ಮಹಿಳಾ ಪಿಎಸ್‌ಐಗಳು, ಕರಪತ್ರದಲ್ಲಿರುವ ಸುರಕ್ಷತಾ ಕ್ರಮಗಳ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ನೀಡಿದರು.

ಆಯಾ ವಿಭಾಗ ವ್ಯಾಪ್ತಿಯಲ್ಲಿ ಡಿಸಿಪಿಗಳು, ಎಸಿಪಿಗಳು, ಇನ್‌ಸ್ಪೆಕ್ಟರ್‌ಗಳು, ಪಿಎಸ್‌ಐಗಳು ಹಾಗೂ ಸಿಬ್ಬಂದಿ ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬಸ್, ಆಟೊ, ಕ್ಯಾಬ್ ಪ್ರಯಾಣಿಕರಿಗೆ ಕರಪತ್ರಗಳನ್ನು ನೀಡಿದರು. ರಸ್ತೆಗಳಲ್ಲಿ ಸುತ್ತಾಡಿದ ಪೊಲೀಸರು, ದಾರಿಯುದ್ದಕ್ಕೂ ಕರಪತ್ರಗಳನ್ನು ಹಂಚಿದರು.

'ಮಹಿಳೆಯರ ದೂರು ದಾಖಲಿಸಿಕೊಳ್ಳಲು ಎರಡು ಪ್ರತ್ಯೇಕ ಮಹಿಳಾ ಠಾಣೆಗಳನ್ನು ತೆರೆಯಲಾಗಿದೆ. ಪ್ರತಿ ಠಾಣೆಯಲ್ಲೂ ಮಹಿಳಾ ಸಹಾಯ ಕೇಂದ್ರಗಳಿವೆ. ಮಹಿಳೆಯರ ಸುರಕ್ಷತೆಗೆ ಕೈಗೊಂಡ ಕ್ರಮಗಳನ್ನು ತಿಳಿಸಲು ಸೋಮವಾರ ವಿಶೇಷ ಅಭಿಯಾನ ನಡೆಸಲಾಯಿತು' ಎಂದು ಬಿ. ದಯಾನಂದ್ ಹೇಳಿದರು.


ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಬಿಎಂಟಿಸಿ ಬಸ್‌ನಲ್ಲಿ ಸೋಮವಾರ ಪ್ರಯಾಣಿಸಿದರು

ಕಂಬಕ್ಕೆ ಕಾರು ಡಿಕ್ಕಿ: ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟನೇ ಮೈಲಿ ಬಳಿಯ ಹೆಸರಘಟ್ಟ ಮುಖ್ಯರಸ್ತೆಯಲ್ಲಿ ವಿದ್ಯುತ್ ಕಂಬಕ್ಕೆ ಕಾರು ಡಿಕ್ಕಿಯಾಗಿ ಸರಣಿ ಅಪಘಾತ ಸಂಭವಿಸಿದ್ದು, ಬಿಬಿಎಂ ವಿದ್ಯಾರ್ಥಿ ಪ್ರಖ್ಯಾತ್ ಚಿನ್ನಪ್ಪ (22) ಮೃತಪಟ್ಟಿದ್ದಾರೆ.

'ಕೊಡಗಿನ ಪ್ರಖ್ಯಾತ್, ನಗರದ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದರು. ಸ್ನೇಹಿತರಾದ ನಟರಾಜ್, ಬಸನಗೌಡ ಹಾಗೂ ರಿಕ್ಕಿತ್ ಜೊತೆ ಕಾರಿನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಸ್ನೇಹಿತರೂ ಗಾಯಗೊಂಡಿದ್ದಾರೆ' ಎಂದು ಪೀಣ್ಯ ಸಂಚಾರ ಪೊಲೀಸರು ಹೇಳಿದರು.

'ಭಾನುವಾರ ಕಾಲೇಜಿಗೆ ರಜೆ ಇದ್ದಿದ್ದರಿಂದ ಪ್ರಖ್ಯಾತ್ ಹಾಗೂ ಸ್ನೇಹಿತರು, ಕಾರಿನಲ್ಲಿ ಜಾಲಿರೈಡ್ ಹೋಗಿದ್ದರು. ಭಾನುವಾರ ರಾತ್ರಿಯೆಲ್ಲ ನಗರ ಹಾಗೂ ಹೊರವಲಯದಲ್ಲಿ ಸುತ್ತಾಡಿದರು. ಸೋಮವಾರ ನಸುಕಿನ 4 ಗಂಟೆ ಸುಮಾರಿಗೆ ಕಾರಿನಲ್ಲಿ ಹೆಸರಘಟ್ಟ ಮುಖ್ಯರಸ್ತೆಗೆ ಬಂದಿದ್ದರು.'

'ಪ್ರಖ್ಯಾತ್, ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿದ್ದರು. ನಿಯಂತ್ರಣ ತಪ್ಪಿದ್ದ ಕಾರು, ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿತ್ತು. ಬಳಿಕ, ರಸ್ತೆ ಪಕ್ಕದಲ್ಲಿ ನಿಲ್ಲಿಸಿದ್ದ ಕಾರು ಹಾಗೂ ಎರಡು ದ್ವಿಚಕ್ರ ವಾಹನಗಳಿಗೆ ಕಾರು ಗುದ್ದಿತ್ತು' ಎಂದು ಪೊಲೀಸರು ತಿಳಿಸಿದರು.

'ಅಪಘಾತದಿಂದಾಗಿ ಕಾರಿನಲ್ಲಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿಯಲಾರಂಭಿಸಿತ್ತು. ಪ್ರಖ್ಯಾತ್ ಹಾಗೂ ಮೂವರು ಸ್ನೇಹಿತರು ತೀವ್ರ ಗಾಯಗೊಂಡಿದ್ದರು. ಅವರನ್ನು ಸ್ಥಳೀಯರೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆಯೇ ಪ್ರಖ್ಯಾತ್ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಅಪಘಾತದಿಂದಾಗಿ ಸ್ಥಳೀಯರ ಕಾರು ಹಾಗೂ ಎರಡು ದ್ವಿಚಕ್ರ ವಾಹನಗಳು ಜಖಂಗೊಂಡಿವೆ' ಎಂದರು.

'ಪ್ರಖ್ಯಾತ್ ಮದ್ಯದ ಅಮಲಿನಲ್ಲಿ ಕಾರು ಚಾಲನೆ ಮಾಡಿದ್ದರಿಂದ ಅಪಘಾತ ಸಂಭವಿಸಿರುವ ಅನುಮಾನವಿದೆ. ಮೃತದೇಹದ ಮರಣೋತ್ತರ ಪರೀಕ್ಷೆ ಬಳಿಕ ಮತ್ತಷ್ಟು ಮಾಹಿತಿ ದೊರೆಯಲಿದೆ' ಎಂದು ಪೊಲೀಸರು ಹೇಳಿದರು.

ಅಪಘಾತ: ಡೆಲಿವರಿ ಬಾಯ್ ಸಾವು

ಬೆಂಗಳೂರು: ನಾಯಂಡಹಳ್ಳಿ ಮೆಟ್ರೊ ನಿಲ್ದಾಣ ಬಳಿಯ ಪಂತರಪಾಳ್ಯ ಸಮೀಪ ಕಾರು ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಡೆಲಿವರಿ ಬಾಯ್ ಪ್ರಸನ್ನ ಕುಮಾರ್ (25) ಮೃತಪಟ್ಟಿದ್ದಾರೆ.

'ಎಚ್.ಡಿ.ಕೋಟೆಯ ಪ್ರಸನ್ನ ಕುಮಾರ್ ಡೆಲಿವರಿ ಬಾಯ್ ಆಗಿದ್ದರು. ಮೈಸೂರು ರಸ್ತೆಯಲ್ಲಿ ಭಾನುವಾರ ರಾತ್ರಿ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದಾಗ ಕಾರು ಡಿಕ್ಕಿಯಾಗಿ ಈ ಅವಘಡ ಸಂಭವಿಸಿದೆ' ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸರು ಹೇಳಿದರು.



'ಅಪಘಾತಕ್ಕೆ ಕಾರಣವಾದ ಕಾರು ಚಾಲಕ ವಿನಾಯಕ್ ಪರಾರಿಯಾಗಲು ಯತ್ನಿಸಿದ್ದ. ಸ್ಥಳೀಯರೇ ಆತನನ್ನು ಬೆನ್ನಟ್ಟಿ ಹಿಡಿದು ಥಳಿಸಿ ಠಾಣೆಗೆ ಒಪ್ಪಿಸಿದ್ದಾರೆ. ಪಾನಮತ್ತನಾಗಿ ಆತ ಕಾರು ಚಲಾಯಿಸಿದ್ದನೆಂಬುದು ವೈದ್ಯಕೀಯ ಪರೀಕ್ಷೆಯಿಂದ ಗೊತ್ತಾಗಿದೆ' ಎಂದರು.

ಸಹೋದ್ಯೋಗಿಗಳ ಜೊತೆ ಮದ್ಯ ಪಾರ್ಟಿ: 'ಆರೋಪಿ ವಿನಾಯಕ್, ರಾಜಾಜಿನಗರದಲ್ಲಿರುವ ವಾಹನ ಮಾರಾಟ ಮಳಿಗೆಯಲ್ಲಿ ಮಾರಾಟ ಪ್ರತಿನಿಧಿ ಆಗಿ ಕೆಲಸ ಮಾಡುತ್ತಿದ್ದ. ರಾತ್ರಿ ಸಹೋದ್ಯೋಗಿಗಳೆಲ್ಲರೂ ಸೇರಿ ಮದ್ಯದ ಪಾರ್ಟಿ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

'ಸಹೋದ್ಯೋಗಿಯೊಬ್ಬನನ್ನು ರಾಜರಾಜೇಶ್ವರಿನಗರದ ಮನೆಗೆ ಡ್ರಾಪ್ ಮಾಡಲು ವಿನಾಯಕ್ ಕಾರಿನಲ್ಲಿ ಹೊರಟಿದ್ದ. ನಾಲ್ವರು ಕಾರಿನಲ್ಲಿದ್ದರು. ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿದ್ದ' ಎಂದರು.

100 ಮೀಟರ್ ಉಜ್ಜಿಕೊಂಡು ಹೋದ ಕಾರು: 'ಪ್ರಸನ್ನಕುಮಾರ್ ಅವರ ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದಿತ್ತು. ನಂತರ, ದ್ವಿಚಕ್ರ ವಾಹನ ಹಾಗೂ ಪ್ರಸನ್ನ ಕುಮಾರ್ ಅವರನ್ನು 100 ಮೀಟರ್‌ವರೆಗೂ ಕಾರು ಉಜ್ಜಿಕೊಂಡು ಹೋಗಿತ್ತು' ಎಂದು ಪೊಲೀಸರು ಹೇಳಿದರು.

'ಆಕ್ರೋಶಗೊಂಡಿದ್ದ ಜನ, ಕಾರಿನ ಗಾಜುಗಳನ್ನು ಒಡೆದಿದ್ದಾರೆ. ಕಾರಿನಲ್ಲಿದ್ದ ಇಬ್ಬರು ಯುವತಿಯರು ಸೇರಿ ಮೂವರು ಪರಾರಿಯಾಗಿದ್ದಾರೆ. ಅಪಘಾತದ ಬಗ್ಗೆ ಪ್ರಕರಣ ದಾಖಲಿಸಿಕೊಂಡು ವಿನಾಯಕ್‌ನನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಸೇತುವೆ ಗೋಡೆಗೆ ಆಟೊ ಡಿಕ್ಕಿ- ಚಾಲಕ ಸಾವು: ವಿಜಯನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಆಟೊ ಚಾಲಕ ಸಂತೋಷ್ (33) ಮೃತಪಟ್ಟಿದ್ದಾರೆ.

'ಪಟ್ಟೇಗಾರಪಾಳ್ಯದ ಸಂತೋಷ್ (33), ಆಟೊ ಚಲಾಯಿಸಿಕೊಂಡು ರಾತ್ರಿ 10 ಗಂಟೆ ಸುಮಾರಿಗೆ ಮಾಗಡಿ ರಸ್ತೆಯ ಪ್ರಕೃತಿ ಪ್ಯಾರಡೈಸ್ ಬಳಿ ಹೊರಟಿದ್ದರು. ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದರು. ನಿಯಂತ್ರಣ ತಪ್ಪಿದ್ದ ಆಟೊ, ಸೇತುವೆಯ ಗೋಡೆಗೆ ಡಿಕ್ಕಿ ಹೊಡೆದು ಉರುಳಿ ಬಿದ್ದಿತ್ತು' ಎಂದು ಪೊಲೀಸರು ಹೇಳಿದರು.

'ತೀವ್ರ ಗಾಯಗೊಂಡಿದ್ದ ಸಂತೋಷ್ ಅವರನ್ನು ಸ್ಥಳೀಯರೇ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು. ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಅಂಗನವಾಡಿ ಕಟ್ಟಡ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕ್ಷೇತ್ರದಲ್ಲಿನ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಮೂಲ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ತಿಳಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ಕೆಂಪಾಪುರದಲ್ಲಿ ನೂತನವಾಗಿ ನಿರ್ಮಿಸಿದ ಅಂಗನವಾಡಿ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಕ್ಷೇತ್ರದ ಎಲ್ಲಾ ಶಾಲೆಗಳಲ್ಲಿನ ಸೌಲಭ್ಯಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಳ್ಳುತ್ತೇನೆ. ಶಾಲೆಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯ ಒದಗಿಸಲಾಗುವುದು. ಸರ್ಕಾರಿ ಶಾಲೆಯಲ್ಲಿ ಓದುವ ಮಕ್ಕಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಅಗತ್ಯ ಸೌಲಭ್ಯ ಒದಗಿಸಲು ಅಧಿಕಾರಿಗಳು ಕ್ರಮ ವಹಿಸಬೇಕಿದೆ ಎಂದರು. ಇಮ್ಮಡಿಹಳ್ಳಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡದ ಉದ್ಘಾಟಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಆರ್. ರಾಮಮೂರ್ತಿ, ಅಧಿಕಾರಿಗಳು, ಅಂಗನವಾಡಿ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಇದ್ದರು.



ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಅಂಗನವಾಡಿ ಕಟ್ಟಡ ಉದ್ಘಾಟಿಸಿದರು

'ರಾ' ಮುಖ್ಯಸ್ಥರಾಗಿ ರವಿ ಸಿನ್ಹಾ ನೇಮಕ

ನವದೆಹಲಿ (ಪಿಟಿಐ): ಹಿರಿಯ ಐಪಿಎಸ್ ಅಧಿಕಾರಿ ರವಿ ಸಿನ್ಹಾ ಅವರನ್ನು 'ರಾ' ಗೂಢಚಾರ ಸಂಸ್ಥೆಯ ಮುಖ್ಯಸ್ಥರಾಗಿ ನೇಮಿಸಲಾಗಿದೆ.



1988ರ ಐಪಿಎಸ್ ತಂಡದ, ಛತ್ತೀಸಗಢ ಕೇಡರ್‌ನ ಈ ಅಧಿಕಾರಿಯು ಪ್ರಸ್ತುತ ಸಂಪುಟ ಸಚಿವಾಲಯದಲ್ಲಿ ವಿಶೇಷ ಕಾರ್ಯದರ್ಶಿಯಾಗಿದ್ದಾರೆ.

'ಸಂಪುಟದ ನೇಮಕಾತಿ ಸಮಿತಿ ಅವರ ನೇಮಕವನ್ನು ಅನುಮೋದಿಸಿದೆ. ಅವರ ಅಧಿಕಾರಾವಧಿ ಎರಡು ವರ್ಷಗಳಾಗಿರುತ್ತವೆ' ಎಂದು ಸಿಬ್ಬಂದಿ ಸಚಿವಾಲಯದ ಹೇಳಿಕೆ ತಿಳಿಸಿದೆ.

ಸಿನ್ಹಾ ಅವರು ಬಡ್ತಿಗೆ ಮೊದಲು 'ರಾ' ಗೂಢಚಾರ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದ್ದು, ನಿರ್ವಹಣಾ ಘಟಕದ ಮುಖ್ಯಸ್ಥರಾಗಿದ್ದರು. ದೇಶದ ಜಮ್ಮು ಮತ್ತು ಕಾಶ್ಮೀರ, ಈಶಾನ್ಯ ಭಾಗಗಳಲ್ಲದೆ ವಿವಿಧ ರಾಷ್ಟ್ರಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ಹಾಲಿ ಮುಖ್ಯಸ್ಥ ಸಾಮಂತ್ ಕುಮಾರ್ ಗೋಯಲ್ ಅವರ ಅವಧಿ ಜೂನ್ 30ರಂದು ಮುಗಿಯಲಿದೆ. ತೆರವಾಗುವ ಸ್ಥಾನದಲ್ಲಿ ಸಿನ್ಹಾ ಅಧಿಕಾರ ಸ್ವೀಕರಿಸಲಿದ್ದಾರೆ. ಗೋಯಲ್ ಅವರನ್ನು 2019ರಲ್ಲಿ ಎರಡು ವರ್ಷಗಳ ಅವಧಿಗೆ ನೇಮಿಸಿದ್ದು, ಬಳಿಕ ಅವರ ಅವಧಿಯನ್ನು ಇನ್ನೆರಡು ವರ್ಷಗಳು ವಿಸ್ತರಿಸಲಾಗಿತ್ತು.

ವಾರ್ಡ್ ವಿಂಗಡಣೆಗೆ ಕಾಲಾವಕಾಶ

ಒಂದನೇ ಪುಟದಿಂದ

ವಿಚಾರಣೆ ವೇಳೆ ಮೇಲ್ಮನವಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಉದಯ ಹೊಳ್ಳ ಅವರು, 'ವಾರ್ಡ್ ಮರು ವಿಂಗಡಣೆ ಸಂಕೀರ್ಣ ಕೆಲಸ. ಎಲ್ಲ ವಾರ್ಡ್‌ಗಳನ್ನೂ ಸಮಾನ ಜನಸಂಖ್ಯೆಗೆ ಅನುಗುಣವಾಗಿ ವಿಂಗಡಿಸುವುದು ಸುಲಭವಲ್ಲ. ವಾರ್ಡ್ ಮರು ವಿಂಗಡಣೆಯಲ್ಲಿ ಕೆಲವೊಂದು ಲೋಪದೋಷಗಳಾಗಿವೆ ಎಂಬ ಅಂಶಗಳನ್ನು ಏಕಸದಸ್ಯ ನ್ಯಾಯಪೀಠ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ. ಇದನ್ನು ಸರಿಪಡಿಸುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಇದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, 'ಬಿಬಿಎಂಪಿ ವಾರ್ಡ್ ಮರು ವಿಂಗಡಣೆಯಲ್ಲಿ ಕೆಲವೊಂದು ಲೋಪದೋಷಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದಾಗ್ಯೂ, ಕಾಲಮಿತಿಯೊಳಗೆ ಚುನಾವಣೆ ನಡೆಸಲು ಸರ್ಕಾರ ಬದ್ಧವಾಗಿದೆ. ಇದಕ್ಕಾಗಿ ಸ್ವಲ್ಪ ಕಾಲಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ರಾಜ್ಯ ಸರ್ಕಾರಕ್ಕೆ 12 ವಾರ ಕಾಲಾವಕಾಶ ನೀಡಿ ವಿಚಾರಣೆ ಮುಂದೂಡಿತು.

ಪ್ರಕರಣವೇನು?: ಈ ಹಿಂದಿನ ಬಿಜೆಪಿ ಸರ್ಕಾರ ಬಿಬಿಎಂಪಿ ವಾರ್ಡ್‌ಗಳನ್ನು ಪುನರ್ ರಚಿಸಿ 2022ರ ಜುಲೈ 14ರಂದು ಅಧಿಸೂಚನೆ ಹೊರಡಿಸಿತ್ತು. ಈ ಅಧಿಸೂಚನೆ ರದ್ದುಪಡಿಸುವಂತೆ ಕೋರಿ ಮಾಜಿ ಶಾಸಕಿ ಸೌಮ್ಯಾ ರೆಡ್ಡಿ ಹಾಗೂ ಹಾಲಿ ಸಚಿವ ಜಮೀರ್ ಅಹ್ಮದ್ ಖಾನ್, ಮಾಜಿ ಮೇಯರ್ ಬಿ.ಎನ್. ಮಂಜುನಾಥ ರೆಡ್ಡಿ, ಶಾಸಕ ಎಂ.ಸತೀಶ್ ರೆಡ್ಡಿ ಸೇರಿದಂತೆ ಹಲವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿದ್ದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಸರ್ಕಾರದ ಅಧಿಸೂಚನೆಯಲ್ಲಿ ಮಧ್ಯಪ್ರವೇಶಿಸುವ ಅವಶ್ಯಕತೆ ಕಂಡುಬರುತ್ತಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ 2022ರ ಸೆಪ್ಟೆಂಬರ್ 16ರಂದು ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಿದ್ದಾರೆ. ಮೇಲ್ಮನವಿದಾರರ ಪರ ವಕೀಲ ಶತಭಿಷ ಶಿವಣ್ಣ ವಕಾಲತ್ತು ವಹಿಸಿದ್ದಾರೆ.

ಅರ್ಜಿದಾರರ ಆಕ್ಷೇಪಣೆ ಏನಿತ್ತು?

'ಬಿಬಿಎಂಪಿ ವ್ಯಾಪ್ತಿಯಲ್ಲಿನ 84 ಲಕ್ಷ ಜನಸಂಖ್ಯೆಯನ್ನು ಒಟ್ಟು 243 ವಾರ್ಡ್‌ಗಳಿಂದ ಭಾಗಿಸಿದರೆ ಪ್ರತಿ ವಾರ್ಡ್‌ಗೆ ಅಂದಾಜು 34,500 ಜನಸಂಖ್ಯೆಯಾಗುತ್ತದೆ. ವಾರ್ಡ್ ವಿಂಗಡಣೆಯಲ್ಲಿ ಜನಸಂಖ್ಯೆಯನ್ನು ಪರಿಗಣಿಸುವಲ್ಲಿ ಶೇ 10ರಷ್ಟು ಏರಿಳಿತದ ಅನುಪಾತ ಅನುಸರಿಸಲಾಗಿದೆ ಎಂದು ಸರ್ಕಾರ ಹೇಳಿದೆ. ಈ ಹೇಳಿಕೆಯ ಅನುಸಾರವೇ ಶೇ 10ರಷ್ಟು ಏರಿಳಿತದ ಅನುಪಾತವನ್ನು ಪರಿಗಣಿಸಿದರೂ ವಾರ್ಡ್ ಜನಸಂಖ್ಯೆ 31 ಸಾವಿರದಿಂದ 37 ಸಾವಿರದ ಆಸುಪಾಸಿಗೆ ಬರುತ್ತದೆ. ಆದರೆ, ಕೆಲ ವಾರ್ಡ್‌ಗಳಲ್ಲಿ 30 ಸಾವಿರ ಜನಸಂಖ್ಯೆಯಿದೆ. ಕೆಲ ವಾರ್ಡ್‌ಗಳಿಗೆ 39 ಸಾವಿರ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ. ಇದನ್ನು ರಾಜಕೀಯ ಲಾಭದ ದೃಷ್ಟಿ ಇರಿಸಿಕೊಂಡು ನಿಗದಿಪಡಿಲಾಗಿದೆ' ಎಂದು ಮೇಲ್ಮನವಿದಾರರು ರಿಟ್ ಅರ್ಜಿಯಲ್ಲಿ ಆಕ್ಷೇಪಿಸಿದ್ದರು.



ಲೋಪಗಳನ್ನು ಸರಿಪಡಿಸಿಕೊಂಡು ಹೊಸದಾಗಿ ವಾರ್ಡ್ ಮರು ವಿಂಗಡಣೆ ಮಾಡುವುದು ಅನಿವಾರ್ಯವಾಗಿದೆ. ಆ ನಂತರವೇ ಚುನಾವಣೆ ವಿಚಾರಣೆಯಲ್ಲಿ ಸರ್ಕಾರ ಮುಂದುವರಿಯುತ್ತದೆ
ಕೆ.ಶಶಿಕಿರಣ್ ಶೆಟ್ಟಿ
ಅಡ್ವೊಕೇಟ್ ಜನರಲ್

ಕೆಂಪಣ್ಣ ಎಲ್ಲಿದ್ದೀರಿ: ಬೊಮ್ಮಾಯಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಜತೆ ಸೇರಿಕೊಂಡು ಸುಳ್ಳು ಆರೋಪಗಳನ್ನು ಮಾಡಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಎಲ್ಲಿ ಹೋಗಿದ್ದಾರೆ? ಗುತ್ತಿಗೆದಾರರ ಬಿಲ್‌ನ ಒಂದು ಪೈಸೆಯೂ ಬಿಡುಗಡೆ ಮಾಡಿಲ್ಲ. ಸಚಿವರು ರೇಟ್ ಫಿಕ್ಸ್ ಮಾಡಿಕೊಳ್ಳುತ್ತಿದ್ದಾರೆ. ಕೆಂಪಣ್ಣ ಏಕೆ ಮಾತನಾಡುತ್ತಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

ಸೋಮವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಹುತೇಕ ಸಚಿವರು ಹಿಂದಿನ ಸರ್ಕಾರದ ಚಾಲ್ತಿಯಲ್ಲಿದ್ದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿಲ್ಲಿಸಿದ್ದಾರೆ' ಎಂದು ದೂರಿದರು.


'ಸರ್ಕಾರ ಬಂದು ಒಂದು ತಿಂಗಳು ಕಳೆದರೂ ಯಾರೂ ತಮ್ಮ ಇಲಾಖೆಗಳ ಪ್ರಗತಿಯ ಬಗ್ಗೆ ಮಾತನಾಡುತ್ತಿಲ್ಲ. ಮಳೆಗಾಲ ಆರಂಭವಾಗುತ್ತಿದೆ, ಒಂದು ವರ್ಷದ ಕಾಮಗಾರಿಗಳನ್ನು ಅಸ್ತವ್ಯಸ್ತಗೊಳಿಸಲು ಮುಂದಾಗಿದ್ದಾರೆ' ಎಂದರು.

ಅಧಿಕಾರಕ್ಕೆ ಬಂದ ದಿನದಿಂದಲೇ ಕಾಂಗ್ರೆಸ್ ಸರ್ಕಾರ ಗೊಂದಲದ ಗೂಡಾಗಿದೆ. ಉಚಿತ ಬಸ್ ಪ್ರಯಾಣವೂ ಸೇರಿ ಗ್ಯಾರಂಟಿ ಯೋಜನೆಗಳು ಅಧ್ವಾನ ಆಗಿವೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಐದು ವರ್ಷ ಪೂರ್ಣಗೊಳಿಸುವ ಸಾಧ್ಯತೆ ಇಲ್ಲ ಎಂದು ಅವರ ಸಂಪುಟ ಸಹೋದ್ಯೋಗಿಗಳೇ ಹೇಳುತ್ತಿದ್ದಾರೆ ಎಂದೂ ಬೊಮ್ಮಾಯಿ ಹೇಳಿದರು.

'ಸರಿಯಾಗಿ ಬಸ್‌ಗಳ ವ್ಯವಸ್ಥೆ ಮಾಡದೇ ಉಚಿತ ಬಸ್ ಯೋಜನೆ ಜಾರಿ ಮಾಡಿದ್ದಾರೆ. ಇದರಿಂದ ಸಾರ್ವಜನಿಕರು ಸರ್ಕಾರದ ವಿರುದ್ಧ ಬಾಯಿಗೆ ಬಂದ ಹಾಗೆ ಬೈಯ್ಯುತ್ತಿದ್ದಾರೆ. ಅವ್ಯವಸ್ಥೆಯ ಮಧ್ಯೆ ಕೆಲಸ ಮಾಡಲು ಆಗುತ್ತಿಲ್ಲ ಎಂದು ಅಧಿಕಾರಿಗಳು ಅಸಹಾಯಕತೆ ತೋಡಿಕೊಳ್ಳುತ್ತಿದ್ದಾರೆ' ಎಂದರು.

'ಎಲ್ಲ ಕಾಮಗಾರಿಗಳೂ ಸ್ಥಗಿತ'



ಹಲವು ಸಚಿವರು ಹಿಂದಿನ ಅವಧಿಯ ವಿವಿಧ ರೀತಿಯ ಕಾಮಗಾರಿಗಳ ಕಾರ್ಯವನ್ನು ನಿಲ್ಲಿಸಿದ್ದಾರೆ ಎಂದು ಬಸವರಾಜ ಬೊಮ್ಮಾಯಿ ದೂರಿದರು.

ಸರ್ಕಾರ ಬಂದು ಒಂದು ತಿಂಗಳು ಕಳೆದರೂ ಯಾರೂ ತಮ್ಮ ಇಲಾಖೆಗಳ ಬಗ್ಗೆ ಮಾತನಾಡುತ್ತಿಲ್ಲ. ಇನ್ನು ಮಳೆಗಾಲ ಆರಂಭವಾಗುತ್ತದೆ. ಯಾವುದೇ ಕಾಮಗಾರಿ ನಡೆಸದೇ ಒಂದು ವರ್ಷದ ಕಾಮಗಾರಿಗಳನ್ನು ಅಸ್ತವ್ಯಸ್ತಗೊಳಿಸಲು ಮುಂದಾಗಿದ್ದಾರೆ ಎಂದರು.

ಕೆಂಪಣ್ಣ ಏನು ಮಾಡುತ್ತಿದ್ದಾರೆ?: 'ನಮ್ಮ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಜತೆ ಸೇರಿಕೊಂಡು ಸುಳ್ಳು ಆರೋಪಗಳನ್ನು ಮಾಡಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಎಲ್ಲಿ ಹೋಗಿದ್ದಾರೆ. ಗುತ್ತಿಗೆದಾರರ ಬಿಲ್ ಒಂದು ಪೈಸೆಯೂ ಬಿಡುಗಡೆ ಮಾಡಿಲ್ಲ. ಸಚಿವರು ರೇಟ್ ಫಿಕ್ಸ್ ಮಾಡಿಕೊಳ್ಳುತ್ತಿದ್ದಾರೆ. ಕೆಂಪಣ್ಣ ಏಕೆ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ಡಿಕೆಶಿ ಮಾಟ ಮಂತ್ರದಲ್ಲಿ ಫೇಮಸ್. ಮಾಟ ಮಂತ್ರ ಮಾಡಿ ಅಕ್ಕಿ ಪಡೆಯಲಿ. ಅಕ್ಕಿ ಹೆಚ್ಚುವರಿ ಇದೆ ಅಂದ್ರೆ ಅದು ಕಾಂಗ್ರೆಸ್ ನವರ ಮನೆಯಲ್ಲಿ ಇರಬಹುದು
ಆರ್.ಅಶೋಕ, ಬಿಜೆಪಿ ಶಾಸಕ

ಶರಣರ ಜಾಮೀನು: ಸೂಕ್ತ ಪೀಠದ ಮುಂದೆ ವಿಚಾರಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಶರಣರು ನಿಯಮಿತ (ರೆಗ್ಯುಲರ್) ಜಾಮೀನು ಕೋರಿ ಸಲ್ಲಿಸಿರುವ ಅರ್ಜಿ ವಿಚಾರಣೆಯು ಕಾರ್ಯಸೂಚಿ (ರೋಸ್ಟರ್ ಅನುಸಾರ ಅರ್ಜಿ ಯಾವ ನ್ಯಾಯಮೂರ್ತಿಗಳ ಮುಂದೆ ವಿಚಾರಣೆಗೆ ನಿಗದಿಯಾಗಬೇಕೆಂಬುದು) ಪ್ರಕ್ರಿಯೆಗಳಿಗೆ ಅನುಗುಣವಾಗಿಯೇ ವಿಚಾರಣೆಗೆ ಒಳಪಡಲಿ' ಎಂದು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಈ ಕುರಿತಂತೆ ಶಿವಮೂರ್ತಿ ಶರಣರು ಸಲ್ಲಿಸಿರುವ ಕ್ರಿಮಿನಲ್ ಅರ್ಜಿ (ಸಿಆರ್‌ಎಲ್‌ಪಿ 5031/2023) ನ್ಯಾಯಮೂರ್ತಿ ಪಿ.ಎಂ.ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸೋಮವಾರ ಬೆಳಿಗ್ಗೆ ವಿಚಾರಣೆಗೆ ನಿಗದಿಯಾಗಿತ್ತು.

ಕೋರ್ಟ್ ಹಾಲ್ ಪ್ರಕರಣಗಳ ಯಾದಿಯ ಅನುಸಾರ ಅರ್ಜಿ ವಿಚಾರಣೆಗೆ ಬರುತ್ತಿದ್ದಂತೆ ನ್ಯಾಯಮೂರ್ತಿ ನವಾಜ್ ಅವರು, 'ಈ ಅರ್ಜಿಯು ರೋಸ್ಟರ್ ಪ್ರಕ್ರಿಯೆಗಳಿಗೆ ಅನುಗುಣವಾಗಿ ಸೂಕ್ತವಾದ ನ್ಯಾಯಪೀಠದ ಮುಂದೆಯೇ ನಿಗದಿಯಾಗಬೇಕಿದೆ. ಹೀಗಾಗಿ, ಈ ಅಂಶವನ್ನು ಮುಖ್ಯ ನ್ಯಾಯಮೂರ್ತಿಗಳ ಅವಗಾಹನೆಗೆ ತನ್ನಿ' ಎಂದು ರಿಜಿಸ್ಟ್ರಿಗೆ ಸೂಚಿಸಿದರು. ಶಿವಮೂರ್ತಿ ಶರಣರ ಪರ ವಕೀಲ ಸಂದೀಪ್ ಎಸ್.ಪಾಟೀಲ ಹಾಜರಾಗಿದ್ದರು.

ತಂದೆ ಬೈದಿದ್ದಕ್ಕೆ ಮನೆ ತೊರೆದಿದ್ದ ಅಕ್ಕ–ತಂಗಿ: ಧರ್ಮಸ್ಥಳದಲ್ಲಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಕೊಲೇಟ್ ತಿಂದಿದ್ದಕ್ಕೆ ತಂದೆ ಬೈದರೆಂಬ ಕಾರಣಕ್ಕೆ ಮನೆ ತೊರೆದು ನಾಪತ್ತೆಯಾಗಿದ್ದ ಅಕ್ಕ–ತಂಗಿ ಧರ್ಮಸ್ಥಳದಲ್ಲಿ ಪತ್ತೆಯಾಗಿದ್ದು, ಕೋಣನಕುಂಟೆ ಠಾಣೆ ಪೊಲೀಸರು ಅವರಿಬ್ಬರನ್ನು ಪೋಷಕರ ಸುಪರ್ದಿಗೆ ಒಪ್ಪಿಸಿದ್ದಾರೆ.

'9 ವರ್ಷ ಹಾಗೂ 11 ವರ್ಷ ವಯಸ್ಸಿನ ಅಕ್ಕ–ತಂಗಿ ಪೋಷಕರ ಜೊತೆ ವಾಸವಿದ್ದಾರೆ. ಚಾಕೊಲೇಟ್ ಖರೀದಿಸುವುದಕ್ಕಾಗಿ ಬಾಲಕಿಯರು, ತಂದೆ ಬಳಿ ಹಣ ಕೇಳಿದ್ದರು. ಹಣ ನೀಡದ ತಂದೆ, ಚಾಕೊಲೇಟ್ ತಿನ್ನದಂತೆ ತಾಕೀತು ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ತಂದೆಯ ವರ್ತನೆಯಿಂದ ಅಸಮಾಧಾನಗೊಂಡಿದ್ದ ಬಾಲಕಿಯರು, ಬೇರೆಯವರ ಬಳಿ ಹಣ ಪಡೆದು ಚಾಕೊಲೇಟ್ ಖರೀದಿಸಿ ತಿಂದಿದ್ದರು. ನಂತರ, ಚಾಕೊಲೇಟ್ ತಿಂದಿರುವುದಾಗಿ ತಂದೆಗೆ ತಿಳಿಸಿದ್ದರು. ಕೋಪಗೊಂಡ ತಂದೆ, ಮತ್ತಷ್ಟು ಬೈದಿದ್ದರು. ಅದರಿಂದ ನೊಂದ ಬಾಲಕಿಯರು, ಮನೆ ಬಿಟ್ಟು ಹೋಗಲು ತೀರ್ಮಾನಿಸಿದ್ದರು.'

'ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣವೆಂಬುದನ್ನು ತಿಳಿದ ಬಾಲಕಿಯರು, ಗುರುತಿನ ಚೀಟಿ ಸಮೇತ ಜೂನ್ 16ರಂದು ರಾತ್ರಿ ಮೆಜೆಸ್ಟಿಕ್ ನಿಲ್ದಾಣಕ್ಕೆ ತೆರಳಿದ್ದರು. ಕೆಎಸ್‌ಆರ್‌ಟಿಸಿ ಬಸ್ ಹತ್ತಿ, ಧರ್ಮಸ್ಥಳಕ್ಕೆ ಹೋಗಿದ್ದರು. ಅವರ ಬಳಿ ಮೊಬೈಲ್ ಸಹ ಇತ್ತು' ಎಂದು ಮೂಲಗಳು ತಿಳಿಸಿವೆ.

'ಮಕ್ಕಳು ಮನೆಗೆ ಬಾರದಿದ್ದರಿಂದ ಗಾಬರಿಗೊಂಡಿದ್ದ ಪೋಷಕರು ಠಾಣೆಗೆ ದೂರು ನೀಡಿದ್ದರು. ಬಾಲಕಿಯರ ಬಳಿಯ ಮೊಬೈಲ್ ನೆಟ್‌ವರ್ಕ್ ಆಧರಿಸಿ ತನಿಖೆ ನಡೆಸಿದಾಗ, ಧರ್ಮಸ್ಥಳದಲ್ಲಿರುವ ಮಾಹಿತಿ ಲಭ್ಯವಾಗಿತ್ತು. ಅಲ್ಲಿಗೆ ಹೋಗಿದ್ದ ಪೊಲೀಸರ ತಂಡ, ಬಾಲಕಿಯರ ಮನವೊಲಿಸಿ ನಗರಕ್ಕೆ ಕರೆತಂದು ಪೋಷಕರಿಗೆ ಒಪ್ಪಿಸಿದೆ' ಎಂದು ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ಕೋಟೆ ಮಾರಮ್ಮ ದೇವಿಯ ಊರನಾಡ ಹಬ್ಬ, ರಜತ ಮಹೋತ್ಸವ: ಕೋಟೆ ಜಲಕಂಠೇಶ್ವರ ದೇವಸ್ಥಾನದಿಂದ ಗಂಗೆಯನ್ನು ತರುವುದು ಬೆಳಿಗ್ಗೆ 7.30ಕ್ಕೆ, ಮಾರಮ್ಮ ದೇವಿಗೆ ಮಹಾಭಿಷೇಕ 8.30ಕ್ಕೆ, ಪಲ್ಲಕ್ಕಿ ಮೆರವಣಿಗೆ ಸಂಜೆ 4ಕ್ಕೆ, ಆಯೋಜನೆ ಮತ್ತು ಸ್ಥಳ: ಕೋಟೆ ಮಾರಮ್ಮ ದೇವಸ್ಥಾನದ ಅನ್ನದಾನ ಸಮಿತಿ, ಕೋಟೆ ಇ ಬೀದಿ

ರಾಜೇಶ್ವರಿ ಜಯಕೃಷ್ಣ ಅವರ 'ಜನಪ್ರಿಯ ಗಾದೆಗಳು', ಶೈಲಜಾ ಸುರೇಶ್ ಸಂಪಾದಿಸಿದ 'ಕುಟುಂಬ' ಪುಸ್ತಕಗಳ ಬಿಡುಗಡೆ: ಕೌಸಲ್ಯ ಧರಣೇಂದ್ರಯ್ಯ, ಉದ್ಘಾಟನೆ: ಮುಕುಂದ್ ಗಂಗೂರ್, ಅಧ್ಯಕ್ಷತೆ: ಎಸ್.ಎಲ್. ಮಂಜುನಾಥ್, ಅತಿಥಿಗಳು: ಬಿ.ಎಸ್. ವಿದ್ಯಾರಣ್ಯ, ಜರಗನಹಳ್ಳಿ ಸದಾಶಿವಯ್ಯ, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ವಿಜಯಾ ಸಂಜೆ ಪದವಿಪೂರ್ವ ಕಾಲೇಜಿನ ಸಭಾಂಗಣ, ಜಯನಗರ, ಮಧ್ಯಾಹ್ನ 3.30

ಯೋಗ ರತ್ನ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ವಚನಾನಂದ ಸ್ವಾಮೀಜಿ, ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಪ್ರಲ್ಹಾದ್ ಜೋಶಿ, ಎಚ್.ಕೆ. ಪಾಟೀಲ, ದಿನೇಶ್ ಗುಂಡೂರಾವ್, ಪ್ರಕಾಶ್ ಆಮ್ಟೆ, ಪ್ರಶಸ್ತಿ ಪುರಸ್ಕೃತರು: ಅಹಿಂಸಿನ್ ಸಂಸ್ಥೆ, ಅಗಸ್ ಇಂದ್ರ ಉದಯನ್, ಮನಮೋಹನ್ ಸಿಂಗ್ ಭಂಡಾರಿ, ವಿಕ್ಟರ್ ಟ್ರುವಿಯಾನೋ, ಗುರೂಜಿ ಬಸವರಾಜ ಹಡಗಲಿ, ಆಯೋಜನೆ: ಯೋಗಮುಕ್ತ–ರೋಗಮುಕ್ತ, ಸ್ಥಳ: ಚಾಮರವಜ್ರ, ಜಯಮಹಲ್ ಮುಖ್ಯರಸ್ತೆ, ಸಂಜೆ 4

'ಸತೀ ಶಕ್ತಿ ಶಿವಭಕ್ತ ಪುರುಷಾಮೃಗ ಅಗ್ರಪೂಜೆ' ತೆಂಕುತಿಟ್ಟು ಪೌರಾಣಿಕ ಯಕ್ಷಗಾನ ಪ್ರಸಂಗಗಳ ಪ್ರದರ್ಶನ: ಆಯೋಜನೆ: ಕರಾವಳಿ ಯಕ್ಷಗಾನ ಕಲಾವಿದರು, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

‘ಪೂರ್ಣಾವಧಿ ಸಿ.ಎಂ ಎನ್ನುವ ಧೈರ್ಯ ಸಿದ್ದರಾಮಯ್ಯಗಿಲ್ಲ’

ಪ್ರಜಾವಾಣಿ ವಾರ್ತೆ



ಪ್ರತಾಪ ಸಿಂಹ

ಮೈಸೂರು: ‘ಪೂರ್ಣಾವಧಿ ಸಿ.ಎಂ ಎಂದು ಹೇಳಿಕೊಳ್ಳುವ ಧೈರ್ಯ ಸಿದ್ದರಾಮಯ್ಯ ಅವರಿಗಿಲ್ಲ’ ಎಂದು ಸಂಸದ ಪ್ರತಾಪ ಸಿಂಹ ಟೀಕಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರಿಯಲಿದ್ದಾರೆಂದು ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ ಹಾಗೂ ಎಂ.ಬಿ. ಪಾಟೀಲ ಹೇಳಿದ್ದಾರೆ. ಅಧಿಕಾರ ಬಿಟ್ಟು ಕೊಡುವ ಇರಾದೆ ಇಲ್ಲದ ಸಿದ್ದರಾಮಯ್ಯ, ತಮ್ಮ ಚೇಲಾಪಡೆ ಮೂಲಕ ಹೇಳಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಾತ್ರ ದೊಡ್ಡದಿದೆ. ಆದರೆ, ಪಕ್ಷ ದೊಡ್ಡ ಮನಸ್ಸಿನಿಂದ ಸಿದ್ದರಾಮಯ್ಯ ಅವರಿಗೆ 2ನೇ ಬಾರಿಗೆ ಅವಕಾಶ ಕೊಟ್ಟಿದೆ. ಅಂತಹ ದೊಡ್ಡ ಮನಸ್ಸು ಸಿದ್ದರಾಮಯ್ಯಗಿಲ್ಲ’ ಎಂದು ಹೇಳಿದರು.

‘ಪ್ರತಾಪ ಸಿಂಹ ಚಿಲ್ಲರೆ ರಾಜಕಾರಣ ಬಿಡಲಿ’ ಎಂಬ ಸಚಿವ ಎಂ.ಬಿ. ಪಾಟೀಲ ಹೇಳಿಕೆಗೆ ತಿರುಗೇಟು ನೀಡಿದ ಅವರು, ‘ಅವರು ಸಿದ್ದರಾಮಯ್ಯ ಚೇಲಾ ಪಡೆಯ ಅಧ್ಯಕ್ಷ. ಅವರ ಖಾತೆಯಲ್ಲಿ ಚಿಲ್ಲರೆಯಷ್ಟೇ ಸಿಗುತ್ತದೆ. ಕಂತೆ ಕಂತೆ ದುಡ್ಡು ಬರುವ ಖಾತೆ ಸಿಗಲಿಲ್ಲವೆಂದು ಒದ್ದಾಡುತ್ತಿದ್ದಾರೆ. ಸಿದ್ದರಾಮಯ್ಯ ಓಲೈಕೆಯೇ ಜವಾಬ್ದಾರಿ ಎಂದುಕೊಂಡಿದ್ದಾರೆ’ ಎಂದರು. ‘ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಬಗ್ಗೆ ಪದೇ ಪದೇ ಏಕೆ ಮಾತನಾಡುತ್ತೀರಿ? ಬ್ರಾಹ್ಮಣರ ಮೇಲೆ ಏಕಿಷ್ಟು ದ್ವೇಷ? ಬಸವೇಶ್ವರರು ಬ್ರಾಹ್ಮಣರಲ್ಲವೇ? ನೀವು ನಿಜವಾಗಲೂ ಲಿಂಗಾಯತರಾ’ ಎಂದರು.

ಎಂ.ಬಿ.ಪಾಟೀಲ ಕಿಡಿ

ಬೆಂಗಳೂರು: ‘ಓರ್ವ ಸಂಸದ ಲಘುವಾಗಿ ಲಂಗು–ಲಗಾಮಿಲ್ಲದೇ ಏನೇನೋ ಮಾತನಾಡುತ್ತಿದ್ದಾರೆ. ಸ್ವಪಕ್ಷ–ವಿಪಕ್ಷದವರ ಬಗ್ಗೆ ಬೇಕಾಬಿಟ್ಟಿ ಮಾತನಾಡಿಕೊಂಡು ದಿನ ಕಳೆಯುವುದೇ ಇವರ ದಿನಚರಿ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಸಂಸದ ಪ್ರತಾಪ ಸಿಂಹ ವಿರುದ್ಧ ಕಿಡಿ ಕಾರಿದ್ದಾರೆ.

‘ಇವರು ಮತ್ತು 2–3 ಭಾಷಣ ಮಂಡಳಿಯ ಸದಸ್ಯರು ತಮ್ಮದೇ ಪಕ್ಷದ ನಾಯಕರಾದ ಯಡಿಯೂರಪ್ಪ ಏನು ಮಾಡಿದ್ದಾರೆ. ಅವರ ಕೊಡುಗೆ ಏನು ಎಂದು ಪ್ರಶ್ನಿಸುವ ಧಾಟಿಯಲ್ಲಿ ಮಾತನಾಡುತ್ತಲೇ ಅವರನ್ನು ಅಧಿಕಾರದಿಂದ ಇಳಿಸಿದರು’ ಎಂದೂ ಹೇಳುತ್ತಾರೆ.

‘ಲಘುವಾಗಿ ಮಾತನಾಡಿ ಅವರ ಪಕ್ಷದ ಸ್ಥಿತಿ ಏನಾಗಿದೆ ಎಂಬುದನ್ನು ರಾಜ್ಯ ಕಂಡಿದೆ. ನಾನು ಸುಮಾರು 20 ವರ್ಷಗಳ ಹಿಂದೆ ನನ್ನ 33ನೇ ವಯಸ್ಸಿಗೆ ಸಂಸದನಾದವನು. ನಾನು ಯಾವುದೇ ಅಲೆಯಲ್ಲಿ ಗೆದ್ದು ಸಂಸದನಾದವನಲ್ಲ. ವಾಜಪೇಯಿ ಅಲೆಯಲ್ಲಿಯೂ ಸಹ ಗೆದ್ದ ಉತ್ತರ ಕರ್ನಾಟಕ ಭಾಗದ ಏಕೈಕ ಕಾಂಗ್ರೆಸ್ ಸಂಸದ’ ಎಂದು ಹೇಳಿದ್ದಾರೆ.

‘ತಮ್ಮ ಸ್ಥಾನ ಶಾಶ್ವತ ಎಂದು ಅವರು ತಿಳಿದಂತಿದೆ. ಕೇವಲ 10 ತಿಂಗಳುಗಳಲ್ಲಿ ಚುನಾವಣೆ ಬರಲಿದ್ದು, ಜನರ ಮುಂದೆ ಹೋಗಲಿದ್ದಾರೆ ಎಂಬುದನ್ನು ಮರೆತಿರಬಹುದು. ನೆನಪಿರಲಿ ಎವರಿ ಡೇ ಈಸ್ ನಾಟ್ ಎ ಸಂಡೇ’ ಎಂದೂ ವ್ಯಂಗ್ಯವಾಡಿದ್ದಾರೆ.

ಕೆಎಸ್‌ಡಿಎಲ್‌ನಲ್ಲಿ ಲೋಕಾಯುಕ್ತ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಬೂನು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಕಚೇರಿ ಮೇಲೆ ಸೋಮವಾರ ದಾಳಿ ಮಾಡಿ ಶೋಧ ನಡೆಸಿರುವ ಲೋಕಾಯುಕ್ತ ಪೊಲೀಸರು, ಹಲವು ವರ್ಷಗಳಿಂದ ಈಚೆಗೆ ನಡೆದಿರುವ ಟೆಂಡರ್ ಪ್ರಕ್ರಿಯೆ, ಕಚ್ಚಾವಸ್ತು ಖರೀದಿ ಹಾಗೂ ಹಣಕಾಸು ವಹಿವಾಟಿಗೆ ಸಂಬಂಧಿಸಿದ ಕಡತಗಳನ್ನು ವಶಪಡಿಸಿಕೊಂಡಿದ್ದಾರೆ.

ಕೆಎಸ್‌ಡಿಎಲ್‌ಗೆ ಕಚ್ಚಾವಸ್ತು ಪೂರೈಸುವ ಗುತ್ತಿಗೆ ಪಡೆದಿದ್ದ ಕಂಪನಿಯೊಂದರ ಮಾಲೀಕರಿಂದ ₹ 40 ಲಕ್ಷ ಲಂಚ ಪಡೆಯುತ್ತಿದ್ದ ಹಿಂದಿನ ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರ ಮಗ ಪ್ರಶಾಂತ್ ಮಾಡಾಳ್ ಅವರನ್ನು ಲೋಕಾಯುಕ್ತ ಪೊಲೀಸರು ಮಾರ್ಚ್ 2ರಂದು ಬಂಧಿಸಿದ್ದರು. ಅವರ ಕಚೇರಿ ಹಾಗೂ ಮನೆಗಳಲ್ಲಿ ಒಟ್ಟು ₹ 8.28 ಕೋಟಿ ನಗದು ಪತ್ತೆಯಾಗಿತ್ತು. ಈ ಪ್ರಕರಣದಲ್ಲಿ ವಿರೂಪಾಕ್ಷಪ್ಪ ಅವರನ್ನೂ ಬಂಧಿಸಲಾಗಿತ್ತು.

ಕೆಎಸ್‌ಡಿಎಲ್‌ನಲ್ಲಿ ನಡೆದ ಸಮಗ್ರ ಅವ್ಯವಹಾರಗಳ ಕುರಿತು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ವಿಚಾರಣೆ ಆರಂಭಿಸಿದ್ದಾರೆ. ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ನಡೆಯುತ್ತಿರುವ ವಿಚಾರಣೆಗೆ ಪೂರಕವಾಗಿ ದಾಖಲೆಗಳನ್ನು ವಶಕ್ಕೆ ಪಡೆಯಲು ಶೋಧ ನಡೆಸುವಂತೆ ಲೋಕಾಯುಕ್ತರು ವಾರೆಂಟ್ ಹೊರಡಿಸಿದ್ದರು. ರಾಜಾಜಿನಗರದಲ್ಲಿರುವ ಸಂಸ್ಥೆಯ ಕಚೇರಿ ಮೇಲೆ ಸೋಮವಾರ ಬೆಳಿಗ್ಗೆ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ರಾತ್ರಿಯವರೆಗೂ ಶೋಧ ನಡೆಸಿದರು.

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ ಕೆ.ವಿ. ಅಶೋಕ್ ನೇತೃತ್ವದಲ್ಲಿ ನಡೆದ ಶೋಧ ಕಾರ್ಯಾಚರಣೆಯಲ್ಲಿ ಹಲವು ಅಧಿಕಾರಿಗಳು ಸಿಬ್ಬಂದಿ ಪಾಲ್ಗೊಂಡಿದ್ದರು. ಕೆಎಸ್‌ಡಿಎಲ್‌ನಲ್ಲಿ ಕಚ್ಚಾವಸ್ತು ಖರೀದಿಗೆ ಟೆಂಡರ್ ಆಹ್ವಾನ, ಬಿಡ್ ಅಂತಿಮಗೊಳಿಸಿರುವುದು, ಕಚ್ಚಾ ವಸ್ತುಗಳ ಮಾದರಿ ಪರೀಕ್ಷೆ, ಹಣ ಪಾವತಿಗೆ ಸಂಬಂಧಿಸಿದ ಹಲವು ಕಡತಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಸಾರಿಗೆ ನಿಗಮಗಳ ಪತ್ತಿನ ಸಂಘದಲ್ಲಿ ಅಕ್ರಮ ನೇಮಕಾತಿ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಪತ್ತಿನ ಸಹಕಾರ ಸಂಘದ 39 ಹುದ್ದೆಗಳಿಗೆ ಸಂಘದ ನಿರ್ದೇಶಕರ ಮಕ್ಕಳು, ಪದಾಧಿಕಾರಿಗಳ ಸಂಬಂಧಿಕರನ್ನೇ ಅಕ್ರಮವಾಗಿ ನೇಮಕಾತಿ ಮಾಡಿಕೊಂಡಿದ್ದು, ಸಹಕಾರ ಸಂಘಗಳ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟ ಆರೋಪಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಆರ್. ಚಂದ್ರಶೇಖರ್, ‘2023ನೇ ಸಾಲಿನಲ್ಲಿ ಸಾರಿಗೆ ನಿಗಮಗಳ ನೌಕರರ ಪತ್ತಿನ ಸಂಘಕ್ಕೆ 39 ಹುದ್ದೆಗಳ ನೇಮಕಾತಿಯನ್ನು ತರಾತುರಿಯಲ್ಲಿ ನಡೆಸಲಾಗಿದೆ. ಎಐಟಿಯುಸಿ ಬೆಂಬಲಿತ ಕಾರ್ಮಿಕ ಸಂಘಟನೆಯ ಪದಾಧಿಕಾರಿಗಳ ಸಂಬಂಧಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ಮೂಲಕ ನಿರ್ದೇಶಕರ ಮಕ್ಕಳು ಮತ್ತು ರಕ್ತ ಸಂಬಂಧಿಗಳನ್ನು ನೇಮಕಾತಿ ಮಾಡಿಕೊಳ್ಳಬಾರದೆಂಬ ನಿಯಮ ಉಲ್ಲಂಘನೆಯಾಗಿದೆ’ ಎಂದು ಹೇಳಿದರು.

‘ಬೆಂಗಳೂರು ನಗರದ 6ರಿಂದ 12 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಬನಶಂಕರಿ, ಕೆಂಪೇಗೌಡ ಬಸ್ ನಿಲ್ದಾಣ, ಯಶವಂತಪುರಗಳಲ್ಲಿ ಸಹಕಾರಿ ಸಂಘದ ಶಾಖೆಗಳನ್ನು ವಿಸ್ತರಿಸುತ್ತಿದ್ದಾರೆ. ಇದರಿಂದ, ಸಂಘಕ್ಕೆ ಆರ್ಥಿಕ ನಷ್ಟವಾಗಲಿದೆ. ಈ ಬಗ್ಗೆ ಸಹಕಾರ ಸಂಘಗಳ ಆಯುಕ್ತರಿಗೆ ದೂರು ನೀಡಲಾಗಿದೆ. ಅಧಿಕಾರಿಗಳು ಪತ್ರ ವ್ಯವಹಾರ ಮಾಡುವುದರ ಮೂಲಕ ಕಾಲಹರಣ ಮಾಡುತ್ತಿದ್ದಾರೆ. ಕೂಡಲೇ ಸಂಘದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ಕೈಗೊಳ್ಳದಿದ್ದರೆ ಸಹಕಾರ ಸಂಘಗಳ ಕಚೇರಿ ಎದುರು ಪ್ರತಿಭಟನೆ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ಜಾಹೀರಾತು ಪ್ರಕಟಣೆಗೆ ₹4.92 ಲಕ್ಷ’

‘ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಪತ್ತಿನ ಸಹಕಾರ ಸಂಘದ ನೇಮಕಾತಿ ಅಧಿಸೂಚನೆಯನ್ನು ಪತ್ರಿಕಾ ಪ್ರಕಟಣೆಯ ಜಾಹೀರಾತಿಗೆ ₹4,92,600 ಖರ್ಚು ಮಾಡಲಾಗಿದ್ದು, ಸುಳ್ಳು ಲೆಕ್ಕ ನೀಡಿದ್ದಾರೆ’ ಎಂದು ಆರ್. ಚಂದ್ರಶೇಖರ ಆರೋಪಿಸಿದರು. ‘ಸಂಘದ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಂಘದಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ತನಿಖೆ ನಡೆಸಬೇಕು ಎಂದು ಸಹಕಾರಿ ಸಚಿವರಿಗೆ ಹಾಗೂ ಲೋಕಾಯುಕ್ತಕ್ಕೆ ದೂರ ನೀಡಲಾಗಿದೆ’ ಎಂದರು

ಆರ್‌ಎಸ್‌ಎಸ್‌ಗೆ ಭೂಮಿ: ಬಿಕೆಸಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನ ವಿರೋಧಿಯಾಗಿರುವ ಆರ್‌ಎಸ್‌ಎಸ್‌ಗೆ ಭೂಮಿ ಮಂಜೂರು ಮಾಡಿರುವುದೇ ಸಂವಿಧಾನದ ಉಲ್ಲಂಘನೆ’ ಎಂದು ಕಾಂಗ್ರೆಸ್ ನಾಯಕ ಬಿ.ಕೆ. ಚಂದ್ರಶೇಖರ್ ತಿಳಿಸಿದ್ದಾರೆ.

‘ಭಾರತೀಯ ಸಂವಿಧಾನವನ್ನು ಕಿತ್ತೊಗೆದು, ನಾಗರಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. ಹಿಂದೂ ರಾಷ್ಟ್ರದ ತತ್ವವನ್ನು ಅಳವಡಿಸಿ ಹೊಸ ಸಂವಿಧಾನ ರೂಪಿಸುವ ನಿರ್ಧಾರವನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿ ಪ್ರಕಟಿಸಿದೆ. ಇದರಿಂದ, ಆರ್‌ಎಸ್‌ಎಸ್ ಸಂವಿಧಾನ ವಿರೋಧಿ ಸಂಘಟನೆಯಾಗಿದೆ’ ಎಂದು ಚಂದ್ರಶೇಖರ್ ಹೇಳಿಕೆ ನೀಡಿದ್ದಾರೆ.

‘ಆರ್‌ಎಸ್‌ಎಸ್‌ಗೆ ಹಿಂದಿನ ಸರ್ಕಾರ ನೀಡಿರುವ ಭೂಮಿಯನ್ನು ಹಿಂಪಡೆಯುವ ಕುರಿತು ಚರ್ಚೆ ನಡೆಯುತ್ತಿದೆ. ಆರ್‌ಎಸ್‌ಎಸ್ ರಾಜಕೀಯ ಪಕ್ಷವಲ್ಲ. ತಾನೇ ಘೋಷಿಸಿಕೊಂಡಂತೆ ಸಾಮಾಜಿಕ, ಸಾಂಸ್ಕೃತಿಕ ಸಂಘಟನೆಯೂ ಅಲ್ಲ. ಬಿಜೆಪಿಯನ್ನು ಸಂಪೂರ್ಣವಾಗಿ ನಿಯಂತ್ರಿಸುತ್ತಲೇ ಬೆಳೆದಿರುವ ಸಂಘಟನೆ’ ಎಂದು ಎಂದಿದ್ದಾರೆ.

‘ಆರ್‌ಎಸ್‌ಎಸ್ ಮತ್ತು ಬಿಜೆಪಿ ಹಿಂದುತ್ವದ ಪ್ರತಿಪಾದನೆಯ ಆಧಾರದಲ್ಲಿ ಪವಿತ್ರ ಸಂವಿಧಾನವನ್ನು ವಿರೋಧಿಸುತ್ತಲೇ ಬಂದಿವೆ. ವಿಶೇಷವಾಗಿ ಮುಸ್ಲಿಮರನ್ನು ಜೊತೆಗೆ ಕ್ರಿಶ್ಚಿಯನ್ನರನ್ನು ಉದ್ದೇಶಿಸಿ ‘ಹೊರಗಿನಿಂದ ವಲಸೆ ಬಂದವರು. ಹಿಂದೂ ಸಮುದಾಯ, ಸಂಸ್ಕೃತಿ ಹಾಗೂ ಸಂಸ್ಕೃತ ಅಳವಡಿಸಿಕೊಂಡು ತಮ್ಮ ಪ್ರತ್ಯೇಕ ಅಸ್ತಿತ್ವದ ಅಸ್ಮಿತೆ ಮತ್ತು ವಿದೇಶಿ ಮೂಲವನ್ನು ಮರೆತು ರಾಷ್ಟ್ರೀಯ ಜನಾಂಗದಲ್ಲಿ ಸ್ವಾಭಾವಿಕವಾಗಿ ಬೆರೆತುಕೊಳ್ಳದಿದ್ದರೆ ಹೊರಗಿನವರಂತೆ ಬದುಕಬೇಕಾಗುತ್ತದೆ’ ಎಂದು ಎಚ್ಚರಿಕೆಯನ್ನೂ ಕೊಡುತ್ತಿದ್ದಾರೆ. ಅಂತಹ ಸಂಘಟನೆಯವರಿಗೆ ಭೂಮಿ ಕೊಡಬೇಕೇ’ ಎಂದು ಪ್ರಶ್ನಿಸಿದ್ದಾರೆ.

ಬೆಂಬಲ ಹಿಂಪಡೆದ ಎಚ್‌ಎಎಂ

ಪಟ್ನಾ (ಪಿಟಿಐ): ನಿತೀಶ್ ಕುಮಾರ್ ಸರ್ಕಾರಕ್ಕೆ ನೀಡಿದ ಬೆಂಬಲವನ್ನು ಬಿಹಾರದ ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಅವರ ಹಿಂದೂಸ್ತಾನಿ ಅವಾಂ ಮೋರ್ಚಾ (ಎಚ್‌ಎಎಂ) ಸೋಮವಾರ ಹಿಂಪಡೆದಿದ್ದು, ಈ ಸಂಬಂಧ ಪತ್ರವನ್ನು ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರಿಗೆ ಹಸ್ತಾಂತರಿಸಿದೆ.

ಜಾವೇದ್ ಅಖ್ತರ್‌ಗೆ ಆರೋಗ್ಯ ಇಲಾಖೆ ಉಸ್ತುವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಜಾವೇದ್ ಅಖ್ತರ್ ಅವರಿಗೆ ಆರೋಗ್ಯ ಇಲಾಖೆಯ ಹೆಚ್ಚುವರಿ ಜವಾಬ್ದಾರಿ ವಹಿಸಲಾಗಿದೆ. ಅಲ್ಲದೇ, ಒಟ್ಟು 13 ಐಎಎಸ್ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ.

ಬಿ.ಸಿ.ಸತೀಶ– ಕಾರ್ಯನಿರ್ವಾಹಕ ನಿರ್ದೇಶಕ, ಸುವರ್ಣ ಆರೋಗ್ಯ ಟ್ರಸ್ಟ್. ಗೋಪಾಲಕೃಷ್ಣ ಎಚ್.ಎನ್–ಜಂಟಿ ನಿರ್ದೇಶಕ(ಸುಧಾರಣೆ), ಕರ್ನಾಟಕ ಮುನಿಸಿಪಲ್ ಡೇಟಾ ಸೊಸೈಟಿ. ಶಿವಶಂಕರ. ಎನ್– ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ. ಅಕ್ರಂ ಪಾಶಾ– ಜಿಲ್ಲಾಧಿಕಾರಿ, ಕೋಲಾರ. ಗಂಗೂ ಬಾಯಿ ರಮೇಶ್ ಮಾನಕರ್– ಕಾರ್ಯದರ್ಶಿ, ರಾಜ್ಯ ಮಾಹಿತಿ ಆಯೋಗ. ಲತಾ ಆರ್– ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ. ವೆಂಕಟ ರಾಜ– ಜಿಲ್ಲಾಧಿಕಾರಿ, ಕೊಡಗು. ಫೌಜಿಯಾ ತರನುಮ್– ಜಿಲ್ಲಾಧಿಕಾರಿ, ಕಲಬುರಗಿ. ನಾಗರಾಜ್ ಎನ್.ಎಂ– ಯೋಜನಾ ನಿರ್ದೇಶಕ, ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸೊಸೈಟಿ. ಭನ್ವರ್ ಸಿಂಗ್ ಮೀನಾ– ಸಿಇಒ, ಕಲಬುರಗಿ ಜಿಲ್ಲಾ ಪಂಚಾಯಿತಿ. ಲಿಂಗಮೂರ್ತಿ ಜಿ– ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ. ಗಿರೀಶ್ ದಿಲೀಪ್ ಬಡೋಲೆ, ಪರೀಕ್ಷಾ ನಿಯಂತ್ರಕ, ಕರ್ನಾಟಕ ಲೋಕಸೇವಾ ಆಯೋಗ. ಎನ್.ಎಂ.ಅಲಿ ಅಕ್ರಂ ಶಾ–ಆಯುಕ್ತ, ಹಂಪಿ ವಿಶ್ವ ಪಾರಂಪರಿಕ ತಾಣ ಪ್ರದೇಶ ನಿರ್ವಹಣಾ ಪ್ರಾಧಿಕಾರ, ವಿಜಯನಗರ.

ಬ್ಲೂ ಆರ್ಮಿ: ಶೂದ್ರ ಶ್ರೀನಿವಾಸ್ ಅಧ್ಯಕ್ಷ



ಕಡೂರು: ಬ್ಲೂ ಆರ್ಮಿ–ಮಾದಿಗರ ಧ್ವನಿ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷರಾಗಿ ಶೂದ್ರ ಶ್ರೀನಿವಾಸ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಸೋಮವಾರ ಕಡೂರಿನಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ಮಾಡಲಾಯಿತು.

ರಾಜ್ಯ ಸಮಿತಿ ಕಾರ್ಯಾಧ್ಯಕ್ಷರಾಗಿ ಬಿ.ರುದ್ರಪ್ಪ, ಉಪಾಧ್ಯಕ್ಷರಾಗಿ ಹುಲ್ಲೇಹಳ್ಳಿ ಲಕ್ಷ್ಮಣ್, ಸಗನಪ್ಪ, ಬಾಸೂರು ಸುರೇಶ್, ನಾಗರಾಜ್ ಸಖರಾಯಪಟ್ಟಣ, ಕಾರ್ಯಕಾರಿ ಸದಸ್ಯರಾಗಿ ತಂಗಲಿ ರಾಘವೇಂದ್ರ, ಕೇದಿಗೆರೆ ಬಸವರಾಜ್, ಬಾಸೂರು ಪ್ರಸನ್ನ, ಕಡೂರಹಳ್ಳಿ ಪ್ರಶಾಂತ್, ಶಾಂತಮೂರ್ತಿ, ಗೋವಿಂದಪ್ಪ, ಕೋಶಾಧ್ಯಕ್ಷರಾಗಿ ಕೆ.ರಂಗಸ್ವಾಮಿ ಅವರನ್ನು ಆಯ್ಕೆ ಮಾಡಲಾಯಿತು.

‘ಅಲ್ಪಸಂಖ್ಯಾತರ ಅಭಿವೃದ್ಧಿಗೆ ನೀಲ ನಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ 30 ವರ್ಷಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಅಲ್ಪಸಂಖ್ಯಾತ ಸಮುದಾಯದ ಅಭಿವೃದ್ಧಿಗೆ ನೀಲನಕ್ಷೆ ರೂಪಿಸಿ ಸ್ಪಷ್ಟ ಕ್ರಿಯಾ ಯೋಜನೆಯೊಂದಿಗೆ ಕಾರ್ಯ ನಿರ್ವಹಿಸಲಾಗುವುದು’ ಎಂದು ವಸತಿ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ಸರ್ಕಾರದ ಹಂತದಲ್ಲಿ ರೂಪಿಸಬೇಕಾದ ಕಾರ್ಯಕ್ರಮಗಳು ಹಾಗೂ ಅದಕ್ಕಾಗಿ ಕೈಗೊಳ್ಳಬೇಕಾಗಿರುವ ನಿರ್ಧಾರಗಳ ಬಗ್ಗೆ ಅಧ್ಯಯನ ನಡೆಸಿ ಸಲಹೆ ನೀಡಲು ಒಂದು ತಂಡವನ್ನೂ ರಚಿಸಲಾಗುವುದು ಎಂದು ಅವರು ಹೇಳಿದರು.

ಸೋಮವಾರ ತಮ್ಮನ್ನು ಭೇಟಿಯಾದ ಅಲ್ಪಸಂಖ್ಯಾತರ ಹಕ್ಕುಗಳು, ಪ್ರಜಾಸತ್ತಾತ್ಮಕ ಹಾಗೂ ರಾಜಕೀಯ ಸಬಲೀಕರಣ ವೇದಿಕೆಯ ಪ್ರತಿನಿಧಿಗಳ ಜತೆ ಸಮಾಲೋಚನೆ ಸಂದರ್ಭದಲ್ಲಿ ಈ ಭರವಸೆ ನೀಡಿದರು.

‘ನಮ್ಮ ಮೊದಲ ಆದ್ಯತೆ ಶಿಕ್ಷಣ ಮತ್ತು ಆರೋಗ್ಯ. ಶಿಕ್ಷಣ ಪ್ರಬಲ ಅಸ್ತ್ರ ಇದ್ದಂತೆ. ಎಲ್ಲ ಹಂತದ ಶಿಕ್ಷಣಕ್ಕೂ ಹೆಚ್ಚು ಆದ್ಯತೆ ಸಿಗಬೇಕು. ಈ ಕುರಿತು ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುವುದು. ಇಲಾಖೆಯಲ್ಲಿ ಜಾರಿಯಲ್ಲಿರುವ ಕಾರ್ಯಕ್ರಮಗಳ ಬಗ್ಗೆಯೂ ಸಮುದಾಯಕ್ಕೆ ಮಾಹಿತಿ ತಲುಪಿಸಿ, ಆರೋಗ್ಯ ವಿಮೆ ಯೋಜನೆ ರೂಪಿಸುವ ಚಿಂತನೆಯೂ ಇದೆ. ವಕ್ಫ್ ಬೋರ್ಡ್ ಜಾಗದಲ್ಲಿ ಪ್ರತಿ ತಾಲ್ಲೂಕಿನಲ್ಲೂ ಒಂದು ಶಾಲೆ, ಕಾಲೇಜು, ಆಸ್ಪತ್ರೆ ನಿರ್ಮಿಸುವ ಗುರಿ ಇದೆ’ ಎಂದು ಜಮೀರ್ ಹೇಳಿದರು.

ಮುಜಾಫರ್ ಅಸ್ಸಾದಿ, ಮೆಹರೋಜ್ ಖಾನ್ ಸೇರಿದಂತೆ ಕೆಲ ಲೇಖಕರು, ಸೇವಾ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ನ್ಯೂಯಾರ್ಕ್: ಜಲಾಂತರ್ಗಾಮಿ ಹಡಗು ನಾಪತ್ತೆ

ನ್ಯೂಯಾರ್ಕ್ (ರಾಯಟರ್ಸ್): ಟೈಟಾನಿಕ್ ಹಡಗಿನ ಅವಶೇಷಗಳನ್ನು ನೋಡಲು ಪ್ರವಾಸಿಗರನ್ನು ಕರೆದೊಯ್ಯುತ್ತಿದ್ದ ಖಾಸಗಿ ಕಂಪನಿಗೆ ಸೇರಿದ ಜಲಾಂತರ್ಗಾಮಿ ನೌಕೆಯೊಂದು ಅಟ್ಲಾಂಟಿಕ್ ಸಾಗರದಲ್ಲಿ ನಾಪತ್ತೆಯಾಗಿದ್ದು, ಪತ್ತೆ ಕಾರ್ಯಾಚರಣೆ ಮುಂದುವರಿದಿದೆ.

ನಾಪತ್ತೆಯಾಗಿರುವ ಜಲಾಂತರ್ಗಾಮಿಯಲ್ಲಿ ಎಷ್ಟು ಪ್ರವಾಸಿಗರು ಇದ್ದರು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಈ ಬಗ್ಗೆ ಅಮೆರಿಕದ ಕರಾವಳಿ ಪಡೆಯೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಕರಾವಳಿ ಪಡೆ ಕಾರ್ಯಾಚರಣೆ ಆರಂಭಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಹಲವು ಸರ್ಕಾರಗಳು ಮತ್ತು ಸಮುದ್ರಯಾನ ಕಂಪನಿಗಳು ನಮ್ಮ ಕಾರ್ಯಾಚರಣೆಗೆ ಕೈಜೋಡಿಸಿವೆ ಎಂದು ಸಮುದ್ರಯಾನ ಹಮ್ಮಿಕೊಂಡಿದ್ದ ಓಷನ್‌ಗೇಟ್ ಎಕ್ಸ್‌ಪೆಡಿಶನ್ಸ್ ಕಂಪನಿ ತಿಳಿಸಿದೆ. ಈ ಪ್ರವಾಸಕ್ಕೆ ಕಂಪನಿಯು ಪ್ರತಿ ಪ್ರವಾಸಿಗರಿಗೆ ತಲಾ 2.5 ಲಕ್ಷ ಡಾಲರ್ ಶುಲ್ಕ ನಿಗಡಿಪಡಿಸಿದೆ. ಇದು ಐದನೇ ಸಮುದ್ರಯಾನವಾಗಿದೆ ಎಂದು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಭಾವಾರ್ಥ, ರಾಗ ಮಾಹಿತಿಯೊಂದಿಗೆ ಸಂಪಾದನೆ

‘ಸಂಗೀತ ಮಂಗಲಾಷ್ಟಕ’ ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ



ಕೆ. ಗಣಪತಿ ಭಟ್ಟ ಅವರು ಸಂಪಾದಿಸಿದ ‘ಸಂಗೀತ ಮಂಗಲಾಷ್ಟಕ’ ಪುಸ್ತಕವನ್ನು ಗಾಯಕ ರಘುನಂದನ ಪಣಶೀಕರ ಬಿಡುಗಡೆಗೊಳಿಸಿದರು.

ಬೆಂಗಳೂರು: ‘ಮಂಗಲಾಷ್ಟಕ ಪುಸ್ತಕವನ್ನು ಪದಚ್ಛೇದ, ಅನ್ವಯಾರ್ಥ, ಭಾವಾರ್ಥ ಮತ್ತು ರಾಗ ಮಾಹಿತಿಯೊಂದಿಗೆ ಸಂಪಾದಿಸಿ ಪ್ರಕಟಿಸಿರುವುದು ಶ್ಲಾಘನೀಯ’ ಎಂದು ಗಾಯಕ ರಘುನಂದನ ಪಣಶೀಕರ ಹೇಳಿದರು.

ನಗರದ ಪೂರ್ಣಪ್ರಜ್ಞ ವಿದ್ಯಾಪೀಠದ ವಿಶ್ವೇಶತೀರ್ಥ ಸಭಾಭವನದಲ್ಲಿ ಕೆ. ಗಣಪತಿ ಭಟ್ ಸಂಪಾದಿಸಿದ, ಕತಗಾಲದ ಕಲಾಶ್ರೀ ಸಾಂಸ್ಕೃತಿಕ ವೇದಿಕೆ ಪ್ರಕಟಿಸಿರುವ ಹಿಂದಿ ಅನುವಾದಿತ ‘ಸಂಗೀತ ಮಂಗಲಾಷ್ಟಕ’ ಪುಸ್ತಕವನ್ನು ಇತ್ತೀಚೆಗೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಧಾರ್ಮಿಕ ಕ್ಷೇತ್ರಕ್ಕೆ ಸೀಮಿತವಾಗಿದ್ದ ಮಂಗಲಾಷ್ಟಕವನ್ನು ವಿವಿಧ ಸಂದರ್ಭಗಳಲ್ಲಿ ಹಾಡಲು ಅನುಕೂಲವಾಗುವಂತೆ ರಚಿಸಲಾಗಿದೆ. ಮುಂದಿನ ದಿನಗಳಲ್ಲಿ ನನ್ನ ಸಂಗೀತ ಕಛೇರಿಗಳಲ್ಲಿ ಒಂದೊಂದು ಮಂಗಲಾಷ್ಟಕವನ್ನು ಹಾಡುತ್ತೇನೆ’ ಎಂದರು.

ವಿದ್ವಾಂಸ ವೀರನಾರಾಯಣ ಪಾಂಡುರಂಗಿ, ‘ಗಣಪತಿ ಭಟ್ಟ ಅವರು ಸಮಗ್ರ ಭಾರತದ ವ್ಯಾಪ್ತಿಯನ್ನು ಸಂಪಾದಿಸಿ ಸಂಗೀತ ಮಂಗಲಾಷ್ಟಕ ಪುಸ್ತಕವನ್ನು ಹಿಂದಿಯಲ್ಲಿ ಅನುವಾದಿಸಿದ್ದಾರೆ. ಈ ಪುಸ್ತಕವು ಸಂಸ್ಕೃತ ತಜ್ಞರಿಗೆ, ಸಂಗೀತಗಾರರಿಗೆ ಶಾಸ್ತ್ರೀಯ ಸಂಗೀತದ ರಾಗಸಂಯೋಜನೆ ಮಾಡಲು ಸಹಕಾರಿಯಾಗಿದೆ’ ಎಂದರು.

ಚಂದ್ರಮತಿ, ಕೆ.ಎನ್., ಶ್ರೀರಾಮ ಕಾನಡೆ, ರೋಹಿಣಿ ನಾಗೇಂದ್ರ, ವೇಣುಗೋಪಾಲ್ ಅಗ್ನಿಹೋತ್ರಿ, ಸಮುನಾ ಭಟ್ಟ, ಎಂ.ಆರ್. ಅರುಣ ಕುಮಾರ್, ರಘುನಂದನ್ ಭಟ್ಟ, ರತ್ನಾ ಗೋಪಿನಾಥ, ಶ್ರೀಕಾಂತ ಹೆಗಡೆ, ಸಾವಿತ್ರಿ ಶ್ರೀನಿವಾಸ, ಎಸ್. ಸುರೇಶ, ಜಗದೀಶ ಬುರ್ಡೆ, ಪ್ರತಿಭಾ ಪ್ರಸಾದ, ದೇವಿ ಭಟ್ಟ, ಆನಂದ ಕರಡಗಿ, ವೆಂಕಟೇಶ ಪುರೋಹಿತ, ಭಾಸ್ಕರ ಜೋಶಿ ಇದ್ದರು.

ನೂರಾರು ಅತಿಥಿ ಉಪನ್ಯಾಸಕರು ಅತಂತ್ರ; ನೇಮಕಾತಿಯಲ್ಲಿ ಬೋಧನಾ ಅನುಭವ, ಹಿರಿತನ ಕಡೆಗಣನೆ– ಆರೋಪ

3 ತಿಂಗಳ ಗೌರವಧನವೂ ಇಲ್ಲ, ಕೆಲಸವೂ ಇಲ್ಲ

• ಡಿ.ಕೆ.ಬಸವರಾಜು

ಪ್ರಜಾವಾಣಿ ವಿಶೇಷ

ದಾವಣಗೆರೆ: ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕೆಲಸ ಮಾಡಿರುವ ಅತಿಥಿ ಉಪನ್ಯಾಸಕರಿಗೆ ಕಳೆದ ಜನವರಿಯಿಂದ ಮಾರ್ಚ್‌ವರೆಗಿನ ಗೌರವಧನ ಬಿಡುಗಡೆ ಆಗಿಲ್ಲ. ಅಲ್ಲದೇ, ನೂರಾರು ಅತಿಥಿ ಉಪನ್ಯಾಸಕರನ್ನು ಪ್ರಸಕ್ತ ಶೈಕ್ಷಣಿಕ ವರ್ಷದ ನೇಮಕಾತಿಯಲ್ಲಿ ಪರಿಗಣಿಸದೇ ಕೈಬಿಡಲಾಗಿದೆ.

ಕಳೆದ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಾದ್ಯಂತ ನೇಮಕಗೊಂಡಿದ್ದ 4,000ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರನ್ನು ಮೂರು ತಿಂಗಳ ಸಂಬಳ ನೀಡದೇ ಮಾರ್ಚ್ ತಿಂಗಳಲ್ಲಿ ಸೇವೆಯಿಂದ ಬಿಡುಗಡೆ ಮಾಡಲಾಗಿದೆ.

> ಅರ್ಹತೆ, ಸೇವಾ ಅನುಭವ ಆಧರಿಸಿ, ಬೇರೆ ರಾಜ್ಯಗಳಂತೆ ಕರ್ನಾಟಕದಲ್ಲೂ ಅತಿಥಿ ಉಪನ್ಯಾಸಕರ ನೇಮಕ ಆಗಬೇಕು
> **ರಾಜೇಶ್ ಭಟ್,** ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆಯ ರಾಜ್ಯ ಕಾರ್ಯದರ್ಶಿ

ಜೂನ್ 3ರಂದು ಹೊಸದಾಗಿ 4,055 ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿರುವ ಪದವಿ ಪೂರ್ವ ಶಿಕ್ಷಣ ಇಲಾಖೆ, ಆಯಾ ಹುದ್ದೆಗಳಿಗೆ ಮೆರಿಟ್ ಪರಿಗಣಿಸಿದ್ದು, ಬೋಧನಾ ಅನುಭವ ಇರುವ ಹಿರಿತನವಿರುವ ಉಪನ್ಯಾಸಕರನ್ನು ಕೈಬಿಟ್ಟಿದೆ.

'5 ರಿಂದ 12 ವರ್ಷ ಸೇವೆ ಸಲ್ಲಿಸಿರುವ 1,000ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ರಾಜ್ಯದಲ್ಲಿ ಇದ್ದಾರೆ. ಅವರನ್ನು ಕೈಬಿಟ್ಟು ಹೊಸಬರನ್ನು ನೇಮಕ ಮಾಡಿರುವುದರಿಂದ ಬೋಧನಾ ಅನುಭವ ಇರುವ ಹಲವರು ಕೆಲಸ ಕಳೆದುಕೊಂಡಿದ್ದಾರೆ. ಇನ್ನು ಕೆಲವರು ಕೃಷಿ, ವ್ಯಾಪಾರದಲ್ಲಿ ತೊಡಗಿಕೊಂಡಿದ್ದಾರೆ. ಖಾಸಗಿ ಕಂಪನಿಗಳಲ್ಲಿ ಭದ್ರತಾ ಸಿಬ್ಬಂದಿಯಾಗಿ ದುಡಿಯುತ್ತಿದ್ದಾರೆ' ಎಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆಯ ರಾಜ್ಯ ಕಾರ್ಯದರ್ಶಿ ರಾಜೇಶ್ ಭಟ್ ಹೇಳಿದರು.

'ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವಾಗ ಅರ್ಹತೆ ಹಾಗೂ ಬೋಧನಾ ಅನುಭವವನ್ನು ಮಾನದಂಡವಾಗಿ ಪರಿಗಣಿಸುವುದು ನ್ಯಾಯ ಸಮ್ಮತ ಪ್ರಕ್ರಿಯೆ. ಆದರೆ, ಪ್ರಸಕ್ತ ಸಾಲಿನ ನೇಮಕಾತಿಯಲ್ಲಿ ಅರ್ಹತೆಯನ್ನಷ್ಟೆ ಪರಿಗಣಿಸುತ್ತಿರುವುದು ಆಘಾತ ತಂದಿದೆ' ಎಂದು ಅವರು ನೋವು ತೋಡಿಕೊಂಡರು.

'ನ್ಯಾಯಯುತವಾಗಿ ನಮ್ಮನ್ನು ವಾರಕ್ಕೆ 10 ಗಂಟೆ ದುಡಿಸಿಕೊಳ್ಳಬೇಕು. ಆದರೆ, ಕೆಲವೊಮ್ಮೆ 20 ಗಂಟೆಯವರೆಗೂ ದುಡಿಸಿಕೊಳ್ಳುತ್ತಿದ್ದಾರೆ. ಇದನ್ನು ಪ್ರಶ್ನಿಸಿದರೆ ಕೆಲಸ ಬಿಟ್ಟು ಹೋಗಿ ಎಂದು ಧಮಕಿ ಹಾಕುತ್ತಾರೆ. ಈಗಿನ ಅಗತ್ಯಕ್ಕೆ ತಕ್ಕಂತೆ 8,000 ಉಪನ್ಯಾಸಕರು ಬೇಕು. ಆದರೆ, ಕೇವಲ 4,055 ಹುದ್ದೆಗಳ ಭರ್ತಿಗೆ ಆದೇಶ ಹೊರಡಿಸಲಾಗಿದೆ. ಇದರಿಂದಾಗಿ ಅತಿಥಿ ಉಪನ್ಯಾಸಕರಿಗೆ ಹೆಚ್ಚಿನ ಹೊರೆಬೀಳುತ್ತದೆ' ಎಂದು ತಿಳಿಸಿದರು.

'ಮಂಗಳೂರಿನಲ್ಲಿ ಕೆಲಸ ಕಳೆದುಕೊಂಡಿರುವ ಕೆಲವು ಉಪನ್ಯಾಸಕರು ಎಂಆರ್‌ಪಿಎಲ್ ಕಾರ್ಖಾನೆಯಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಜೀವನ ನಿರ್ವಹಣೆಗೆ ಕೆಲವರು ಮೊಬೈಲ್ ಮಾರಾಟ, ದುರಸ್ತಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಇನ್ನು ಕೆಲವರು ಕೃಷಿ ಹಾಗೂ ವ್ಯಾಪಾರದಲ್ಲಿ ತೊಡಗಿಕೊಂಡಿದ್ದಾರೆ. ಕೋವಿಡ್ ಸಮಯದಲ್ಲಂತೂ ಕೂಲಿ ಕೆಲಸವನ್ನೂ ಮಾಡಿದ್ದಾರೆ' ಎಂದು ಅವರು ವಿವರಿಸಿದರು.

'ಅತಿಥಿ ಉಪನ್ಯಾಸಕರಿಗೆ ಈಗ ನೀಡುತ್ತಿರುವ ಮಾಸಿಕ ₹ 12,000 ಗೌರವಧನ ಸಾಕಾಗುತ್ತಿಲ್ಲ. ಮುಂದಿನ ಬಜೆಟ್‌ನಲ್ಲಿ ಗೌರವಧನವನ್ನು ಕನಿಷ್ಠ ₹ 25,000 ನಿಗದಿಪಡಿಸಬೇಕು. ಈ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ಸಂಘಟನೆಯ ಜಂಟಿ ಕಾರ್ಯದರ್ಶಿ ನಾಗರತ್ನ ತಿಳಿಸಿದರು.


'ಬಾಕಿ ಇರುವ ಮೂರು ತಿಂಗಳ ಗೌರವಧನವನ್ನು ಕೂಡಲೇ ನೀಡಬೇಕು ಹಾಗೂ ಸೇವಾ ಹಿರಿತನವನ್ನು ಪರಿಗಣಿಸಬೇಕು' ಎಂದು ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

'ಮತಾಂತರ, ಗೋಹತ್ಯೆ ನಿಷೇಧ ಹಿಂಪಡೆಯುವ ದುಸ್ಸಾಹಸ ಬೇಡ'

ಉಡುಪಿ: 'ಮತಾಂತರ ನಿಷೇಧ ಕಾಯ್ದೆ ಹಾಗೂ ಗೋಹತ್ಯೆ ನಿಷೇಧ ಕಾಯ್ದೆಯನ್ನು ವಾಪಸ್ ಪಡೆಯುವ ಕಾಂಗ್ರೆಸ್ ಸರ್ಕಾರದ ಕ್ರಮ ಕಳವಳಕಾರಿಯಾಗಿದೆ' ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.

ಮತಾಂತರ ಹಾವಳಿಯಿಂದ ಕುಟುಂಬಗಳು ಛಿದ್ರವಾಗುತ್ತಿರುವುದನ್ನು ಮನಗಂಡ ಹಿಂದಿನ ಬಿಜೆಪಿ ಸರ್ಕಾರ ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಿತ್ತು. ಗೋ ಕಳವು ತಡೆಯಲು ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೆ ತಂದಿತ್ತು. ಆದರೆ, ಕಾಂಗ್ರೆಸ್ ಸರ್ಕಾರ ಎರಡೂ ಕಾಯ್ದೆಗಳನ್ನು ಹಿಂಪಡೆಯಲು ತೀರ್ಮಾನಿಸಿರುವುದು ಕಳವಳಕಾರಿಯಾಗಿದೆ. ಕಾನೂನುಗಳ ಹಿಂಪಡೆಯುವ ದುಸ್ಸಾಹಸ ಮಾಡಬಾರದು ಎಂದು ಸ್ವಾಮೀಜಿ ಹೇಳಿದ್ದಾರೆ.



ಜನಾಭಿಪ್ರಾಯ ಪಡೆದು ಎರಡೂ ಕಾಯ್ದೆಗಳನ್ನು ಹಿಂಪಡೆಯದೆ ತಟಸ್ಥ ನಿಲುವು ತಾಳಬೇಕು ಎಂದು ಒತ್ತಾಯಿಸಿದ್ದಾರೆ.

ಅದಮಾರು ಮಠದ ವಿಶ್ವಪ್ರಿಯ ತೀರ್ಥ ಸ್ವಾಮೀಜಿ ಕೂಡ ಮತಾಂತರ ಹಾಗೂ ಗೋಹತ್ಯೆ ನಿಷೇಧ ಕಾಯ್ದೆ ಹಿಂಪಡೆಯುವ ನಿಲುವು ಮರು ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮತಾಂತರ ಹಾಗೂ ಗೋಹತ್ಯೆ ವಿಚಾರಗಳು ಧರ್ಮ, ಸಂಸ್ಕೃತಿಯ ರಕ್ಷಣೆಗೆ ಸಂಬಂಧಿಸಿದ್ದಾಗಿದ್ದು, ರಾಜಕಾರಣ ಮಾಡಬಾರದು, ಎರಡೂ ಕಾಯ್ದೆಗಳನ್ನು ಮುಂದುವರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಅನ್ನಭಾಗ್ಯ: ಜು.1ರಿಂದ ಅನುಮಾನ

ಒಂದನೇ ಪುಟದಿಂದ

ಛತ್ತೀಸಗಢ ರಾಜ್ಯ ಸರ್ಕಾರದ ಬಳಿ 1.5 ಲಕ್ಷ ಟನ್ ಅಕ್ಕಿ ದಾಸ್ತಾನು ಇರುವುದು ಮಾತ್ರ ಖಾತರಿಯಾಗಿದೆ. ಆದರೆ, ದರ ಮತ್ತು ಸಾಗಾಣಿಕೆ ವೆಚ್ಚದ ವಿಚಾರದಲ್ಲಿ ಇನ್ನೂ ಅಂತಿಮ ನಿರ್ಧಾರ ಆಗಿಲ್ಲ. ದಾಸ್ತಾನಿನಲ್ಲಿರುವ ಅಕ್ಕಿಯನ್ನು ಕರ್ನಾಟಕ ಸರ್ಕಾರಕ್ಕೆ ಮಾರಾಟ ಮಾಡುವ ಕುರಿತು ಛತ್ತೀಸಗಢ ಸರ್ಕಾರ ಈವರೆಗೂ ಖಾತರಿ ನೀಡಿಲ್ಲ. ತೆಲಂಗಾಣ, ಪಂಜಾಬ್ ಸೇರಿದಂತೆ ಹೆಚ್ಚಿನ ಪ್ರಮಾಣದ ಭತ್ತ ಬೆಳೆಯುವ ಕೆಲವು ರಾಜ್ಯಗಳು 'ಅನ್ನ ಭಾಗ್ಯ' ಯೋಜನೆಗೆ ಅಕ್ಕಿ ಪೂರೈಸಲು ನಿರಾಕರಿಸಿವೆ.

ಇನ್ನೂ ದಕ್ಕದ ಖಾತರಿ: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಹಣಕಾಸು ಹಾಗೂ ಆಹಾರ ಇಲಾಖೆ ಹಿರಿಯ ಅಧಿಕಾರಿಗಳ ಜತೆ ಶನಿವಾರ ಸಭೆ ನಡೆಸಿದ್ದ ಮುಖ್ಯಮಂತ್ರಿ, ಅಕ್ಕಿ ಲಭ್ಯತೆಯನ್ನು ಸೋಮವಾರದೊಳಗೆ ಖಾತರಿಪಡಿಸಿಕೊಳ್ಳುವಂತೆ ನಿರ್ದೇಶನ ನೀಡಿದ್ದರು. ಆದರೆ, ಯಾವುದೇ ರಾಜ್ಯಗಳಿಂದಲೂ ನಿಖರವಾದ ಪ್ರತಿಕ್ರಿಯೆ ಬಾರದ ಕಾರಣ ಖಾತರಿಪಡಿಸಿಕೊಳ್ಳುವುದು ಸಾಧ್ಯವಾಗಿಲ್ಲ ಎಂದು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ಅಕ್ಕಿಯ ಲಭ್ಯತೆಯನ್ನು ಖಾತರಿಪಡಿಸಿಕೊಳ್ಳುವ ಪ್ರಯತ್ನ ಮುಂದುವರಿದಿದೆ. ಒಂದು ತಿಂಗಳಿಗೆ ಸೀಮಿತವಾಗಿ ಅಕ್ಕಿಯ ಲಭ್ಯತೆ ಕಂಡುಕೊಂಡರೆ ಭವಿಷ್ಯದಲ್ಲಿ ಸಮಸ್ಯೆಯಾಗುತ್ತದೆ. ಆದ್ದರಿಂದ ಜುಲೈ 1ರಿಂದಲೇ ಯೋಜನೆಗೆ ಚಾಲನೆ ನೀಡುವ ಸಾಧ್ಯತೆ ಕಡಿಮೆ ಇದೆ. ಒಂದರಿಂದ ಎರಡು ವಾರಗಳಷ್ಟು ವಿಳಂಬವಾಗುವ ಸಾಧ್ಯತೆ ಇದೆ' ಎಂದು ಮೂಲಗಳು ಹೇಳಿವೆ.

'ಕೇಂದ್ರೀಯ ಸಂಸ್ಥೆಗಳಿಂದಲೇ ಖರೀದಿಗೆ ಪ್ರಯತ್ನ'

ಬೆಂಗಳೂರು: ರಾಷ್ಟ್ರೀಯ ಗ್ರಾಹಕರ ಸಹಕಾರ ಒಕ್ಕೂಟ (ಎನ್‌ಸಿಸಿಎಫ್), ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್) ಮತ್ತು ಭಾರತೀಯ ಆಹಾರ ನಿಗಮ (ಎಫ್‌ಸಿಐ) ಸೇರಿ ಕೇಂದ್ರೀಯ ಸಂಸ್ಥೆಗಳಿಂದಲೇ ಅನ್ನ ಭಾಗ್ಯ ಯೋಜನೆಗೆ ಅಗತ್ಯ ಅಕ್ಕಿ ಖರೀದಿಗೆ ಪ್ರಯತ್ನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಫ್‌ಸಿಐ ಪ್ರತಿ ಕೆ.ಜಿ.ಗೆ ₹34ರ ದರದಲ್ಲಿ ಅಕ್ಕಿ ಒದಗಿಸುತ್ತದೆ. ₹2.60 ಸಾಗಾಣಿಕೆ ವೆಚ್ಚ ಸೇರಿದರೆ ಪ್ರತಿ ಕೆ.ಜಿ.ಗೆ ₹36.60 ವೆಚ್ಚವಾಗುತ್ತದೆ. ಈಗ ಮೂರೂ ಸಂಸ್ಥೆಗಳಿಂದ ದರ ಪಟ್ಟಿ ಆಹ್ವಾನಿಸಿ, ಟೆಂಡರ್ ಮೂಲಕ ಅಕ್ಕಿ ಖರೀದಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

ಈಗ ಅನ್ನ ಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೆ ತಲಾ ಐದು ಕೆ.ಜಿ. ಅಕ್ಕಿ ವಿತರಿಸಲಾಗುತ್ತಿದೆ. ಹೆಚ್ಚುವರಿಯಾಗಿ ಜೋಳ, ರಾಗಿ ವಿತರಿಸಲು ಚರ್ಚೆ ನಡೆದಿದೆ. ಆದರೆ, ತಲಾ ಎರಡು ಕೆ.ಜಿ. ಜೋಳ ಅಥವಾ ರಾಗಿ ವಿತರಿಸಿದರೂ ಆರು ತಿಂಗಳಿಗೆ ಸಾಕಾಗುವಷ್ಟು ದಾಸ್ತಾನು ಮಾತ್ರ ಇದೆ. ಬಾಕಿ ಉಳಿದ ಮೂರು ಕೆ.ಜಿ. ಅಕ್ಕಿಯನ್ನು ಖರೀದಿಸಲೇಬೇಕಾಗುತ್ತದೆ ಎಂದರು.

ಕೇಂದ್ರ ಸರ್ಕಾರದ ಸ್ವಾಮ್ಯದ ಎಫ್‌ಸಿಐ ಬಳಿ ಅಕ್ಕಿಯ ದಾಸ್ತಾನು ಇದೆ. ಒಕ್ಕೂಟ ವ್ಯವಸ್ಥೆಯಲ್ಲಿ ಸಹಕಾರ ನೀಡಬೇಕಾದ ಕೇಂದ್ರ ಸರ್ಕಾರ ಬಡವರ ಪರ ಯೋಜನೆ ವಿಚಾರದಲ್ಲಿ ದ್ವೇಷದ ರಾಜಕೀಯ ಮಾಡುತ್ತಿದೆ ಎಂದು ದೂರಿದರು.

'ಛತ್ತೀಸಗಢದಲ್ಲಿ 1.5 ಲಕ್ಷ ಟನ್ ಅಕ್ಕಿ ದಾಸ್ತಾನು ಇದೆ. ಅದು ಸಾಕಾಗುವುದಿಲ್ಲ. ಬಡವರಿಗೆ ಅಕ್ಕಿ ವಿತರಿಸುವ ವಿಚಾರದಲ್ಲಿ ನಾವು ಹಿಂದೆ ಸರಿಯುವುದಿಲ್ಲ. ಜುಲೈ 1ರಿಂದಲೇ ಯೋಜನೆ ಜಾರಿಗೆ ನಮ್ಮ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ' ಎಂದರು.

ರಾಜ್ಯದ ವಿವಿಧೆಡೆ ಸಾಧಾರಣ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ಸಾಧಾರಣ ಮಳೆ ಸುರಿಯಿತು.

ಚಿಕ್ಕಮಗಳೂರು ನಗರ, ಹಾವೇರಿ, ಹುಬ್ಬಳ್ಳಿ ಹಾಗೂ ಧಾರವಾಡದಲ್ಲಿ ಕೆಲ ಹೊತ್ತು ಮಳೆಯಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ವಿವಿಧೆಡೆ ಗುಡುಗು ಮಿಂಚಿನೊಂದಿಗೆ ಮಳೆ ಸುರಿಯಿತು.

ಹುಣಸೂರು ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಭಾರಿ ಮಳೆ ಸುರಿದಿದ್ದು, ಹಿರಿಕ್ಯಾತನಹಳ್ಳಿಯಲ್ಲಿ ತಂಬಾಕು ಬೆಳೆ ಜಲಾವೃತಗೊಂಡಿದೆ. ತಾಲ್ಲೂಕಿನ ನಿಲುವಾಗಿಲು, ಕಟ್ಟೆಮಳಲವಾಡಿ, ಅಗ್ರಹಾರ, ಸೋಮನಹಳ್ಳಿ, ಅಜಾದ್ ನಗರದಲ್ಲೂ ಧಾರಾಕಾರ ಮಳೆಯಾಯಿತು.

'ಭಾರಿ ಮಳೆಗೆ ತಗ್ಗು ಪ್ರದೇಶದ ಹೊಲಗಳಲ್ಲಿ ನೀರು ನಿಂತಿದ್ದು, ಕೆರೆ ಕಟ್ಟೆಗಳಿಗೆ ಹರಿದಿದೆ' ಎಂದು ಕಟ್ಟೆಮಳಲವಾಡಿ ನಿವಾಸಿ ಕಿರಣ್ ತಿಳಿಸಿದ್ದಾರೆ.

ಅಲ್ಲಲ್ಲಿ ಮಳೆ: ರಾಜ್ಯದ ಉತ್ತರ ಒಳನಾಡಿನ ಅಲ್ಲಲ್ಲಿ ಮಂಗಳವಾರ, ಬುಧವಾರ ಗುಡುಗು ಮಿಂಚು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಈ ಭಾಗದಲ್ಲಿ ಬಿರುಗಾಳಿಯು 30ರಿಂದ 40 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.


ಅಲ್ಲದೇ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಭಾಗದಲ್ಲೂ ಗುಡುಗು ಮಿಂಚು ಸಹಿತ ಮಳೆಯಾಗಲಿದೆ. ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ ಎಂದು ಸೂಚನೆ ನೀಡಿದೆ.

ಕಳೆದ 24 ಗಂಟೆಯಲ್ಲಿ ಉತ್ತರ ಕನ್ನಡದ ಕಾರವಾರದಲ್ಲಿ 6 ಸೆಂ.ಮೀ, ಹಾಸನದ ಚನ್ನರಾಯಪಟ್ಟಣದಲ್ಲಿ 5 ಸೆಂ.ಮೀ, ಉತ್ತರ ಕನ್ನಡದ ಹೊನ್ನಾವರದಲ್ಲಿ 4, ಉತ್ತರ ಕನ್ನಡದ ಶಿರಾಲಿ, ಮಂಕಿ, ಗೋಕರ್ಣ, ಉಡುಪಿಯ ಕೋಟ, ರಾಮನಗರದ ಮಾಗಡಿಯಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ಜುಲೈನಲ್ಲಿ ಬರ ಘೋಷಣೆ ಸುಳಿವು

ಒಂದನೇ ಪುಟದಿಂದ

ಮೂರು ತಿಂಗಳಲ್ಲಿ ವಿಚಾರಣೆ ಮುಗಿಯಬೇಕಿತ್ತು. ವರ್ಷ ಕಳೆದರೂ ಪ್ರಕ್ರಿಯೆ ಮುಗಿಸಿಲ್ಲ. 2019ರಲ್ಲಿ ಲೋಕಾಯುಕ್ತರು ಆರೋಪ ಹೊರಿಸಿದ ಪ್ರಕರಣದ ವಿಚಾರಣೆ ಆರಂಭವಾಗಿಲ್ಲ. ಹೀಗಾಗಿ, ಆರೋಪ ಕೇಳಿ ಬಂದಿರುವ ಪ್ರಕರಣಗಳ ತ್ವರಿತ ವಿಚಾರಣೆಗೆ ಕ್ರಮ ಕೈಗೊಳ್ಳಬೇಕು ಹಾಗೂ ವಿಚಾರಣಾಧಿಕಾರಿಗಳು ನಿಗದಿತ ಅವಧಿಯಲ್ಲಿ ತಾರ್ಕಿಕ ಅಂತ್ಯಕ್ಕೆ ಬರುವಂತೆ ಕ್ರಮ ಕೈಗೊಳ್ಳಲು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಸೂಚಿಸಿರುವುದಾಗಿ ತಿಳಿಸಿದರು.



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ಪ್ರಕರಣಗಳಲ್ಲಿ ಮೃತಪಟ್ಟ ಮಸೂದ್, ಮಹಮ್ಮದ್ ಫಾಝಿಲ್, ಅಬ್ದುಲ್ ಜಲೀಲ್ ಹಾಗೂ ದೀಪಕ್ ರಾವ್ ಕುಟುಂಬದವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಪರಿಹಾರದ ಚೆಕ್ ವಿತರಿಸಿದರು. ಸಚಿವರಾದ ಬಿ.ಜೆಡ್. ಜಮೀರ್ ಅಹಮದ್ ಖಾನ್, ಎನ್. ಚಲುವರಾಯಸ್ವಾಮಿ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಇದ್ದರು

ಆರು ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತೀಯ ಹಾಗೂ ದ್ವೇಷದ ರಾಜಕಾರಣದಿಂದಾಗಿ ಕೊಲೆಗೀಡಾಗಿದ್ದ ದಕ್ಷಿಣ ಕನ್ನಡ, ಮಂಡ್ಯ ಮತ್ತು ಗದಗ ಜಿಲ್ಲೆಗಳ ಆರು ಯುವಕರ ಕುಟುಂಬಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಲಾ ₹25 ಲಕ್ಷ ಮೊತ್ತದ ಪರಿಹಾರದ ಚೆಕ್ ಅನ್ನು ಸೋಮವಾರ ವಿತರಿಸಿದರು.

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲ್ಲೂಕಿನ ಕಳಂಜ ಗ್ರಾಮದ ಮಸೂದ್, ಮಂಡ್ಯದ ಇದ್ರಿಸ್ ಪಾಷ, ಮಂಗಳೂರಿನ ಹೊರ ವಲಯದ ಬಾಳ ಗ್ರಾಮದ ಮೊಹಮದ್ ಫಾಝಿಲ್, ನರಗುಂದದ ಸಮೀರ್, ಮಂಗಳೂರಿನ ಕಾಟಿಪಳ್ಳದ ಅಬ್ದುಲ್ ಜಲೀಲ್ ಮತ್ತು ದೀಪಕ್ ರಾವ್ ಅವರ ಕುಟುಂಬದವರಿಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ತಲಾ ₹25 ಲಕ್ಷ ಪರಿಹಾರ ವಿತರಿಸಲಾಯಿತು.

ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಈ ಯುವಕರ ಕುಟುಂಬಗಳ ಸದಸ್ಯರು ಚೆಕ್ ಸ್ವೀಕರಿಸಿದರು. ಸಚಿವರಾದ ಬಿ.ಜೆಡ್. ಜಮೀರ್ ಅಹಮದ್ ಖಾನ್, ಎನ್. ಚಲುವರಾಯಸ್ವಾಮಿ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಜೀರ್ ಅಹಮದ್ ಇದ್ದರು.

ಚೆಕ್ ಹಸ್ತಾಂತರಿಸಿದ ಬಳಿಕ ಮಾತನಾಡಿದ ಸಿದ್ದರಾಮಯ್ಯ, 'ಸರ್ಕಾರ ಸರ್ವರಿಗೂ ಸೇರಿದ್ದು. ಒಂದು ಜಾತಿ, ಒಂದು ಧರ್ಮದವರ ಪರವಾಗಿ ಮಾತ್ರ ವರ್ತಿಸುವುದು ಸಂವಿಧಾನಕ್ಕೆ ವಿರುದ್ಧವಾಗುತ್ತದೆ. ಕೋಮು ರಾಜಕಾರಣಕ್ಕೆ ಬಲಿಯಾದವರ ವಿಚಾರದಲ್ಲಿ ಬಿಜೆಪಿ ಸರ್ಕಾರ ಅಂತಹ ತಾರತಮ್ಯ ಮಾಡಿತ್ತು. ಅದನ್ನು ಈಗ ಅಳಿಸಿ ಹಾಕಿದ್ದೇವೆ' ಎಂದರು.

ದಕ್ಷಿಣ ಕನ್ನಡ ಜಿಲ್ಲೆಯ ಪ್ರವೀಣ್ ನೆಟ್ಟಾರು, ಶಿವಮೊಗ್ಗದ ಹರ್ಷ ಎಂಬ ಯುವಕರ ಕುಟುಂಬಗಳಿಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ತಲಾ ₹25 ಲಕ್ಷ ಪರಿಹಾರ ನೀಡಲಾಗಿತ್ತು. ಆದರೆ, ಮೃತರಾದ ಮುಸ್ಲಿಮರ ಕುಟುಂಬಗಳಿಗೆ ಪರಿಹಾರ ನೀಡಿರಲಿಲ್ಲ. ಎಲ್ಲರಿಗೂ ಸಮಾನವಾಗಿ ಪರಿಹಾರ ನೀಡಬೇಕೆಂಬ ಬೇಡಿಕೆಗೂ ಸ್ಪಂದಿಸಿರಲಿಲ್ಲ. ಈಗ ಅಂತಹ ಎಲ್ಲ ಕುಟುಂಬಗಳಿಗೂ ಕಾಂಗ್ರೆಸ್ ಸರ್ಕಾರ ನ್ಯಾಯ ಒದಗಿಸಿದೆ ಎಂದು ಹೇಳಿದರು.

'ನಮ್ಮ ಸರ್ಕಾರದ ಅವಧಿಯಲ್ಲಿ ಕಾನೂನು ಕೈಗೆತ್ತಿಕೊಳ್ಳುವ ಮತಾಂಧರಿಗೆ, ಮತೀಯ ಗೂಂಡಾಗಿರಿ ನಡೆಸುವವರಿಗೆ, ಜಾತಿ, ಧರ್ಮದ ಹೆಸರಿನಲ್ಲಿ ಕಾನೂನು ಉಲ್ಲಂಘಿಸುವವರಿಗೆ ತಕ್ಕ ಶಾಸ್ತಿ ಮಾಡುತ್ತೇವೆ. ಕಠಿಣ ಕಾನೂನು ಕ್ರಮಕ್ಕೆ ಪೊಲೀಸ್ ಇಲಾಖೆಗೆ ಸ್ಪಷ್ಟ ಸೂಚನೆ ನೀಡಿದ್ದೇನೆ' ಎಂದರು.

ಶೆಟ್ಟರ್, ಬೋಸರಾಜು 'ಕೈ' ಅಭ್ಯರ್ಥಿಗಳು

ಒಂದನೇ ಪುಟದಿಂದ

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಆಪ್ತರಾಗಿರುವ ಕೋಲಿ ಸಮುದಾಯದ ಮುಖಂಡ ತಿಪ್ಪಣ್ಣಪ್ಪ ಅವರು ಈ ಹಿಂದೆ ಒಂದು ವರ್ಷದ ಅವಧಿಗೆ (2019) ಪರಿಷತ್ ಸದಸ್ಯರಾಗಿದ್ದರು. ಕಲಬುರ್ಗಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೋಲಿ ಸಮುದಾಯದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಸಮುದಾಯದ ಮತ ಸೆಳೆಯುವ ಉದ್ದೇಶದಿಂದ ತಿಪ್ಪಣ್ಣಪ್ಪ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ಅವರ ಪರಿಷತ್ ಸದಸ್ಯ ಸ್ಥಾನದ ಅವಧಿ 2026ರ ಜೂನ್ 30ರವರೆಗೆ ಇರಲಿದೆ.

ಉಭಯ ಸದನಗಳ ಸದಸ್ಯರಲ್ಲದ ಎನ್.ಎಸ್.ಬೋಸರಾಜು ಅವರು ಸಚಿವರಾಗಿದ್ದಾರೆ. ಆರು ತಿಂಗಳ ಒಳಗೆ ಅವರು ವಿಧಾನಸಭೆ ಅಥವಾ ಪರಿಷತ್‌ನ ಸದಸ್ಯರಾಗಬೇಕಿದೆ. ಹೀಗಾಗಿ, ಪಕ್ಷದ ಮೂರನೇ ಅಭ್ಯರ್ಥಿಯಾಗಿ ಅವರನ್ನು ಕಣಕ್ಕೆ ಇಳಿಸಲಾಗಿದೆ. ಅವರು 2024ರ ಜೂನ್ 17ರ ವರೆಗೆ ಪರಿಷತ್ ಸದಸ್ಯರಾಗಿ ಇರಲಿದ್ದಾರೆ.

ವಿಧಾನ ಪರಿಷತ್‌ಗೆ ನಾಮನಿರ್ದೇಶನಗೊಂಡಿರುವ ಮೋಹನ್ ಕುಮಾರ್ ಕೊಂಡಜ್ಜಿ, ಪಿ.ಆರ್.ರಮೇಶ್ ಹಾಗೂ ಸಿ.ಎಂ. ಲಿಂಗಪ್ಪ ಅವರ ಅವಧಿ ಆಗಸ್ಟ್‌ನಲ್ಲಿ ಮುಗಿಯಲಿದೆ. ಈ ಸ್ಥಾನಗಳಿಗೆ ಆಗಸ್ಟ್‌ನಲ್ಲೇ ನಾಮನಿರ್ದೇಶನ ಮಾಡಲಾಗುವುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕ್ಷೇಮ ಕುಶಲ



ಮುಂಗಾರು ಆಗದಿರಲಿ ಆರೋಗ್ಯದ ಏರುಪೇರು

ಡಾ. ಶ್ರೀನಿವಾಸ ಹರಪನಹಳ್ಳಿ

ಜೂನ್ ತಿಂಗಳು ಆರಂಭವಾಗುತ್ತಿದ್ದಂತೆಯೇ ಸೃಷ್ಟಿಗೆ ಹೊಸ ಜೀವಕಳೆ ಬರುತ್ತದೆ. ಬೇಸಿಗೆಯ ಬೇಗುದಿಯನ್ನು ಕಡಿಮೆ ಮಾಡಿಕೊಳ್ಳಲು ಭೂಮಿ ಕೂಡ ಹಾತೊರೆಯುತ್ತದೆ. ಇದು ಬೆವರು ಸುರಿಸಿ ದಣಿದ ತನು-ಮನಗಳಿಗೆ ಮುಂಗಾರಿನ ಸೇಚನ ನೀಡುವ ಸಮಯ. ವಾತಾವರಣದಲ್ಲಾಗುವ ಬದಲಾವಣೆ ಈ ಸಮಯದಲ್ಲಿ ಸಹಜ ಕೂಡ. ಇದೇ ಸಮಯದಲ್ಲಿ ಒಂದೆಡೆ ಕೃಷಿ ಚಟುಚಟಿಕೆಗಳು ಗರಿಗೆದರಿದರೆ ಮತ್ತೊಂದೆಡೆ ಚಿಣ್ಣರ ಶಾಲಾರಂಭದ ಕಲರವ ಕೇಳುತ್ತದೆ.

ಮುಂಗಾರಿನ ಸಮಯ ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ಹಲವಾರು ಬದಲಾವಣೆಗಳಿಗೆ ಸಾಕ್ಷಿಯಾಗುತ್ತದೆ. ಬರಿದಾಗಿದ್ದ ಕೆರೆ-ನದಿಗಳು ನಿಧಾನವಾಗಿ ಮೈದುಂಬುತ್ತವೆ. ಬರಡಾಗಿದ್ದ ನೆಲ ಹಸುರಿನಿಂದ ಕಂಗೊಳಿಸಲಾರಂಭಿಸುತ್ತದೆ. ಇವು ಕೆಲವು ಜೀವಜಂತುಗಳ ಹೊಸತಳಿಗಳಿಗೂ ಕಾರಣವಾಗುತ್ತವೆ. ಇವು ಕೆಲವೊಮ್ಮೆ ನಮ್ಮ ಆರೋಗ್ಯದ ಮೇಲೂ ದುಷ್ಪರಿಣಾಮವನ್ನುಂಟು ಮಾಡುತ್ತವೆ. ಆದ್ದರಿಂದ ಮುಂಗಾರು ಮಳೆಯ ಅವಧಿಯಲ್ಲಿ ನಾವು ನಮ್ಮ ಆರೋಗ್ಯದ ದೃಷ್ಟಿಯಿಂದ ಕೆಲವು ಮುಂಜಾಗರೂಕತಾ ಕ್ರಮಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು.

ನಮ್ಮಲ್ಲಿ ಬಹುತೇಕ ಕಡೆ ಕುಡಿಯುವ ನೀರಿನ ಮೂಲ ಕೆರೆ-ನದಿಗಳ ಮೂಲಕ ಶೇಖರಿಸಿಟ್ಟ ಸಂಗ್ರಹಾಲಯದ ನೀರಾಗಿರುತ್ತದೆ. ಅದನ್ನು ಕೊಳವೆಗಳ ಮೂಲಕವೋ ಅಥವಾ ಟ್ಯಾಂಕರ್ ಮೂಲಕವೋ ಮನೆಮನೆಗೂ ತಲುಪುತ್ತದೆ. ಇನ್ನು ಕೆಲವೊಂದು ಕಡೆ ಬಾವಿ ಅಥವಾ ಸಿಹಿನೀರಿನ ಬೋರ್‌ವೆಲ್‌ಗಳೂ ಇರಬಹುದು. ಹೊಸ ಮಳೆಯಾದ ಸ್ವಲ್ಪ ಸಮಯದ ನಂತರ ನಾವು ಕುಡಿಯುವ ನೀರಿನ ರುಚಿ ಮತ್ತು ಬಣ್ಣದಲ್ಲಿ ಕೊಂಚ ಬದಲಾವಣೆಯನ್ನು ಕಾಣಬಹುದು. ಅದಕ್ಕೆ ಮುಖ್ಯ ಕಾರಣ ನೀರಿನ ಲವಣಾಂಶಗಳಲ್ಲಿ ಆಗಿರುವ ಕೆಲವು ಬದಲಾವಣೆಗಳು. ಕುಡಿಯುವ ನೀರು ಕಲುಷಿತಗೊಂಡಾಗ ಅಥವಾ ಸಂಸ್ಕರಿಸದ ನೀರನ್ನು ಕುಡಿದಾಗ ಅದು ಕೆಲವೊಮ್ಮೆ ಹೊಟ್ಟೆನೋವು, ಭೇದಿಯಂತಹ ತೊಂದರೆಯನ್ನು ಉಂಟುಮಾಡಬಹುದು. ಕಾಲರಾ, ಕಾಮಾಲೆಯಂತಹ ರೋಗಗಳೂ ಈ ಸಂದರ್ಭಗಳಲ್ಲೇ ಹರಡುತ್ತವೆ. ಆದ್ದರಿಂದ ಈ ಸಮಯದಲ್ಲಿ ಕುಡಿಯುವ ನೀರನ್ನು ಚೆನ್ನಾಗಿ ಕುದಿಸಿ ಶೇಖರಿಸಿಟ್ಟುಕೊಳ್ಳಬೇಕು.

ಆ ಮುಂಗಾರಿನ ಸಮಯದಲ್ಲಿ ಬಿಸಿಲಿನ ಝಳ ಕಡಿಮೆಯಾಗಿ ವಾತಾವರಣ ತಂಪಾಗುತ್ತದೆ. ಸತತವಾಗಿ ಮಳೆ ಸುರಿಯುತ್ತಿರುವಾಗ ಬೀಸುವ ಗಾಳಿಯಲ್ಲಿನ ತೇವಾಂಶ ಕೂಡ ತಂಪಾಗುವುದರಿಂದ ನಮಗೆ ಶೀತಗಾಳಿಯ ಅನುಭವವಾಗುತ್ತದೆ. ನಮ್ಮ ಪರಿಸರದಲ್ಲಿರುವ ವೈರಸ್‌ಗಳು ಸತತ ಬದಲಾವಣೆ (ಮ್ಯುಟೇಷನ್) ಹೊಂದುತ್ತಿರುವುದರಿಂದ ನಾವು ಹೊಸ ವೈರಸ್‌ಗಳ ಸಂಪರ್ಕಕ್ಕೆ ಬರುತ್ತೇವೆ. ಹಾಗಾಗಿ ಹೆಚ್ಚಿನವರಲ್ಲಿ ಕೆಮ್ಮು, ನೆಗಡಿ, ಜ್ವರದಂತಹ ಕಾಯಿಲೆಗಳು ಈ ಸಮಯದಲ್ಲಿ ಕಂಡುಬರುತ್ತವೆ. ಚಿಕ್ಕಮಕ್ಕಳಲ್ಲಿ ಮತ್ತು ವಯೋವೃದ್ಧರಲ್ಲಿ ರೋಗನಿರೋಧಕ ಶಕ್ತಿ ಕೊಂಚ ಕಡಿಮೆ ಇರುವುದರಿಂದ ಈ ಕಾಯಿಲೆಗಳು ಹೆಚ್ಚಾಗಿ ಇವರನ್ನೇ ಕಾಡುತ್ತವೆ. ಅನೇಕ ಮಕ್ಕಳಲ್ಲಿ ಶಾಲೆ ಪ್ರಾರಂಭವಾದ ಕೆಲವು ದಿನಗಳಲ್ಲಿ ಒಬ್ಬರಿಂದ ಒಬ್ಬರಿಗೆ ಕೆಮ್ಮು, ನೆಗಡಿ, ಜ್ವರಗಳು ಹರಡುತ್ತವೆ. ಹೀಗೆಂದು ಇವೇನೂ ಮಹಾ ತೊಂದರೆಯನ್ನು ನೀಡುವ ಕಾಯಿಲೆಯೇನಲ್ಲ. ಕೆಲವು ದಿನಗಳ ಮಾತ್ರೆ ಮತ್ತು ವಿಶ್ರಾಂತಿಯಿಂದ ಇದನ್ನು ಗುಣಪಡಿಸಬಹುದು. ಹೀಗಿದ್ದರೂ ರೋಗನಿರೋಧಕ ಶಕ್ತಿ ಕಡಿಮೆಯಿರುವ ವ್ಯಕ್ತಿಗಳನ್ನು ಸೋಂಕಿತರಿಂದ ದೂರವಿಡುವುದು ಒಳ್ಳೆಯದು. ಈ ಸಮಯದಲ್ಲಿ ಬೆಚ್ಚನೆಯ ಬಟ್ಟೆ ಧರಿಸಿ ತಲೆ-ಕಿವಿಗಳನ್ನು ಶೀತಗಾಳಿಗೆ ಒಡ್ಡದಂತೆ ರಕ್ಷಿಸಿಕೊಳ್ಳುವುದರಿಂದ ಮತ್ತು ಸೋಂಕಿತರ ಕಫ, ಕೆಮ್ಮಿನಿಂದ ದೂರವಿರುವುದರಿಂದ ಬಹುತೇಕ ಮಟ್ಟಿಗೆ ನಾವು ಈ ಕಾಯಿಲೆಗಳಿಂದ ಪಾರಾಗಬಹುದು.

ಮಳೆಗಾಲದಲ್ಲಿ ಮನೆಯ ಅಕ್ಕಪಕ್ಕದಲ್ಲಿ ನೀರು ಶೇಖರವಾಗಬಹುದು. ರಸ್ತೆಯಲ್ಲಿನ ಗುಂಡಿಗಳು, ಚರಂಡಿಗಳಲ್ಲಿ ಕೂಡ ನೀರು ಶೇಖರವಾಗಬಹುದು. ಇದರ ಜೊತೆಗೆ ಹೂಕುಂಡಗಳಲ್ಲಿ, ಮಾಳಿಗೆಯ ತುದಿಯಲ್ಲಿ ಬಾಲ್ಕನಿಯಲ್ಲಿ ಕೂಡ ನೀರು ನಿಲ್ಲಬಹುದು. ಇವೆಲ್ಲವೂ ಸೊಳ್ಳೆಗಳ ಕಾಟಕ್ಕೆ ಆಹ್ವಾನವಿತ್ತಂತೆ. ಮಲೇರಿಯಾ, ಡೆಂಗಿ ಮತ್ತು ಚಿಕುನ್‌ಗುನ್ಯಾದಂತಹ ರೋಗಗಳು ಹರಡುವುದು ಈ ಸಮಯದಲ್ಲೇ. ಆದ್ದರಿಂದ ಮುಂಗಾರು ಶುರುವಾಗುತ್ತಿದ್ದಂತೆ ಮನೆಯಲ್ಲಿನ ಹೂಕುಂಡಗಳು, ನೀರಿನ ತೊಟ್ಟಿಗಳು ಮತ್ತು ಸುತ್ತಲಿನ ಚರಂಡಿಗಳನ್ನು ಸ್ವಚ್ಛಗೊಳಿಸುವುದು ಬಹುಮುಖ್ಯ.

ಮಳೆಯಲ್ಲಿ ನೆನೆದ ಹಣ್ಣು-ತರಕಾರಿಗಳು ಬೇಗನೆ ಕೊಳೆಯಲಾರಂಭಿಸುತ್ತವೆ. ಕೊಳೆತ ಆಹಾರದಲ್ಲಿ ಬೆಳೆಯುವ ಕೆಲವು ಬ್ಯಾಕ್ಟೀರಿಯಾಗಳು ನಮ್ಮ ದೇಹವನ್ನು ಸೇರಿದಾಗ ಅನಾರೋಗ್ಯ ಉಂಟಾಗುತ್ತದೆ. ಆದ್ದರಿಂದ ಇವುಗಳನ್ನು ಚೆನ್ನಾಗಿ ತೊಳೆದು, ಸ್ವಚ್ಛಗೊಳಿಸಿ ಸಾಧ್ಯವಾದಷ್ಟೂ ತಾಜಾಸ್ಥಿತಿಯಲ್ಲಿ ಕಾಯ್ದಿಟ್ಟುಕೊಳ್ಳಬೇಕು. ಆಹಾರವನ್ನು ಚೆನ್ನಾಗಿ ಬಿಸಿಮಾಡಿ, ತಾಜಾ ಇರುವಾಗಲೇ ಸೇವಿಸುವುದು ಇದಕ್ಕೆ ಉತ್ತಮ ಪರಿಹಾರ. ಅದೇ ರೀತಿ ರಸ್ತೆಬದಿಯ ಫಾಸ್ಟ್ ಫುಡ್ ತಿನ್ನುವಾಗಲೂ ತುಂಬ ಎಚ್ಚರವನ್ನು ವಹಿಸಬೇಕು.

ಇದಲ್ಲದೆ ತಂಪಾದ ವಾತಾವರಣದಲ್ಲಿ ದೇಹದ ಮಾಂಸಖಂಡಗಳಲ್ಲಿ ಕೊಂಚ ಸೆಡೆತವಿರುತ್ತದೆ. ಇದು ಹಿರಿಯರಲ್ಲಿ ಹೆಚ್ಚಾಗಿ ಕಾಣಬರುತ್ತದೆ. ಆದ್ದರಿಂದ ಕೂಡುವಾಗ, ಏಳುವಾಗ ಅಥವಾ ನಡೆಯುವಾಗ ಸ್ನಾಯುಗಳಲ್ಲಿ ಮತ್ತು ಸಂದುಗಳಲ್ಲಿ ಬಿಗಿತವುಂಟಾಗಬಹುದು. ಒಮ್ಮೆಲೇ ಭಂಗಿ ಬದಲಿಸಿದಾಗ ಅಸಾಧ್ಯ ನೋವು ಕಾಣಿಸಬಹುದು. ಆದ್ದರಿಂದ ನಾವು ನಮ್ಮನ್ನು ಬೆಚ್ಚಗೆ ಇಟ್ಟುಕೊಳ್ಳುವುದು ಮತ್ತು ನಿಧಾನವಾಗಿ ಕೈ-ಕಾಲುಗಳನ್ನು ಬಿಡಿಸಿ ಸೆಡೆತವನ್ನು ಕಡಿಮೆಮಾಡಿಕೊಳ್ಳುವುದು ಬಹುಮುಖ್ಯ.

ಬಿಸಿಬಿಸಿ ಕುರುಕುಲು ತಿಂಡಿಗಳನ್ನು ಮೆಲ್ಲುತ್ತ ಟೀ-ಕಾಫಿ, ಕಷಾಯಗಳನ್ನು ಆಸ್ವಾದಿಸಲು ಮಳೆಗಾಲಕ್ಕಿಂತ ಉತ್ತಮ ಸಮಯ ಮತ್ತೊಂದಿಲ್ಲ. ಭೋರ್ಗರೆವ ಜಲಪಾತಗಳು, ತುಂಬಿ ಹರಿಯುವ ನದಿಗಳು ಮತ್ತು ಎಲ್ಲೆಡೆ ಹಸಿರು ಚಾದರವನ್ನು ಹೊತ್ತು ಕಂಗೊಳಿಸುತ್ತಿರುವ ವಸುಂಧರೆಯನ್ನು ನೋಡಿ ಹರ್ಷಪಡಲು ಮಳೆಗಾಲವೇ ಚೆನ್ನ. ಆದರೆ ಮಳೆ ತರುವ ಕೆಲ ಅನಾರೋಗ್ಯಕಾರಿ ಅಂಶಗಳನ್ನೂ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅಂದರೆ ಮಾತ್ರ ಈ ಅವಧಿಯನ್ನು ನಾವು ಕ್ಷೇಮವಾಗಿ ಕಳೆಯಬಹುದು. ❖

ಮಳೆಗಾಲಕ್ಕೆ ಕೆಲವು ಸಲಹೆಗಳು

- ಶುದ್ಧವಾದ, ಕುದಿಸಿದ ನೀರನ್ನೇ ಕುಡಿಯಬೇಕು
- ಬೆಚ್ಚನೆಯ ದಿರಿಸುಗಳನ್ನು ಧರಿಸಬೇಕು
- ಮನೆ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು
- ತಾಜಾ, ಚೆನ್ನಾಗಿ ಬೆಂದ ಆಹಾರವನ್ನೇ ಸೇವಿಸಬೇಕು
- ಕೈಕಾಲುಗಳ ಚಲನೆಯನ್ನು ಸಾವಧಾನವಾಗಿ ಮಾಡಬೇಕು



ಯೋಗ: ಲೋಕಕ್ಷೇಮದ ಆರೋಗ್ಯಸೂತ್ರ

ಜೂ. 21 ಯೋಗದಿನ

ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ದೇಶದಲ್ಲಿ 'ಯೋಗ'ವನ್ನು ದರ್ಶನ ಎಂದು ಆದರಿಸಲಾಗಿದೆ. ದರ್ಶನ ಎಂದರೆ ಕಾಣ್ಕೆ; ಆಳವಾದ ನೋಟ, ಅಂತರಂಗದ ಬೆಳಕು – ಹೀಗೆಲ್ಲ ಅರ್ಥ ಮಾಡಬಹುದು. ಜೀವನಕ್ಕೆ ಒದಗುವ ಅರಿವಿನ ಬೆಳಕನ್ನು ನಮ್ಮಲ್ಲಿ 'ದರ್ಶನ' ಎಂದು ಕರೆಯಲಾಗಿದೆ.

ನಮ್ಮ ಜೀವನ ಚೆನ್ನಾಗಿರಲು ಏನು ಬೇಕು? ಅನ್ನ, ಬಟ್ಟೆ, ನೀರು – ಹೀಗೆಲ್ಲ ಮೂಲಭೂತ ಅಗತ್ಯಗಳನ್ನು ಒಕ್ಕಣಿಸಬಹುದು. ಆದರೆ ಈ ಮೂಲಭೂತ ವಸ್ತುಗಳಿದ್ದರೂ ಅವನ್ನು ಬಳಸಿಕೊಳ್ಳಲು, ಅವುಗಳಿಂದ ಪ್ರಯೋಜನವನ್ನು ಪಡೆಯಲು ನಮಗೆ ಆವಶ್ಯಕವಾಗಿ ಬೇಕಾಗಿರುವುದು ಆರೋಗ್ಯ. ಹೀಗೆ ನಮಗೆ ಬೇಕಾದ ಆರೋಗ್ಯವನ್ನು ಸಂಪಾದಿಸಲು, ಸಂಪಾದಿಸಿದ್ದನ್ನು ಉಳಿಸಿಕೊಳ್ಳಲು ಬೇಕಾದ ಅರಿವನ್ನು ನೀಡುವ ದರ್ಶನವೇ 'ಯೋಗದರ್ಶನ.'

ಯೋಗದರ್ಶನ ಪ್ರತಿಪಾದಿಸುವ ಆರೋಗ್ಯದ ಕಲ್ಪನೆ ಕೂಡ ವಿಶಿಷ್ಟವಾಗಿದೆ. ಆರೋಗ್ಯ ಎಂದರೆ ಕೇವಲ ದೈಹಿಕವಾದ ಆರೋಗ್ಯವಷ್ಟೆ ಅಲ್ಲ, ಮಾನಸಿಕ ಮತ್ತು ಬೌದ್ಧಿಕ ಆರೋಗ್ಯವೂ ಇದರಲ್ಲಿ ಅಡಕಗೊಂಡಿದೆ. ಯೋಗದ ಎಂಟು ಅಂಗಗಳಲ್ಲಿ ಈ ವ್ಯಾಪ್ತಿ ಎದ್ದುಕಾಣುತ್ತದೆ. ಯೋಗದರ್ಶನದ ಮೂಲಪುರುಷನ್ನಾಗಿ ಮಹರ್ಷಿ ಪತಂಜಲಿಯನ್ನು ಹೇಳುವುದುಂಟು; ಆದರೆ ಪಾತಂಜಲ ಯೋಗಸೂತ್ರಗಳಿಗೂ ಮೊದಲೇ ವೇದ–ಉಪನಿಷತ್ತುಗಳಲ್ಲಿಯೇ ಯೋಗದ ವಿವರಗಳನ್ನು ಕಾಣಲಾದೀತು. ಹೀಗಿದ್ದರೂ ಅಧ್ಯಯನದ ದೃಷ್ಟಿಯಿಂದ ಪತಂಜಲಿಗಳ 'ಯೋಗಸೂತ್ರ'ಗಳನ್ನು ಈ ಶಾಸ್ತ್ರದ ಆಕರದಂತೆ ಪರಿಗಣಿಸಲಾಗುತ್ತದೆ. ಆದರೆ ಭಾರತೀಯ ದರ್ಶನದ ಬೇರೆ ಬೇರೆ ಶಾಖೆಗಳ ಪರಿಚಯವಿಲ್ಲದಿದ್ದರೆ ಈ ದರ್ಶನ ಸಮಗ್ರವಾಗಿ ನಮಗೆ ಒದಗದು. ಯೋಗಸೂತ್ರಗಳನ್ನು ಸಮಾಧಿ, ಸಾಧನ, ವಿಭೂತಿ ಮತ್ತು ಕೈವಲ್ಯ ಎಂಬ ನಾಲ್ಕು ಪಾದಗಳಲ್ಲಿ ವಿಭಾಗಿಸುವುದುಂಟು. ಈ ವಿಭಾಗಗಳನ್ನು ನೋಡಿದಾಗ ಈ ಶಾಸ್ತ್ರವು ಕೇವಲ ದೈಹಿಕ ಆರೋಗ್ಯವನ್ನು ಮಾತ್ರವೇ ಪ್ರತಿಪಾದಿಸುವ ವ್ಯಾಯಾಮದ ಗ್ರಂಥವಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದರೆ ಇಂದು ಯೋಗ ಎಂದರೆ ಯೋಗಾಸನಗಳು ಮಾತ್ರವೇ ಎಂಬ ವ್ಯಾಖ್ಯಾನ ಹೊರಟಂತಿದೆ; ಇದರ ಜೊತೆಗೆ ಸ್ವಲ್ಪಮಟ್ಟಿಗೆ ಪ್ರಾಣಾಯಾಮವನ್ನೂ ಕೆಲವರು ಸೇರಿಸುತ್ತಾರೆ; ಆದರೆ ಇದಷ್ಟೇ ಯೋಗದರ್ಶನವಲ್ಲ. ನಮ್ಮ ಜೀವನದಲ್ಲಿ ಶಾಶ್ವತವೂ ಸುಖಕರವೂ ಅದ ನೆಮ್ಮದಿಯ ಸ್ಥಿತಿಯನ್ನು ಹೊಂದುವುದು ಯೋಗದ ಗುರಿ; ಅದಕ್ಕೆ ಬೇಕಾದ ದೇಹ–ಮನಸ್ಸು–ಬುದ್ಧಿಗಳನ್ನು ಹೊಂದಿಸಲು, ಸಿದ್ಧಿಗೊಳಿಸಲು ಒದಗುವ ದೈಹಿಕ–ಮಾನಸಿಕ ಉಪಾಯಗಳೆಲ್ಲವೂ ಯೋಗವೇ.

ನಮ್ಮ ದೇಶದ ಬಹುಪಾಲು ದಾರ್ಶನಿಕರು ಯೋಗದ ಯಾವುದಾದರೊಂದು ಅಂಗವನ್ನಾದರೂ ಸಾಧನೆಯ ಭಾಗವಾಗಿ ಸ್ವೀಕರಿಸಿದ್ದಾರೆ ಎಂಬುದು ಗಮನಾರ್ಹ. ಉದಾಹರಣೆಗೆ, ಬುದ್ಧ ಭಗವಂತನು ಆರ್ಯಸತ್ಯಗಳ ಭಾಗವಾಗಿಯೇ ಎಂಟು ಯೋಗಗಳನ್ನೂ ಉಪದೇಶಿಸಿದ; ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್, ಸಮ್ಯಕ್ ಕರ್ಮ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ ಮತ್ತು ಸಮ್ಯಕ್ ಸಮಾಧಿ – ಇವೇ ಆ ಅಂಗಗಳು. ನಮ್ಮ ಅಂತರಂಗ–ಬಹಿರಂಗದ ಶುದ್ಧಿಗಾಗಿ ಬೇಕಾದ ಸಾಧನೆಗಳೆಲ್ಲವೂ ಇದರಲ್ಲಿ ಸೇರಿದೆ ಎಂಬುದು ಸ್ಪಷ್ಟ. ಪತಂಜಲಿಯು 'ಯೋಗಃ ಚಿತ್ತವೃತ್ತಿನಿರೋಧಃ' ಎಂದೇ ಯೋಗದ ಲಕ್ಷಣವನ್ನು ಹೇಳಿರುವುದನ್ನು ಮರೆಯುವಂತಿಲ್ಲ. ಚಿತ್ತವೆಂದರೆ ಮನಸ್ಸು, ಬುದ್ಧಿ, ಅಹಂಕಾರ. ಹೀಗಾಗಿ, ಆತ್ಮಸಾಕ್ಷಾತ್ಕಾರಕ್ಕಾಗಿ ನಮ್ಮ ದೈಹಿಕ–ಮಾನಸಿಕವಾದ ಏಳು–ಬೀಳುಗಳನ್ನು ಸಂಯಮದಲ್ಲಿರಿಸಿಕೊಳ್ಳಬೇಕೆಂಬುದೇ ಯೋಗದರ್ಶನದ ಕಾಣ್ಕೆ.

ಅಹಿಂಸೆ, ಸತ್ಯ, ಕಳ್ಳತನ ಮಾಡದಿರುವುದು, ಯಾವುದನ್ನೂ ಸುಮ್ಮನೆ ಪಡೆಯದಿರುವುದು, ಶುದ್ಧವಾಗಿರುವುದು, ಸಂತೋಷ, ತಪಸ್ಸು, ಸ್ವಾಧ್ಯಾಯ, ಆಸ್ತಿಕತೆ – ಇವುಗಳು ಯೋಗದ ಅಂಗಗಳನ್ನಾಗಿಯೇ ಹೇಳಲಾಗಿದೆ. ಯೋಗದ ವೈಶಾಲ್ಯ ಎಷ್ಟೆಂದು ಇದರಿಂದ ಗೊತ್ತಾಗುತ್ತದೆ. ನಮಗೆ, ಅದು ದೈಹಿಕ ಆರೋಗ್ಯವಾಗಲೀ, ಮಾನಸಿಕ ಆರೋಗ್ಯವಾಗಲೀ, ಬೌದ್ಧಿಕ ಆರೋಗ್ಯವಾಗಲೀ, ಬೇಕಾಗಿರುವುದು ಕೇವಲ ನಮ್ಮ ಸ್ವಾರ್ಥಸಾಧನೆಗೆ ಮಾತ್ರವಲ್ಲ, ಇಡಿಯ ಸಮಾಜದ ಆರೋಗ್ಯವನ್ನು ಕಾಪಾಡುವ ಹೊಣೆಗಾರಿಕೆಯೂ ಅದರಲ್ಲಿ ಸೇರಿದೆ ಎಂಬುದು ಮನನೀಯ.

ಭಗವದ್ಗೀತೆಯಲ್ಲಿಯ 'ಕರ್ಮಸು ಕೌಶಲಮ್' ಎಂಬ ಮಾತನ್ನು ಮತ್ತೆ ಮತ್ತೆ ನಾವು ಮನನ ಮಾಡಬೇಕಿದೆ; ನಾವು ಮಾಡುವ ಕೆಲಸಗಳಲ್ಲಿ ಇರಬೇಕಾದ ಜಾಣ್ಮೆ ಎಂದು ಇದರ ಸರಳಾರ್ಥ. ಇಲ್ಲಿಯ ಜಾಣತನ ಎನ್ನುವುದು ಆತ್ಮಘಾತಕವೂ ಲೋಕವಂಚಕವೂ ಆದ ಬುದ್ಧಿಯ ಕಸರತ್ತು ಅಲ್ಲ; ಇದು ನಮ್ಮನ್ನು ನಾವು ಲೋಕದ ಸಂತೋಷದಲ್ಲಿ ಶ್ರುತಿಗೊಳಿಸಿಕೊಳ್ಳುವ ಪ್ರಜ್ಞೆಯೇ ಈ ಕುಶಲತೆ. ❖





ಮನೆ ಮನಗಳನ್ನು ಆಗಾಗ ಸ್ವಚ್ಛಗೊಳಿಸುತ್ತ ಹಗುರಾಗಬೇಕು.

ಹಗುರವಾದರೆ ಹೊರೆ ಯಾನ ಸುಲಭವೊ ದೊರೆ!

ರಘು ವಿ.

ಉಪಗ್ರಹವನ್ನು ಕಕ್ಷೆಗೆ ಸೇರಿಸಬೇಕಾದರೆ, ಅದು ಭೂಮಿಯಿಂದ ಬಹುದೂರ ಸಾಗಬೇಕಾದರೆ ಅದು ಆದಷ್ಟೂ ಹಗುರಾಗಿರಬೇಕು. ಆಗ ಅದನ್ನು ಅಂತರಿಕ್ಷಕ್ಕೆ ಸಾಗಿಸುವ ರಾಕೆಟ್ ಕಡಿಮೆ ಇಂಧನವನ್ನು ಬಳಸಿ ಸಾಗಿಸಬಲ್ಲದು. ಜೊತೆಗೆ ಅದನ್ನು ಅಷ್ಟು ದೂರ ಸಾಗಿಸುವ ರಾಕೆಟ್ ಉರಿದು ಖಾಲಿಯಾದ ಇಂಜಿನ್ನುಗಳನ್ನು, ನಿರುಪಯೋಗಿಯಾದ ಉಪಕರಣಗಳನ್ನು ಕಳಚಿಕೊಂಡು ಭಾರವನ್ನು ಕಡಿಮೆ ಮಾಡಿಕೊಳ್ಳುತ್ತ ಸಾಗುತ್ತದೆ. ಇದು ಜೀವನಕ್ಕೂ ಅನ್ವಯ.

ಬದುಕು ಸರಕುಗಳ ಸರಮಾಲೆ; ಹೊತ್ತವರಿಗೆ ಮಾತ್ರ ಗೊತ್ತಷ್ಟೇ ಅದರ ಭಾರ. ನಮ್ಮ ಮನೆಯೊಳಗೆ ತುಂಬಿಕೊಂಡ ಸರಕಷ್ಟೇ ಅಲ್ಲ; ಮನದೊಳಗೆ, ಎದೆಯೊಳಗೆ ತುಂಬಿಕೊಂಡದ್ದೂ ಸರಕೇ. ಬಾಡಿಗೆಮನೆಯಲ್ಲಿದ್ದವರ ಸಾಮಾನ್ಯ ಹೇಳಿಕೆ, 'ನಮ್ಮ ಮನೆಯಲ್ಲಿ ಇಷ್ಟೊಂದು ಸಾಮಾನು–ಸರಂಜಾಮುಗಳಿವೆ ಎಂದು ಗೊತ್ತಾದದ್ದೇ ಮನೆ ಬದಲಿಸುವಾಗ.' ನಿಜ. ಈ ವಸ್ತುಗಳೇ ಮನೆಯನ್ನು ಬದಲಿಸುವಾಗ ಭಾರವಾಗುತ್ತವೆ. ಮನಸ್ಸಿನ ಸುತ್ತಲೂ ಹಾಗೇ ಒಮ್ಮೆ ನೋಡಿದರೆ ಎಷ್ಟೊಂದು ಬೇಡದ ಆಲೋಚನೆಗಳ ಸಂಗ್ರಹ ಅಲ್ಲಿದೆ ಎಂದು ಗೋಚರಿಸುತ್ತದೆ. ಮನೆ-ಮನಗಳನ್ನು ಆಗಾಗ ಸ್ವಚ್ಛಗೊಳಿಸುತ್ತ ಹಗುರಾಗಬೇಕು. ವಸ್ತುಗಳು ಕಡಿಮೆ ಇದ್ದರೆ ಚಿಕ್ಕಮನೆಯೇ ವಿಶಾಲವಾಗಿ ಕಾಣುವಂತೆ ಮನಸ್ಸಿನಲ್ಲೂ ಭಾವನೆಗಳು ಚೊಕ್ಕವಾಗಿ ಮಿತವಾಗಿ ಇದ್ದಾಗ ಮನಸ್ಸು ಪ್ರಫುಲ್ಲವಾಗಿರುವುದು. ಹಗುರಾಗಿಸಿಕೊಳ್ಳುವುದೂ ಒಂದು ಕಲೆ. ಬೇಡದ ವಸ್ತುಗಳನ್ನು, ಆಲೋಚನೆ, ಭಾವನೆಗಳನ್ನು, ಸಂಬಂಧಗಳನ್ನು ಎಸೆದು ಮುಂದೆ ಸಾಗಬೇಕು.

ಭಾರದ ಕಲ್ಪನೆಯೇ ಸೊಗಸಾದದ್ದು. ಭೌತಿಕ ಜಗತ್ತಿನಲ್ಲಿ, ತೂಕ ಎಂಬುದು ವೇಗವರ್ಧಕ ಅಥವಾ ಗುರುತ್ವಬಲದಿಂದ ಉಂಟಾಗುವ ಪರಿಣಾಮ. (The weight of an object is the force acting on the object due to acceleration or gravity.) ಸಾವಿರ ಕಿಲೋಗ್ರಾಮಿನ ಗುಂಡೊಂದು ಭೂಮಿಯ ಮೇಲೆ ಸುಮ್ಮನಿದ್ದರೆ, ಅದಕ್ಕೆ ತೂಕವನ್ನು ಆರೋಪಿಸಲಾಗದು. ಆದರೆ ಅದನ್ನು ಭೂಮಿಯಿಂದ ಎತ್ತುವ ಪ್ರಯತ್ನ ಮಾಡಿದಾಗ ಅದರ ತೂಕದ ಅನುಭವ ಉಂಟಾಗುತ್ತದೆ. ಇಲ್ಲಿ ಇನ್ನೊಂದು ಅಂಶವೂ ಇದೆ. ವಸ್ತುವು ಚಲಿಸುವ ವೇಗವೂ ಇಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಭಾರ ಎತ್ತುವ ಸ್ಪರ್ಧೆ ಗಮನಿಸಿದಾಗ, ಸ್ಪರ್ಧಾಳು ತಟಕ್ಕನೆ ತೂಕವನ್ನು ಭುಜಮಟ್ಟಕ್ಕೆ ಎತ್ತಿಕೊಂಡು ಕೆಲವು ಸೆಕೆಂಡು ಸುಧಾರಿಸಿಕೊಂಡು ಬಳಿಕ ಕಾಲುಗಳನ್ನು ಹಿಂದೆ-ಮುಂದೆ ಮಾಡಿ, ಅದೇ ಸಮಯದಲ್ಲಿ ಕೈಗಳನ್ನು ಮೇಲೆತ್ತಿ ತೂಕವನ್ನು ತಲೆಯಿಂದ ಮೇಲಕ್ಕೆ ಸಾಗಿಸಿರುತ್ತಾನೆ. ಇದನ್ನು 'ಜರ್ಕ್' ಎನ್ನುತ್ತಾರೆ. ಭಾರವನ್ನು ಉಪಾಯವಾಗಿ ಮೇಲಕ್ಕೆ ಎತ್ತುವ ಈ ತಂತ್ರದಲ್ಲಿ 'ಲಿಫ್ಟ್' ಮತ್ತು 'ಜರ್ಕ್' ಕ್ರಿಯೆಗಳು ಕ್ಷಣಾರ್ಧದಲ್ಲಿ ನಡೆಯುತ್ತವೆ. ವೇಗವರ್ಧಕ ಹೇಗೆ ಭಾರವನ್ನು ಆ ಕ್ಷಣಗಳಲ್ಲಿ ಕಡಿಮೆ ಮಾಡಿತು ಎಂಬುದನ್ನು ಆ ಜಟ್ಟಿಯೇ ಬಲ್ಲ! ಭಾರವನ್ನು ಗುರುತ್ವ ಹೆಚ್ಚಿಸಿದರೆ ವೇಗ ಅದನ್ನು ತಗ್ಗಿಸುತ್ತದೆ. ಜಟ್ಟಿಯೇನಾದರೂ ನಿಧಾನವಾಗಿ ತೂಕವನ್ನು ಎತ್ತಲು ಪ್ರಯತ್ನಿಸಿದರೆ ಅದು ಸಾಧ್ಯವಾಗುವುದೇ ಇಲ್ಲ. ವಸ್ತುವು ಚಲನೆಯಲ್ಲಿದ್ದಾಗ ವೇಗ ವರ್ಧಿಸಿದಂತೆ ಅದರ ತೂಕವೂ ಕಡಿಮೆಯಾಗುತ್ತದೆ. ವೇಗವಾಗಿ ಚಲಿಸುವ ಕಾರು ಗಂಟೆಗೆ 60 ಕಿ.ಮೀ. ವೇಗದಲ್ಲಿದ್ದಾಗ ನಿಯಂತ್ರಣ ಹೊಂದಿದ್ದು ಅದು 120 ದಾಟಿದಾಗ ಹಗುರಾಗಿ ನಿಯಂತ್ರಣ ತಪ್ಪುವುದು ಅನುಭವಕ್ಕೆ ಬರುತ್ತದೆ. ವಿಮಾನ ನಿಲ್ದಾಣದಿಂದ ರನ್‌ವೇಗೆ ಬರುವ ವೇಗ ಬೇರೆ. ಅದು ಅಲ್ಲಿಂದ ಟೇಕಾಫ್ ಆಗುವಾಗ ಸಾಧಿಸುವ ವೇಗ ಬೇರೆ, ಈ ಅತಿವೇಗದ ಬಲದಿಂದಲೇ ಲೋಹದ ಹಕ್ಕಿ ಹಗುರಾಗಿ ಆಕಾಶಕ್ಕೆ ನೆಗೆಯುವುದು!

ಬದುಕನ್ನು ಹಗುರಾಗಿಸಿಕೊಂಡಾಗ ಜೀವನವನ್ನು ಎತ್ತರೆತ್ತರಕ್ಕೆ ಸಾಗಿಸಿಕೊಳ್ಳಬಹುದು. ಹಗುರಾಗಿಸಿಕೊಳ್ಳಲು ಎರಡು ಮಾರ್ಗಗಳಿವೆ. ನಿರುಪಯುಕ್ತವಾದುವನ್ನು ನಿರ್ದಾಕ್ಷಿಣ್ಯದಿಂದ ಬಿಸುಡಬೇಕು. ಹಳತನ್ನು ಬಿಡದೆ ಹೊಸತನ್ನು ತುಂಬಿಕೊಳ್ಳಲಾಗದು. ಅಥವಾ ವೇಗವನ್ನು ವರ್ಧಿಸಿಕೊಳ್ಳಬೇಕು. ಅಂದರೆ ಬದಲಾವಣೆ, ಗುರಿ ತಲುಪುವ ಧಾವಂತ ಕಾಣಬೇಕು. ಅಂಗಳದಲ್ಲಾಡುವ ಗುಬ್ಬಚ್ಚಿ ಮೋಡಗಳ ಮೇಲಾಡುವ ಗರುಡನ ಸುಖವನ್ನೆಂದೂ ಅನುಭವಿಸದು. ಮನಸ್ಸು ಅಷ್ಟೆ; ಬದುಕೂ ಅಷ್ಟೆ. ಕೆಳಮಟ್ಟದ ಹಾರಾಟಕ್ಕೇ ತೃಪ್ತವಾದರೆ, ಎತ್ತರದ ಅನುಭವಗಳಿಂದ ವಂಚಿತವಾಗುತ್ತವೆ. 'ನಾಲ್ಪೇ ಸುಖಮಸ್ತು ಭೂಮೈವ ಸುಖಂ' ಎಂಬ ಉಪನಿಷತ್ತಿನ ಮಾತಿನ ಅರ್ಥ ಇದೇ.

ವಸ್ತುಗಳಿಗೆ ಆಕಾರವಿರುವುದರಿಂದ, ಅವು ಆಕ್ರಮಿಸುವ ಜಾಗದ ಕಲ್ಪನೆ ಇರುವುದರಿಂದ ಅವುಗಳನ್ನು ವಿಂಗಡಿಸಿ, ಬೇಡವಾದವುಗಳನ್ನು ವಗಾಯಿಸುವುದು ಸುಲಭ. ಆದರೆ, ಮನಸ್ಸೆಂಬ ಮನೆಯೊಳಗೆ – ಅದು ಆಕಾಶದಷ್ಟು ವಿಶಾಲವಾದ್ದರಿಂದ – ಆಲೋಚನೆ, ಭಾವನೆಗಳು ಅಲ್ಲಿ ಆಕ್ರಮಿಸಿಕೊಳ್ಳುವ ಜಾಗದ ಕಲ್ಪನೆ ನಮಗೆ ದೊರೆಯದು. ಕೋಳಿಯೊಂದಿಗೆ ಬರುವ ಪುಕ್ಕದಂತೆ, ಈ ಆಲೋಚನೆ ಭಾವನೆಗಳಿಗೆ ಜೊತೆಯಾಗಿ ಉಪಚಿಂತನೆಗಳು ಹುಟ್ಟಿಕೊಳ್ಳುತ್ತವೆ. ಇವೂ ಇರಲಿ, ಅವೂ ಇರಲಿ – ಎಂದು ಸುಮ್ಮನಿರುತ್ತೇವೆ. ಆದರೆ ಸಮಸ್ಯೆಗಳು ಒಂದೊಂದಾಗಿ ಇಣುಕುತ್ತವೆ. ಇದಕ್ಕೆ ಮೊದಲ ಬಲಿ ಏಕಾಗ್ರತೆ; ಎರಡನೆಯದು ಮನಶ್ಶಾಂತಿ; ಮೂರನೆಯದು ಆರೋಗ್ಯ. ಯಾರದೋ ಮೇಲಣ ಪೂರ್ವಗ್ರಹ, ಅವರು ಎದುರಾದರೆ ಕೋಪ. ಇದರಿಂದ ಮನೆಯವರ ಮೇಲೆ ಸಿಡುಕು, ಅಂದಿನ ದಿನದ ಕೆಲಸ ಹಾಳು. ಪರಿಣಾಮ ಬೆಳವಣಿಗೆ ಕುಂಠಿತ. ಅದರಿಂದ ಹತಾಶೆ, ನಿರಾಶೆ, ದುಃಖ. ತತ್ಪರಿಣಾಮ ಕಾಯಿಲೆ. ಬದುಕು ಭಾರವಾದಾಗಲೇ ಕಾಯಿಲೆಗಳು ಅಮರಿಕೊಳ್ಳುವುದು. ಬದುಕು ಹೆಚ್ಚು ಭಾರವಾಗುವುದು ನಿರೀಕ್ಷೆ, ಅಪೇಕ್ಷೆಗಳಿಂದ. ಆ ಕ್ಷಣದಲ್ಲಿ ಬದುಕಿದಾಗ ಅದಕ್ಕೆ ಹಿಂದೆ ಮುಂದೆ ಇರದಾದಾಗ, ಬದುಕು ಹಗುರವಾಗುವುದು. ರಮಣರಂತೆ, ರಾಮಕೃಷ್ಣರಂತೆ ಬದುಕಬೇಕು. ತತ್‌ಕ್ಷಣದ ಅಸ್ತಿತ್ವ, ಅಂದಂದಿನ ಬದುಕಷ್ಟೆ ಮುಖ್ಯ. ಕಗ್ಗ ಅದನ್ನು ಸೊಗಸಾಗಿ ಹೇಳುತ್ತದೆ: 'ಮುಂದೇನೊ ಮತ್ತೇನೊ, ಇಂದಿಗಾ ಮಾತೇಕೆ? ಸಂದರ್ಭ ಬರಲಿ, ಬಂದಾಗಳಾ ಚಿಂತೆ; ಹೊಂದಿಸುವನಾರೊ ನಿನ್ನಾಳಲ್ಲ ಬೇರಿಹನು, ಇಂದಿಗಿಂದಿನ ಬದುಕು – ಮಂಕುತಿಮ್ಮ'. ಹೀಗೆ ಮನೆ ಮನ ಬದುಕುಗಳನ್ನು ಹಗುರಾಗಿಸಿಕೊಂಡು ಸಾಗೋಣ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಾನು ವಾಚಾಳಿಗಳಿಂದ ಮೌನವನ್ನು, ಅಸಹಿಷ್ಣು ಮನೋಭಾವದವರಿಂದ ಸಹನೆಯನ್ನು, ದಯೆಯಿಲ್ಲದವರಿಂದ ದಯಾಪರತೆಯನ್ನು ಕಲಿತಿದ್ದೇನೆ. ಆದರೂ ವಿಚಿತ್ರವೆಂದರೆ, ಈ ಗುರುಗಳಿಗೆ ನಾನು ಕೃತಜ್ಞತೆ ತೋರುವುದೇ ಇಲ್ಲ!

-ಖಲೀಲ್ ಗಿಬ್ರಾನ್

ಗ್ರಾಹಕರ ಹಿತರಕ್ಷಣೆಗೆ ಶಿಫಾರಸು ಆರ್‌ಬಿಐಗೆ ಜಾರಿ ಹೊಣೆ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೇಮಕ ಮಾಡಿದ್ದ ತಜ್ಞರ ಸಮಿತಿಯೊಂದು, ಬ್ಯಾಂಕ್‌ಗಳಲ್ಲಿ ಗ್ರಾಹಕರಿಗೆ ಒದಗಿಸುವ ಸೇವೆಗಳಲ್ಲಿ ಸುಧಾರಣೆ ತರಲು ಕೆಲವು ಸ್ವಾಗತಾರ್ಹ ಶಿಫಾರಸುಗಳನ್ನು ಸಲ್ಲಿಸಿದೆ. ಈ ಶಿಫಾರಸುಗಳು ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೂ ಅನ್ವಯವಾಗುತ್ತವೆ ಎಂದು ವರದಿಯಾಗಿದೆ. ಗ್ರಾಹಕರ ಹಿತ ಕಾಯುವ ವಿಚಾರದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳದ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕೂಡ ಸಮಿತಿಯು ಶಿಫಾರಸು ಮಾಡಿದೆ. ತಜ್ಞರ ಸಮಿತಿಯು ಮಾಡಿರುವ ಶಿಫಾರಸುಗಳಲ್ಲಿ ಪ್ರಮುಖವಾದದ್ದು ಒಂದಿದೆ. ಲೋಪಗಳು ಪತ್ತೆಯಾದ ಸಂದರ್ಭಗಳಲ್ಲಿ ಅವನ್ನು ಸರಿಪಡಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟ ಸಂಸ್ಥೆಗಳಿಗೆ ನಿರ್ದೇಶನ ನೀಡುವ ಅಧಿಕಾರವನ್ನು ಆರ್‌ಬಿಐ ಒಂಬುಡ್ಸ್‌ಮನ್ ವ್ಯವಸ್ಥೆಗೆ ನೀಡಬೇಕು; ಆ ಕ್ರಮವನ್ನು ಸಂಬಂಧಪಟ್ಟ ಸಂಸ್ಥೆಯು ಜಾರಿಗೆ ತಂದಿದೆಯೇ ಎಂಬುದರ ವಿವರವು ಆರ್‌ಬಿಐಗೆ ಸಲ್ಲಿಕೆಯಾಗಬೇಕು ಎಂಬುದು ಆ ಶಿಫಾರಸು. ಗ್ರಾಹಕರಿಗೆ ಒದಗಿಸುವ ಸೇವೆಗಳ ವಿಚಾರದಲ್ಲಿ ವ್ಯವಸ್ಥೆಯಲ್ಲಿ ಬದಲಾವಣೆ ತರುವವರಿಗೆ ಉತ್ತೇಜನ ನೀಡುವ ಅಂಶವೂ ಶಿಫಾರಸುಗಳಲ್ಲಿ ಸೇರಿದೆ. ಖಾತೆ ಹೊಂದಿದ್ದ ವ್ಯಕ್ತಿಯು ಮೃತಪಟ್ಟ ನಂತರದಲ್ಲಿ ಆ ವ್ಯಕ್ತಿಯ ಕಾನೂನುಬದ್ಧ ವಾರಸುದಾರರು ಸಲ್ಲಿಸುವ ಕ್ಲೇಮ್ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಇತ್ಯರ್ಥಪಡಿಸುವ ಅವಕಾಶ ಇರಬೇಕು, ಪಿಂಚಣಿ ಪಡೆಯುತ್ತಿರುವ ವ್ಯಕ್ತಿಗಳು ತಮ್ಮ ಜೀವಿತ ಪ್ರಮಾಣಪತ್ರವನ್ನು ಸಲ್ಲಿಸುವ ವಿಚಾರದಲ್ಲಿ ನಿಯಮಗಳಲ್ಲಿ ಒಂದಿಷ್ಟು ಸಡಿಲಿಕೆ ಬೇಕು ಎಂದು ಸಮಿತಿ ಹೇಳಿದೆ. ಕಾಲಕಾಲಕ್ಕೆ ಆಗಬೇಕಿರುವ ಕೆವೈಸಿ ದಾಖಲೆಗಳ ಸಲ್ಲಿಕೆ ಆಗದಿದ್ದ ಮಾತ್ರಕ್ಕೇ ಖಾತೆಯನ್ನು ಸ್ಥಗಿತಗೊಳಿಸುವಂತೆ ಇಲ್ಲ ಎಂದು ಸಲಹೆ ನೀಡಿದೆ. ಸಾಲ ಮರುಪಾವತಿ ಆಗಿ, ಸಾಲದ ಖಾತೆಯನ್ನು ಮುಕ್ತಾಯಗೊಳಿಸಿದ ನಂತರದಲ್ಲಿ, ಸಾಲ ಪಡೆದವರ ಆಸ್ತಿಯ ದಾಖಲೆಗಳನ್ನು ಕಾಲಮಿತಿಯಲ್ಲಿ ಹಿಂದಿರುಗಿಸಬೇಕು ಎಂದು ಅದು ಹೇಳಿದೆ. ಹೀಗೆ ಕಾಲಮಿತಿಯಲ್ಲಿ ದಾಖಲೆಗಳನ್ನು ವಾಪಸ್ ಮಾಡದೆ ಇದ್ದರೆ, ಹಣಕಾಸು ಸಂಸ್ಥೆಗೆ ದಂಡ ವಿಧಿಸಬೇಕು ಎಂದು ಶಿಫಾರಸಿನಲ್ಲಿ ಹೇಳಲಾಗಿದೆ.



ಬ್ಯಾಂಕಿಂಗ್‌ನಂತಹ ಅತಿಮುಖ್ಯವಾದ ಸೇವೆಗಳಲ್ಲಿ ಗ್ರಾಹಕರಿಗೆ ನ್ಯಾಯಸಮ್ಮತ ರೀತಿಯಲ್ಲಿ ಸ್ಪಂದನ ಸಿಗುವಂತೆ ಆಗಬೇಕು

ಗ್ರಾಹಕರು ಬ್ಯಾಂಕ್‌ಗಳ ಜೊತೆಗಿನ ಒಡನಾಟದಲ್ಲಿ ಇಂತಹ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಈಚೆಗೆ ಕೆಲವು ವರ್ಷಗಳಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳವಣಿಗೆ ಆಗಿದೆ. ಹಾಗೆಯೇ, ಸೇವೆಗಳಲ್ಲಿ ಲೋಪಗಳು ಇವೆ ಎಂಬ ದೂರುಗಳು ಸಲ್ಲಿಕೆಯಾಗುವ ಪ್ರಮಾಣವೂ ಹೆಚ್ಚಾಗಿದೆ. ಬ್ಯಾಂಕ್ ಕಾಲ್ ಸೆಂಟರ್ ಉದ್ಯೋಗಿಗಳು ತಮಗೆ ಕಿರುಕುಳ ನೀಡಿದ್ದಾರೆ ಎಂಬ ದೂರುಗಳನ್ನು ಕೂಡ ಕೆಲವು ಗ್ರಾಹಕರು ನೀಡಿದ್ದಾರೆ. ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುತ್ತಿಲ್ಲ, ಸಮಸ್ಯೆಗಳಿಗೆ ಬರುವ ಪ್ರತಿಕ್ರಿಯೆಗಳು ಸಮಾಧಾನಕರವಾಗಿ ಇರುವುದಿಲ್ಲ ಎಂದು ಕೂಡ ಹೇಳಿದ್ದಾರೆ. ಕಾಲ್ ಸೆಂಟರ್‌ಗಳ ಕೆಲಸದ ಸ್ವರೂಪವನ್ನು ಸುಧಾರಿಸಲು ಕೂಡ ಸಮಿತಿಯು ಕೆಲವು ಕ್ರಮಗಳನ್ನು ಶಿಫಾರಸಿನಲ್ಲಿ ಹೇಳಿದೆ. ಕಾಲ್ ಸೆಂಟರ್‌ಗೆ ಮಾಡಿದ ಕರೆಯು ಮಧ್ಯದಲ್ಲಿಯೇ ಕಡಿತ ಆದಲ್ಲಿ, ಆ ಗ್ರಾಹಕನಿಗೆ ಮತ್ತೆ ಕರೆ ಮಾಡುವ ವ್ಯವಸ್ಥೆಯೊಂದನ್ನು ರೂಪಿಸಬೇಕು ಎಂದು ಹೇಳಿದೆ. ಕಾಲ್ ಸೆಂಟರ್‌ಗಳಲ್ಲಿ ಕೆಲಸ ಮಾಡುವವರು ಹಾಗೂ ಗ್ರಾಹಕರ ನಡುವೆ ಪ್ರಾದೇಶಿಕ ಭಾಷೆಗಳಲ್ಲಿಯೂ ಸ್ಪಷ್ಟ ಸಂವಹನ ಸಾಧ್ಯವಾಗಬೇಕು ಎಂದು ಹೇಳಿದೆ. ಕ್ರಮ ಜರುಗಿಸುವ ವಿಚಾರದಲ್ಲಿ ತೃಪ್ತಿಕರ ಕೆಲಸ ಆಗುತ್ತಿಲ್ಲ ಎಂಬುದನ್ನು ಸಮಿತಿ ಗುರುತಿಸಿದೆ. ಆರ್‌ಬಿಐ ಒಂಬುಡ್ಸ್‌ಮನ್ ವ್ಯವಸ್ಥೆಯನ್ನು ಬಲಪಡಿಸಬೇಕು. ದೂರುಗಳನ್ನು ಪರಿಶೀಲಿಸಿ, ಸಮಸ್ಯೆಯನ್ನು ಬಗೆಹರಿಸಲು ಅಗತ್ಯವಿರುವ ಕ್ರಮವನ್ನು ಕೈಗೊಳ್ಳುವಂತೆ ಸಂಸ್ಥೆಗಳಿಗೆ ನಿರ್ದೇಶನ ನೀಡುವ ಅಧಿಕಾರವು ಆರ್‌ಬಿಐ ಒಂಬುಡ್ಸ್‌ಮನ್ ವ್ಯವಸ್ಥೆಗೆ ಇರಬೇಕು ಎಂದು ಸಮಿತಿಯು ಹೇಳಿದೆ. ಸಣ್ಣ ಮೊತ್ತವನ್ನು ಒಳಗೊಂಡ ಹಣಕಾಸಿನ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ಕೃತಕ ಬುದ್ಧಿಮತ್ತೆ ಹಾಗೂ ಮೆಷಿನ್ ಲರ್ನಿಂಗ್ ಸೌಲಭ್ಯವನ್ನು ಬಳಸಿಕೊಳ್ಳಬೇಕು ಎಂದು ಶಿಫಾರಸು ಹೇಳುತ್ತದೆ.

ಬ್ಯಾಂಕಿಂಗ್ ಸೇವೆ ಅತಿಮುಖ್ಯವಾದ ಸೇವೆಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ. ಇಂತಹ ಸೇವೆಗಳಲ್ಲಿ ಗ್ರಾಹಕರಿಗೆ ನ್ಯಾಯಸಮ್ಮತ ರೀತಿಯಲ್ಲಿ ಸ್ಪಂದನ ಸಿಗುವಂತೆ ಆಗಬೇಕು. ಗ್ರಾಹಕರಿಗೆ ಅತ್ಯುತ್ತಮ ಮಟ್ಟದ ಸೇವೆಗಳು ಲಭ್ಯವಾಗುವಂತೆ ಮಾಡಲು ಸೂಕ್ತವಾದ ನಿಯಮಗಳನ್ನು ರೂಪಿಸಲು ಜಗತ್ತಿನಾದ್ಯಂತ ಹಲವು ಕೇಂದ್ರೀಯ ಬ್ಯಾಂಕ್‌ಗಳು ಗಮನ ನೀಡುತ್ತಿವೆ. ಸಮಿತಿಯು ನೀಡಿರುವ ಶಿಫಾರಸುಗಳಿಗೆ ಸಾರ್ವಜನಿಕರಿಂದ ಸಲಹೆಗಳನ್ನು ಪಡೆದು, ಅವುಗಳನ್ನು ಜಾರಿಗೆ ತರುವ ಕೆಲಸವನ್ನು ಆರ್‌ಬಿಐ ಈಗ ಮಾಡಬೇಕಿದೆ.

ದಿನದ ಟ್ವೀಟ್

ಸಮಾನ ದುಃಖಿಗಳು



ಕೋಮು ಹಿಂಸಾಕೃತ್ಯಗಳಲ್ಲಿ ಸಾವಿಗೀಡಾದ 6 ಜನರ ಕುಟುಂಬದವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ತಲಾ ₹ 25 ಲಕ್ಷ ಪರಿಹಾರ ಪಡೆದಿದ್ದಾರೆ. ಬಜರಂಗದಳ ಕಾರ್ಯಕರ್ತ ದೀಪಕ್ ರಾವ್ ಈ ಪಟ್ಟಿಯಲ್ಲಿದ್ದಾರೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ಪ್ರವೀಣ್ ನೆಟ್ಟಾರು ಕುಟುಂಬದವರನ್ನು ಭೇಟಿಯಾಗಿದ್ದ ಸಂದರ್ಭದಲ್ಲಿ, ಅದೇ ಜಿಲ್ಲೆಯ ಫಾಜಿಲ್ ಮತ್ತು ಮಸೂದ್ ಅವರ ಮನೆಗಳಿಗೆ ತೆರಳಲು ನಿರಾಕರಿಸಿದ್ದರು. ಈ ಇಬ್ಬರು ಸಹ ಪಟ್ಟಿಯಲ್ಲಿ ಸೇರಿದ್ದಾರೆ.

ಅನುಷಾ ರವಿ ಸೂದ್, ಪತ್ರಕರ್ತೆ

ಕಿಡಿನುಡಿ



ಕಠಿಣ ಪರಿಶ್ರಮ ವಹಿಸಿ ನೀಟ್, ಜೆಇಇ, ರಾಜ್ಯ ಪ್ರವೇಶ ಪರೀಕ್ಷೆಗಳಲ್ಲಿ ಉತ್ತಮ ಅಂಕ ಪಡೆದಿರುವ ವಿದ್ಯಾರ್ಥಿಗಳ ಬಗ್ಗೆ, ವಿಶಾಲ ಮನೋಭಾವದವರು ಮೆಚ್ಚುಗೆಯ ಮಾತುಗಳನ್ನಾಡಬೇಕು. ಹಾಗೆ ಮಾಡಲಾಗದಿದ್ದರೆ, 'ಕೈಗೆಟುಕದ ದ್ರಾಕ್ಷಿ ಹುಳಿ' ಎಂಬ ಮನಃಸ್ಥಿತಿ ತೋರಿಸುವುದಕ್ಕೆ ಬದಲಾಗಿ ಸುಮ್ಮನಿರಬೇಕು. ಈ ಪರೀಕ್ಷೆಗಳಲ್ಲಿ ಅಷ್ಟು ಉತ್ತಮ ಸಾಧನೆ ಮಾಡದವರೂ ಮುಂದೆ ಬದುಕಿನಲ್ಲಿ ಮತ್ತು ವೃತ್ತಿ ಜೀವನದಲ್ಲಿ ಉತ್ತಮ ಸಾಧನೆ ಮಾಡಬಹುದು. ಹಾಗೆಂದ ಮಾತ್ರಕ್ಕೆ, ಉತ್ತಮ ಸಾಧನೆ ಮಾಡಿದವರನ್ನು ಉಪೇಕ್ಷಿಸಬೇಕು ಎಂದರ್ಥವಲ್ಲ.

ಡಾ. ದೀಪಕ್ ಕೃಷ್ಣಮೂರ್ತಿ, ಹೃದ್ರೋಗ ತಜ್ಞ

25 ವರ್ಷಗಳ ಹಿಂದೆ

ಶನಿವಾರ, 20-6-1998

- **ಕೇಂದ್ರ ಸರ್ಕಾರಕ್ಕೆ ಮತ್ತೆ ಜಯಾ ಎಚ್ಚರಿಕೆ**

ಚೆನ್ನೈ, ಜೂನ್ 19– ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿದ ಬೆಂಬಲವನ್ನು ಅಗ್ಗವೆಂದು ಭಾವಿಸಬಾರದು ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಜೆ.ಜಯಲಲಿತಾ ಅವರು ಇಂದು ಎಚ್ಚರಿಕೆ ನೀಡಿದ್ದಾರೆ.

ತಮ್ಮ ಪಕ್ಷವನ್ನು ಒಡೆಯಲು ಯತ್ನಿಸುತ್ತಿರುವ ಬಿಜೆಪಿ, ಕೇಂದ್ರದಲ್ಲಿ ಅಧಿಕಾರದಲ್ಲಿ ಉಳಿಯಲು ತಮಿಳುನಾಡಿನಲ್ಲಿ ಅಧಿಕಾರದಲ್ಲಿರುವ ಡಿಎಂಕೆ ಸರ್ಕಾರದೊಂದಿಗೆ ರಹಸ್ಯ ಸಂಪರ್ಕ ಹೊಂದಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

- **ಪೌಷ್ಟಿಕ ಆಹಾರ ಯೋಜನೆ ಸಿಓಡಿ ತನಿಖೆಗೆ**

ಬೆಂಗಳೂರು, ಜೂನ್ 19– ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ನೀಡುವ ಯೋಜನೆಯಲ್ಲಿ ನಡೆಯುತ್ತಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸಿಓಡಿ ತನಿಖೆ ನಡೆಸುವಂತೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಂದು ಇಲ್ಲಿ ಆದೇಶಿಸಿದರು.

'ಈ ಯೋಜನೆಯ ಪೌಷ್ಟಿಕ ಆಹಾರ ಸಾಗಣೆ ಮತ್ತು ವಿತರಣೆಯಲ್ಲಿ ಭಾರಿ ದುರುಪಯೋಗ ಆಗುತ್ತಿದೆ; ಸಂಬಂಧಪಟ್ಟ ಅಧಿಕಾರಿಗಳು ಯೋಜನೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂಬ ಬಗ್ಗೆ ತೀವ್ರ ಸ್ವರೂಪದ ದೂರುಗಳಿವೆ. ಈ ಸಂಬಂಧ ಸಿಓಡಿ ತನಿಖೆ ನಡೆಸಿ ಹತ್ತು ದಿನಗಳ ಒಳಗೆ ಸರ್ಕಾರಕ್ಕೆ ವರದಿ ಪಡೆಯಲು ಕ್ರಮ ಕೈಗೊಳ್ಳಬೇಕು' ಎಂದು ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಿದರು.

50 ವರ್ಷಗಳ ಹಿಂದೆ

ಬುಧವಾರ, 20-6-1973

- **ಮಂಡ್ಯದಿಂದ ಅಕ್ಕಿ ಕಳ್ಳಸಾಗಾಣಿಕೆ ಪತ್ತೆ: 5 ಲಾರಿಗಳ ವಶ**

ಬೆಂಗಳೂರು, ಜೂನ್ 19– ಮಂಡ್ಯ ಜಿಲ್ಲೆಯಿಂದ ಬೆಂಗಳೂರಿಗೆ ಅಕ್ಕಿ ಹೊತ್ತು ಬರುತ್ತಿದ್ದ ಐದು ಲಾರಿಗಳನ್ನು ಬೆಂಗಳೂರು ಜಿಲ್ಲೆ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಮಂಡ್ಯ-ಬೆಂಗಳೂರು ಜಿಲ್ಲೆ ಗಡಿ ಬಳಿ ಚನ್ನಪಟ್ಟಣದ ಪೊಲೀಸ್ ಇನ್‌ಸ್ಪೆಕ್ಟರ್ ಶ್ರೀ ಗೋವಿಂದ ರೆಡ್ಡಿ ಹಾಗೂ ಸಿಬ್ಬಂದಿ ಜೂನ್ 16ರಂದು ಎರಡು ಲಾರಿ ಹಾಗೂ ಇಂದು ಮೂರು ಲಾರಿಗಳನ್ನು ವಶಪಡಿಸಿಕೊಂಡರು.

ಪೊಲೀಸರು ಸುಮಾರು 80,000 ರೂಪಾಯಿ ಬೆಲೆಬಾಳುವ 440 ಮೂಟೆ ಅಕ್ಕಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ.

- **ತಮಿಳುನಾಡಿನಲ್ಲಿ ಮತ್ತೆ ಪಾನನಿರೋಧ**

ಮದರಾಸ್, ಜೂನ್ 19– ತಮಿಳುನಾಡಿನಲ್ಲಿ ಪಾನನಿರೋಧವನ್ನು ಎರಡು ವರ್ಷಗಳ ಕಾಲ ರದ್ದುಗೊಳಿಸಿದ ನಂತರ ಈಗ ಮತ್ತೆ ಮುಂದಿನ ಸೆಪ್ಟೆಂಬರ್ 1ರಿಂದ ಹಂತ ಹಂತವಾಗಿ ಜಾರಿಗೆ ತರಲಾಗುವುದು.

ಪಾನನಿರೋಧವನ್ನು ಪುನಃ ಜಾರಿಗೆ ತರುವ ಮೊದಲ ಕ್ರಮವಾಗಿ ಈ ವರ್ಷ ಸೆಪ್ಟೆಂಬರ್ 1ರಿಂದ ತಮಿಳುನಾಡಿನಲ್ಲಿ ಹೆಂಡದ ಅಂಗಡಿಗಳನ್ನು ಮುಚ್ಚಲಾಗುವುದೆಂದು ಮುಖ್ಯಮಂತ್ರಿ ಶ್ರೀ ಎಂ. ಕರುಣಾನಿಧಿ ಅವರು ಸಂಪುಟ ಸಭೆಯ ನಂತರ ಇಂದು ಪತ್ರಕರ್ತರಿಗೆ ತಿಳಿಸಿದರು.

'ಸ್ವರ್ಗಕ್ಕೆ ಏರುವ ಸೋಪಾನ'ದಲ್ಲಿ ಮೂಗು ಮುಚ್ಚಿಕೊಳ್ಳದೇ ವಿಧಿಯಿಲ್ಲ!

ಹಿಮಾಲಯದಲ್ಲಿ ಹೀಗೊಂದು ಸಮಸ್ಯೆ



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಮೇ 29, ಅಂತರರಾಷ್ಟ್ರೀಯ ಮೌಂಟ್ ಎವರೆಸ್ಟ್ ದಿನ. ಎಪ್ಪತ್ತು ವರ್ಷಗಳ ಹಿಂದೆ, 1953ರ ಮೇ 29ರಂದು ಎಡ್ಮಂಡ್ ಹಿಲರಿ ಮತ್ತು ತೇನ್‌ಸಿಂಗ್ ನಾರ್ಗೆ, ಅದುವರೆವಿಗೂ ಅಜೇಯವಾಗಿದ್ದ ಜಗತ್ತಿನ ಅತಿ ಎತ್ತರದ ಎವರೆಸ್ಟ್ ಶಿಖರವನ್ನೇರಿದ ದಿನ. ಆಸಕ್ತ ಪರ್ವತಾರೋಹಿಗಳಿರುವ ಪ್ರಪಂಚದ ಎಲ್ಲ ದೇಶಗಳಲ್ಲೂ ಅದು ಸಂಭ್ರಮಾಚರಣೆಯ ಸಂದರ್ಭ.

ನೇಪಾಳದ ಲುಕ್ಲಾದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಎಡ್ಮಂಡ್ ಹಿಲರಿಯ ಮಗ ಪೀಟರ್ ಹಿಲರಿ ಮತ್ತು ತೇನ್‌ಸಿಂಗ್ ನಾರ್ಗೆಯ ಮಗ ಜಾಮ್ಲಿಂಗ್ ನಾರ್ಗೆ ಭಾಗವಹಿಸಿ, ತಮ್ಮ ಹಿರಿಯರ ಎವರೆಸ್ಟ್ ಶಿಖರಾರೋಹಣದ ರೋಚಕ ಕ್ಷಣಗಳನ್ನು ನೆನಪಿಸಿಕೊಂಡರು. ಏಳು ದಶಕಗಳಲ್ಲಿ ಎವರೆಸ್ಟ್ ಆರೋಹಣ ಸಾಹಸದಲ್ಲಿ ಆಗಿರುವ ಬದಲಾವಣೆಗಳು, ವಾಯುಗುಣ ಬದಲಾವಣೆ ತರುತ್ತಿರುವ ಸಮಸ್ಯೆಯಂತಹ ವಿಷಯಗಳೂ ಚರ್ಚೆಗೆ ಬಂದವು. ಆದರೆ ಇದುವರೆವಿಗೂ ಅಸಡ್ಡೆ, ಹಿಂಜರಿಕೆ, ಸಂಕೋಚದಿಂದ ಬಹಿರಂಗವಾಗಿ ಚರ್ಚೆಗೆ ಬರದಿದ್ದ ಪರ್ವತಾರೋಹಿಗಳ ಶೌಚಾಲಯ ತ್ಯಾಜ್ಯದ ವಿಷಮ ಸಮಸ್ಯೆ ಗಂಭೀರ ಅವಲೋಕನೆಗೆ ಬಂದದ್ದು ವಿಶೇಷ.

ಎವರೆಸ್ಟ್ ಶಿಖರವನ್ನೇರಲು ನೇಪಾಳ ಸರ್ಕಾರದ ಅನುಮತಿ ಅಗತ್ಯ. ಪ್ರತಿ ಪರ್ವತಾರೋಹಿಯೂ ಸುಮಾರು 11,000 ಅಮೆರಿಕನ್ ಡಾಲರ್ ಶುಲ್ಕ ನೀಡಿ ಪರವಾನಗಿ ಪಡೆಯಬೇಕು. ಇದರೊಂದಿಗೆ ಎಲ್ಲ ರೀತಿಯ ಸಿದ್ಧತೆಗಳಿಗೆ ಸುಮಾರು ಒಂದೂವರೆ ತಿಂಗಳ ಕಾಲ ರಾಜಧಾನಿ ಕಠ್ಮಂಡುವಿನಲ್ಲಿ ಇರಬೇಕು. ಇದೆಲ್ಲದಕ್ಕೆ ಪ್ರತಿ ವ್ಯಕ್ತಿಗೆ ಒಟ್ಟು ಸುಮಾರು 45,000 ಡಾಲರುಗಳು ಖರ್ಚಾಗುತ್ತವೆ. ಸರ್ಕಾರಕ್ಕೆ ಇದು ಬಹುಮುಖ್ಯ ಆದಾಯವಾದ್ದರಿಂದ ಪರವಾನಗಿಗಳನ್ನು ಧಾರಾಳವಾಗಿ ನೀಡಲಾಗುತ್ತದೆ.

ಎವರೆಸ್ಟ್ ಶಿಖರದ ಆರೋಹಣ ಪ್ರಾರಂಭವಾಗುವುದು 17,598 ಅಡಿ ಎತ್ತರದಲ್ಲಿರುವ ಖುಂಭು ಹಿಮಾನಿಯ ಸಮೀಪವಿರುವ ಬೇಸ್ ಕ್ಯಾಂಪ್‌ನಿಂದ. ಪ್ರತಿವರ್ಷ, ಏಪ್ರಿಲ್- ಜೂನ್ ನಡುವಿನ 'ಕ್ಲೈಂಬಿಂಗ್ ಸೀಸನ್'ನಲ್ಲಿ ಈ ಶಿಬಿರ ಪ್ರಪಂಚದ ವಿವಿಧ ಭಾಗಗಳ ಪರ್ವತಾರೋಹಿಗಳು ಮತ್ತು ಅವರ ಸಹಾಯಕರಿಂದ ತುಂಬಿಹೋಗುತ್ತದೆ. ಈ ಮೂರು ತಿಂಗಳ ಅವಧಿಗೆ ಟೆಂಟುಗಳ ಒಳಗೆ ತಾತ್ಕಾಲಿಕ ಶೌಚಾಲಯಗಳು ನಿರ್ಮಾಣವಾಗುತ್ತವೆ. ಅಲ್ಲಿ ಇಟ್ಟಿರುವ ನೀಲಿಯ ಡ್ರಮ್ಮುಗಳು ವಿಸರ್ಜಿಸಿದ ಮಲದಿಂದ ತುಂಬುತ್ತಿದ್ದಂತೆ ಅವುಗಳನ್ನು ಸಾಗರಮಾತಾ ರಾಷ್ಟ್ರೀಯ ಉದ್ಯಾನದೊಳಗಿರುವ ಗೋರಕ್ ಶೆಪ್ ಎಂಬ ಹಳ್ಳಿಗೆ ತಂದು, ಹೆಪ್ಪುಗಟ್ಟಿರುವ ಕೆರೆಯ ಅಂಗಳದಲ್ಲಿ ಸುರಿಯಲಾಗುತ್ತದೆ. ಪ್ರತಿವರ್ಷ ಮೂರು ತಿಂಗಳ ಅವಧಿಯಲ್ಲಿ ಬೇಸ್ ಕ್ಯಾಂಪ್‌ನಲ್ಲಿ ಉತ್ಪತ್ತಿಯಾಗುವ ಮಲದ ಪ್ರಮಾಣ ಸುಮಾರು 12,000 ಕಿ.ಗ್ರಾಂ ಅಥವಾ 12 ಟನ್‌ಗಳು.

ಇದೀಗ ಗೋರಕ್ ಶೆಪ್ ಕೆರೆಯ ಅಂಗಳದಲ್ಲೂ ಜಾಗವಿಲ್ಲದಂತಾಗಿ, ಈ ಹಳ್ಳಿಗಿಂತ ಕೆಳಗೆ ನದಿತೊರೆಗಳ ದಡದಲ್ಲಿ ಸಣ್ಣ ಗುಂಡಿಗಳನ್ನು ತೋಡಿ ಮಲವನ್ನು ಸುರಿಯಲಾಗುತ್ತಿದೆ. ಮಳೆ ಮತ್ತು ಬೇಸಿಗೆಯಲ್ಲಿ ಹಿಮ ಕರಗಿದಾಗ ಹರಿಯುವ ನೀರು, ಹೊಲಸನ್ನು ಕುಡಿಯುವ ನೀರಿನ ಆಗರಗಳಿಗೆ ಸೇರಿಸುತ್ತದೆ. ಬೇಸ್ ಕ್ಯಾಂಪ್‌ನಿಂದ ಮೇಲೇರಿ, ಪರ್ವತದ ಹವೆಗೆ ಹೊಂದಿಕೊಂಡು, ವಿವಿಧ ಶಿಬಿರಗಳಲ್ಲಿ ತಂಗಿ, ಹವಾಮಾನ ಅನುಕೂಲವಾದಾಗ ಶಿಖರದ ನೆತ್ತಿ ತಲುಪಲು ಸರಾಸರಿ 40 ದಿನಗಳು ಬೇಕೆಂಬ ಅಂದಾಜಿದೆ. ಬೇಸ್ ಕ್ಯಾಂಪ್ ಬಿಟ್ಟಮೇಲೆ ಬೇರೆಲ್ಲೂ ಶೌಚ ವ್ಯವಸ್ಥೆಯಿಲ್ಲ. ಹೀಗಾಗಿ ಅಲ್ಲಿಂದ ಮೇಲೇರುವ ಎಲ್ಲರೂ ಕಡ್ಡಾಯವಾಗಿ ಬೇಕಾದಷ್ಟು ಶೌಚಚೀಲಗಳನ್ನು ಕೊಂಡೊಯ್ಯಬೇಕು. ಬಳಸಿದ ಮೇಲೆ ಎಸೆಯದೇ ಬೇಸ್ ಕ್ಯಾಂಪ್‌ಗೆ ತರಬೇಕು. ಹೀಗೆ ಸರಾಸರಿ 40 ದಿವಸಗಳ ಸರಕನ್ನು ಹೊರುವುದು ರೇಜಿಗೆಯ ಕೆಲಸ. ಎಲ್ಲರೂ ಈ ಸೂಚನೆಯನ್ನು ಪಾಲಿಸುವುದಿಲ್ಲ. ಅಗತ್ಯ ಬಿದ್ದಾಗ ಹಿಮದಲ್ಲಿಯೇ ಗುಳಿ ತೋಡಿ, ಬಳಸಿದ ಬಳಿಕ ಅದನ್ನು ಹಿಮದಿಂದ ಮುಚ್ಚುತ್ತಾರೆ. ಇದು ಸಹ ಮುಂದೊಮ್ಮೆ ನದಿ, ತೊರೆಗಳನ್ನು ಸೇರುತ್ತದೆ.


ಎವರೆಸ್ಟ್ ಏರುವವರೆಲ್ಲರೂ 4,000 ಡಾಲರ್‌ಗಳ ಠೇವಣಿಯನ್ನಿಡಬೇಕು. ಅಲ್ಲಿಂದ ಕೆಳಗೆ ಇಳಿದುಬರುವಾಗ 8 ಕಿ.ಗ್ರಾಂ ತ್ಯಾಜ್ಯವನ್ನು ತರುವವರಿಗೆ 4,000 ಡಾಲರ್‌ಗಳ ಠೇವಣಿಯನ್ನು ಹಿಂದಿರುಗಿಸಲಾಗುತ್ತದೆ. ಈ ಸೂಚನೆಯನ್ನು ಬಹುತೇಕ ಪರ್ವತಾರೋಹಿಗಳು ಪಾಲಿಸಿದರೂ ಹೀಗೆ ತಂದ ವಸ್ತುಗಳಲ್ಲಿ ಮಲ ಇರುವುದಿಲ್ಲ. ಈ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ಸಂಘಟಿತ ಪ್ರಯತ್ನ ಪ್ರಾರಂಭವಾದದ್ದು 2010ರಲ್ಲಿ. ಅಮೆರಿಕದ ಪರ್ವತಾರೋಹಣ ಮಾರ್ಗದರ್ಶಕ ಡ್ಯಾನ್ ಮಜೂರ್ ಮತ್ತು ಎಂಜಿನಿಯರ್ಸ್ ವಿಥೌಟ್ ಬಾರ್ಡರ್ಸ್ ಸಂಸ್ಥೆಯ ಗ್ಯಾರಿ ಪೋರ್ಟರ್ ಅವರ ಆಸಕ್ತಿಯಿಂದ. ಅವರು ಯೋಚಿಸಿದ ಸರಳ ಪರಿಹಾರವೆಂದರೆ, ನೇಪಾಳದಲ್ಲಿ ಆ ವೇಳೆಗಾಗಲೇ ವ್ಯಾಪಕವಾಗಿ ಬಳಕೆಯಲ್ಲಿದ್ದ ಜೈವಿಕ ಅನಿಲ ಘಟಕಗಳನ್ನು ಬೇಸ್ ಕ್ಯಾಂಪ್‌ನಲ್ಲಿ ಸ್ಥಾಪಿಸಿ, ತ್ಯಾಜ್ಯದಿಂದ ಮೀಥೇನ್ ಅನಿಲವನ್ನು ಉತ್ಪಾದಿಸಿ ಸ್ಥಳೀಯ ಸಮುದಾಯಕ್ಕೆ ಇಂಧನವಾಗಿ ಒದಗಿಸುವುದು. ಆದರೆ ಈ ಯೋಜನೆಗೆ ಎದುರಾದ ಸಮಸ್ಯೆಗಳು ಹಲವಾರು.

ಬಳಕೆಯಲ್ಲಿರುವ ಜೈವಿಕ ಸ್ಥಾವರಗಳು ಕಡಿಮೆ ಎತ್ತರದ ಭೂ ಪ್ರದೇಶಗಳಲ್ಲಿ, 20ರಿಂದ 30 ಡಿಗ್ರಿ ತಾಪದಲ್ಲಿ ಎಲ್ಲ ರೀತಿಯ ಜೈವಿಕ ತ್ಯಾಜ್ಯವನ್ನೂ ಬಳಸಿ ಕೆಲಸ ಮಾಡುವಂತಹವು. ಮಜೂರ್ ಮತ್ತು ಗ್ಯಾರಿ ಯೋಜನೆಯ ಸ್ಥಾವರಗಳು ಶೂನ್ಯ ತಾಪದಲ್ಲಿ, ಮನುಷ್ಯ ತ್ಯಾಜ್ಯವನ್ನು ಮಾತ್ರ ಬಳಸಿ ಮೀಥೇನ್ ಉತ್ಪಾದಿಸಬೇಕಿತ್ತು. ಪರ್ವತಾರೋಹಿಗಳು ಆರೋಗ್ಯ ರಕ್ಷಣೆಗೆ ಬಹಳಷ್ಟು ಪ್ರಮಾಣದಲ್ಲಿ ಪ್ರತಿಜೈವಿಕಗಳನ್ನು ಬಳಸುವುದರಿಂದ ಅವರು ವಿಸರ್ಜಿಸಿದ ತ್ಯಾಜ್ಯದಲ್ಲಿನ ಪ್ರತಿಜೈವಿಕಗಳು, ವ್ಯರ್ಥವಸ್ತುವನ್ನು ವಿಘಟಿಸುವ ಬ್ಯಾಕ್ಟೀರಿಯಾಗಳ ಕಾರ್ಯಕ್ಷಮತೆಗೆ ತೊಂದರೆಯುಂಟುಮಾಡುತ್ತಿದ್ದವು. ಈ ಸಮಸ್ಯೆ ಪರಿಹರಿಸಲು ಕಠ್ಮಂಡು ವಿಶ್ವವಿದ್ಯಾಲಯ, ಅಮೆರಿಕದ ಸಿಯಾಟಲ್ ವಿಶ್ವವಿದ್ಯಾಲಯದ ಸಂಶೋಧಕರು ಕೈಜೋಡಿಸಿದರು. ಜೈವಿಕ ಸ್ಥಾವರದ ಮೂಲ ವಿನ್ಯಾಸ ಬದಲಿಸಿ, ಸ್ಥಾವರದಿಂದ ಹೊರಹೋಗುವ ಶಾಖವನ್ನು ಕನಿಷ್ಠ ಮಟ್ಟಕ್ಕೆ ಇಳಿಸಿದರು. ಸ್ಥಾವರದೊಳಗಿನ ತಾಪವನ್ನು 20-30 ಡಿಗ್ರಿ ಸೆಲ್ಸಿಯಸ್ ಮಟ್ಟದಲ್ಲಿ ಇರಿಸಿದರು. ಕಠ್ಮಂಡು ವಿಶ್ವವಿದ್ಯಾಲಯದ ಪ್ರಯೋಗಾಲಯದಲ್ಲಿ ಹೊಸ ವಿನ್ಯಾಸದ ಸ್ಥಾವರ ಯಶಸ್ವಿಯಾಗಿದೆ. ಈಗ ಎವರೆಸ್ಟ್ ಬೇಸ್ ಕ್ಯಾಂಪ್‌ನಲ್ಲಿ ಅದರ ನಿರ್ಮಾಣ ಪ್ರಾರಂಭವಾಗಬೇಕಿದೆ.


ಕಟ್ಟಡ ಸಾಮಗ್ರಿಗಳನ್ನು 17,500 ಅಡಿ ಎತ್ತರಕ್ಕೆ ಸಾಗಿಸಬೇಕಿರುವುದರಿಂದ ಜೈವಿಕ ಅನಿಲ ಸ್ಥಾವರದ ನಿರ್ಮಾಣ ಸಹಜವಾಗಿಯೇ ಬಹಳಷ್ಟು ದುಬಾರಿಯಾಗಲಿದೆ. ಮೂರು ತಿಂಗಳ ಕ್ಲೈಂಬಿಂಗ್ ಸೀಸನ್‌ನಲ್ಲಿ ಉತ್ಪತ್ತಿಯಾಗುವ 12,000 ಕಿಲೊಗ್ರಾಂಗಳಷ್ಟು ಮಾನವ ತ್ಯಾಜ್ಯವನ್ನು, ಜೈವಿಕ ಅನಿಲದ ಉತ್ಪಾದನೆಗೆ ಉಳಿದ ಒಂಬತ್ತು ತಿಂಗಳು ಬಳಸಬೇಕಿರುವುದರಿಂದ ಅದರ ಸಂಗ್ರಹಕ್ಕೆ ವಿಶೇಷ ವ್ಯವಸ್ಥೆ ಮಾಡಬೇಕಿದೆ. ಈ ಎಲ್ಲ ಪ್ರಯತ್ನಗಳ ಜೊತೆಗೆ ಬೇಸ್ ಕ್ಯಾಂಪ್ ದಾಟಿ ಮೇಲೇರುವ ಪರ್ವತಾರೋಹಿಗಳು ತಾವು ಬಳಸಿದ ಟಾಯ್ಲೆಟ್ ಬ್ಯಾಗ್‌ಗಳನ್ನು ಕಡ್ಡಾಯವಾಗಿ ಕೆಳಗೆ ತರುವಂತೆ ಮಾಡಬೇಕಿದೆ.

ಈ ಎಲ್ಲ ಸವಾಲುಗಳ ನಡುವೆಯೇ 2023ರ ಕ್ಲೈಂಬಿಂಗ್ ಸೀಸನ್ ಪ್ರಾರಂಭವಾಗಿದೆ. ಹಿಂದಿನ ಎಲ್ಲ ದಾಖಲೆಗಳನ್ನೂ ಮೀರಿಸುವಂತೆ 65 ದೇಶಗಳ 466 ಪರ್ವತಾರೋಹಿಗಳಿಗೆ ಎವರೆಸ್ಟ್ ಆರೋಹಣಕ್ಕೆ ಪರವಾನಗಿ ನೀಡಲಾಗಿದೆ. ಇವರೊಡನೆ ಕನಿಷ್ಠ 500 ಶೆರ್ಪಾ ಸಹಾಯಕರು, ಮಾರ್ಗದರ್ಶಕರು, ಪೋರ್ಟರುಗಳು ಇರುತ್ತಾರೆ. ಜೈವಿಕ ಅನಿಲ ಸ್ಥಾವರದ ನಿರ್ಮಾಣಕ್ಕೆ ಕನಿಷ್ಠ ಮತ್ತೊಂದು ವರ್ಷ ಕಾಯಬೇಕಾದ ಪರಿಸ್ಥಿತಿ ಇರುವುದರಿಂದ, ಈ ಪ್ರದೇಶದ ಪರಿಸರವನ್ನು ಸಂರಕ್ಷಿಸಲು ಶ್ರಮಿಸುತ್ತಿರುವ, ಶೆರ್ಪಾ ಸಮುದಾಯದ ಸಾಗರಮಾತಾ ಮಾಲಿನ್ಯ ನಿಯಂತ್ರಣ ಸಮಿತಿಯ ಸದಸ್ಯರು ಬೇಸ್ ಕ್ಯಾಂಪ್‌ನ ಎಲ್ಲ ಪರ್ವತಾರೋಹಿಗಳ ಮನವೊಲಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಎವರೆಸ್ಟ್ ಪ್ರದೇಶದ ಪರಿಸರವನ್ನು ಸಂರಕ್ಷಿಸಲು ರೂಪಿಸಿರುವ ನೀತಿ, ನಿಯಮಗಳನ್ನು ಪಾಲಿಸದ ಎಲ್ಲ ದೇಶಗಳ ಪರ್ವತಾರೋಹಿಗಳನ್ನು ಈ ಪ್ರದೇಶಕ್ಕೆ ಕಾಲಿಡದಂತೆ ಶಾಶ್ವತವಾಗಿ ನಿಷೇಧಿಸಬೇಕೆಂಬ ಆಗ್ರಹ ಹೆಚ್ಚುತ್ತಿದೆ. ಗೊರಕ್ ಶೆಪ್‌ನಿಂದ ಬೇಸ್‌ಕ್ಯಾಂಪ್‌ಗೆ ಏರುವ ಟ್ರೆಕಿಂಗ್ ದಾರಿಯನ್ನು ಧರ್ಮಗುರು ದಲೈಲಾಮಾ, 'ಸ್ವರ್ಗಕ್ಕೆ ಏರುವ ಸೋಪಾನ' ಎಂದಿದ್ದರು. ಆದರೆ ಈಗ ಈ ಸೋಪಾನವನ್ನು ಏರುವಾಗ ಬಲವಂತವಾಗಿ ಮೂಗು ಮುಚ್ಚಿಕೊಳ್ಳದೇ ವಿಧಿಯಿಲ್ಲ! ಈ ಪರಿಸ್ಥಿತಿಯನ್ನು ತಪ್ಪಿಸಲು ಎಲ್ಲ ಪರ್ವತಾರೋಹಿಗಳೂ ಪ್ರಾಮಾಣಿಕವಾಗಿ ಶ್ರಮಿಸಬೇಕೆಂದು ತೇನ್‌ಸಿಂಗ್ ನಾರ್ಗೆ ಮತ್ತು ಎಡ್ಮಂಡ್ ಹಿಲರಿಯವರ ಮಕ್ಕಳು ಎಲ್ಲ ಪರ್ವತಾರೋಹಿಗಳಿಗೆ ಮನವಿ ಮಾಡಿದ್ದಾರೆ.



ಚುರುಮುರಿ



ಸಿದ್ದುಪಡಿ

• ಲಿಂಗರಾಜು ಡಿ.ಎಸ್.

'ಸಾ, ಸೆಂಟ್ರಲ್ ಗೌರ್ಮೆಂಟು ರೈಸಲ್ಲಿ ಎತ್ತಿನಹಾಲು ಮಾಡ್ತದಂತೆ. ಅದಕ್ಕೇ ಪುಸಕಟ್ಟೆ ಅಕ್ಕಿ ಕೊಡಕುಲ್ಲ ಅಂದದೆ!' ಅಂತಂದ ಚಂದ್ರು.

'ಅದು ಎತ್ತಿನಹಾಲಲ್ಲ ಕಪ್ಪಾ, ಅಕ್ಕಿ ಬೇಯ್ಸಿ ಗಂಜಿ ಥರಾ ಮಾಡಿದ್ರೆ ಅದು ಎಥೆನಾಲ್ ಆಯ್ತದಂತೆ. ಅದ ತಕ್ಕೋಗಿ ಪೆಟ್ರೋಲಿಗೆ ಮಿಕ್ಸು ಮಾಡಾರಂತೆ. ಅದುಕ್ಕೇ 'ಅಕ್ಕಿ ನಮಗೇ ಸಾಲಕುಲ್ಲ, ಇನ್ನು ನಿಮಗೆಲ್ಲಿ ಕೊಡನೇ ಅಂದಿರದು. ಅಕ್ಕಿ ನಮ್ಮದು ಹೆಸರು ಅವರುದ್ದು ಅಂತ ಕಮಲಕ್ಕನ ಕಡೇವ್ರು ಆಡಿಕ್ಯತಾವ್ರೆ' ಅಂತು ಯಂಟಪ್ಪಣ್ಣ.

'ಎಲೆಕ್ಷನ್ನಿಗೆ ಮೊದಲು 'ಎಲ್ಲಾರಿಗೂ ಹತ್ತತ್ತು ಕಿಲೊ ಅಕ್ಕಿ ಪಡಿ ಅಳೆಯದೇಯ, ಹೆಣ್ಮಕ್ಳು ತಿಂಗಳಾ ಎಡು ಸಾವಿರ ಬಾಗಿನವ ಪುಸ್ಕಟ್ಟೆ ಬಸ್ಸಲ್ಲಿ ಬಂದು ಇಸ್ಕೋಗಿ' ಅಂದುತ್ತಲ್ಲ ಹುಲಿಯಾ! ಈಗ ಕೊಟ್ಟ ಮಾತಿಗೆ ತಪ್ಪಿದರೆ ಸರೀಕರು ಏನಂದಾರು?' ಅಂತಂದೆ.

'ವೊಡಿರ್ಲಾ ಕಪಾಳಕಾ, ನಮ್ಮ ಹುಲಿಯಾ ಸತ್ಯವಾಕ್ಯಕ್ಕೆ ಯಾವತ್ತೂ ತಪ್ಪಿ ನಡೆಯಕುಲ್ಲ. ಇದೇ ನನ್ನ ಕೊನೇ ಎಲೆಕ್ಷನ್ ಅಂತ ನಾಕು ಸತಿಂದ ಹೇಳ್ತಿಲ್ವಾ?' ಅಂದ್ರು ತುರೇಮಣೆ.

'ಅಕ್ಕಿ ಕೊಡಿ ಅಂತ ಅಕ್ಕಪಕ್ಕದೋರ್ನ ಕೇಳಿದ್ರೂವೆ ಎಲ್ಲಾರೂ 'ಅಯ್ಯೋ ನಮ್ತಾವೆಲ್ಲದೆ ಅಕ್ಕಿ' ಅಂತ ತಾರಮ್ಮಯ್ಯ ಆಡಿಸ್ಯವ್ರೆ. ಕಮಲದ ಕಲಿಗಳೂ ತುಂಬ್ತಿರೋ ಕಸ ಎತ್ತಕ್ಕೆ ಕಸರತ್ತೇ ಆಗ್ಯದೆ' ಅಂತಂದೆ.

'ಈಗ ಹುಲಿಯಾ ಆಡಿದ ಮಾತಿಗೆ ತಿದ್ದುಪಡಿ ಮಾಡ್ಕಬಕು ಅಷ್ಟೇ' ಅಂತು ಯಂಟಪ್ಪಣ್ಣ.

'ಸುಮಾರು ತಿದ್ದುಪಡಿ ಆಗ್ಯವೆ. ಪುಸ್ಕಟ್ಟೆ ಕರೆಂಟು ರೇಟು ಆಕಾಸ ಮುಟ್ಟದೆ. ಹುಲಿಯಾ 'ಊರುಮ್ಯಾಲೆ ಊರುಬಿದ್ದರೂ ಅಕ್ಕಿಪಡಿ ಅಳೆಯದೇಯ' ಅಂದದೆ. ಕುಮಾರಣ್ಣ, ಬಸಣ್ಣ, ರವಿಯಣ್ಣ ವರಿ ಮಾಡಿಕ್ಯಂಡು ಕುಂತವ್ರೆ, ಮುಂದ್ಕೆಂಗೆ?' ಅಂದ ಚಂದ್ರು.

'ಜನವೂ ಕೆಲಸ ಬುಟ್ಟು ಅಕ್ಕಿಗೆ ಕಾಯ್ತಾ ಕುಂತವ್ರೆ ಕನ್ರೋ. ಈಗ ಸಿದ್ದುಪಡಿ ಮಾಡಿ ಹುಗ್ಗೇದನ್ನ ಹಾಕಲೇಬೇಕು!' ಅಂತ ತುರೇಮಣೆ ಮೂಗೇಟು ಕೊಟ್ಟರು.

ಸಂಗತ

ಸಂಕುಚಿತ ಸಂಕಥನ ದಾಟಿಸುವ ಅಪಾಯ

ಆಧುನಿಕ ಸಂವಹನ ಸಾಧನಗಳು ಸಂಕುಚಿತ ರಾಷ್ಟ್ರೀಯತೆಯ ಸಂಕಥನಗಳನ್ನು ಯುವ ಮನಸ್ಸುಗಳಿಗೆ ವ್ಯವಸ್ಥಿತವಾಗಿ ದಾಟಿಸುತ್ತಿರುವುದು ಅಪಾಯಕಾರಿ ಸ್ಥಿತಿ

• ಡಾ. ಕಿರಣ್ ಎಂ. ಗಾಜನೂರು

ಇದು ಆರು ತಿಂಗಳ ಹಿಂದಿನ ಪ್ರಕರಣ. ನಾನು, ನನ್ನ ಮಡದಿ ರಾತ್ರಿ 8.45ಕ್ಕೆ ಬೆಂಗಳೂರಿನ ಯಶವಂತಪುರದಲ್ಲಿ ಹಾಸನ, ಸೊಲ್ಲಾಪುರ ರೈಲು ಹತ್ತಿದೆವು. ನಮ್ಮ ಸ್ಲೀಪರ್ ಕೋಚಿನಲ್ಲಿ ಯಾರೋ ಒಬ್ಬರು ಅಸಭ್ಯ ಭಾಷೆ ಬಳಸುತ್ತಾ ವಿಪರೀತ ಗಲಾಟೆ ಮಾಡುತ್ತಿದ್ದುದು ಕೇಳಿಸಿತು. ವ್ಯಕ್ತಿಯೊಬ್ಬ ತನ್ನ ಮಡದಿ ಮತ್ತು ಮಗನೊಂದಿಗೆ ರೈಲು ಹತ್ತಿದ್ದ. ವೇಷಭೂಷಣ ನೋಡಿದರೆ ಕೆಳ ಮಧ್ಯಮ ವರ್ಗದ ಕುಟುಂಬದಂತೆ ತೋರುತ್ತಿತ್ತು. ಆತ ವಿಪರೀತ ಕುಡಿದಂತೆ ಕಾಣುತ್ತಿದ್ದ ಮತ್ತು ಮಡದಿಯನ್ನು ಹಿಗ್ಗಾಮುಗ್ಗ ಬೈಯ್ಯುತ್ತಿದ್ದ. ಆ ತಾಯಿ ಅವನನ್ನು ಸುಧಾರಿಸಲು ಏನೆಲ್ಲಾ ಪ್ರಯತ್ನ ಮಾಡಿದರೂ ಆತ ಸುಮ್ಮನಾಗುತ್ತಿರಲಿಲ್ಲ.

8-10 ವರ್ಷದ ಮಗನನ್ನು ಹೊಡೆಯಲು ಆರಂಭಿಸಿದ. ಅಡ್ಡಬಂದ ಹೆಂಡತಿಯನ್ನು ಬಡಿಯತೊಡಗಿದ. ಒಂದಿಬ್ಬರು ಬುದ್ಧಿ ಹೇಳಿದರೂ ಅವನು ಕೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅಷ್ಟರಲ್ಲಿ ಸಮಯ ಮಧ್ಯರಾತ್ರಿಯ ಮೂರು ಗಂಟೆ ಆಗಿತ್ತು ಅನ್ನಿಸುತ್ತದೆ. ಅಷ್ಟೊತ್ತಿಗೆ ನನ್ನ ಸಹೋದ್ಯೋಗಿಯ ಕರೆಯೊಂದು ಬಂತು. ಆತನೂ ಬಿಹಾರದಿಂದ ಕಲಬುರಗಿಗೆ ಕುಟುಂಬದ ಜೊತೆ ಬರುತ್ತಿದ್ದ. ಅವರ ರೈಲು ಬೇಗ ಕಲಬುರಗಿ ತಲುಪುತ್ತಿದ್ದ ಕಾರಣಕ್ಕೆ, ಕ್ಯಾಂಪಸ್‌ಗೆ ಹೋಗಲು ವ್ಯವಸ್ಥೆ ಏನಿದೆ ಎಂದು ಕೇಳಿದ. ನಾನು ಆತನಿಗೆ ಟ್ಯಾಕ್ಸಿ ನಂಬರ್ ಕೊಟ್ಟು, ಇವರನ್ನು ಸಂಪರ್ಕಿಸಿ ಎಂದು ಹೇಳಿ ಕರೆ ಕಟ್ ಮಾಡಿದೆ. ನಾವು ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುವುದರಿಂದ ಬಹುತೇಕ ಸಹೋದ್ಯೋಗಿಗಳು ಹಿಂದಿಯಲ್ಲೇ ಮಾತನಾಡುತ್ತಾರೆ. ಹೀಗಾಗಿ, ನಮ್ಮ ಸಂಭಾಷಣೆ ಹಿಂದಿಯಲ್ಲಿ ನಡೆದಿತ್ತು.

ಅದನ್ನು ಕೇಳಿಸಿಕೊಂಡ ಈ ವ್ಯಕ್ತಿ ಇದ್ದಕ್ಕಿದ್ದಂತೆ ಜೋರಾಗಿ 'ಇಲ್ಲೊಬ್ಬ ಪಾಕಿಸ್ತಾನಿ ಇದ್ದಾನೆ, ಅವನು ಈಗಷ್ಟೇ ಭಯೋತ್ಪಾದಕರ ಜೊತೆ ಮಾತನಾಡಿದ್ದು ನಾನು ಕೇಳಿಸಿಕೊಂಡೆ, ಆತ ಉರ್ದುವಿನಲ್ಲಿ ಮಾತನಾಡಿದ, ಪೊಲೀಸರನ್ನು ಕರೆಯಿರಿ, ಅವನನ್ನು ಹಿಡಿಯಬೇಕು' ಎಂದು ನನ್ನ ಮುಂದೆ ಅರಚಿ, ರೈಲಿನಲ್ಲಿ ಇದ್ದ ಎಲ್ಲರನ್ನೂ ಎಬ್ಬಿಸತೊಡಗಿದ. ಯಾರ್‍ಯಾರಿಗೋ ಫೋನ್ ಮಾಡಿ ಹೇಳುತ್ತಿದ್ದ. ಆತ ಎಷ್ಟು ಗಂಭೀರ ಆರೋಪ ಮಾಡುತ್ತಿದ್ದ ಅಂದರೆ, ಅರೆಕ್ಷಣ ಏನಾಗುತ್ತಿದೆ ಎಂದೇ ನನಗೆ ಅರ್ಥವಾಗಲಿಲ್ಲ. ನನ್ನ ಮಡದಿಯೂ ಆತಂಕಕ್ಕೆ ಒಳಗಾಗಿದ್ದಳು. ನಮ್ಮ ಪುಣ್ಯ, ರೈಲು ಹೊರಟಾಗಿನಿಂದ ಆತನ ಮಾತುಗಳನ್ನು ಕೇಳುತ್ತಿದ್ದ ಜನರ ತಾಳ್ಮೆಯ ಕಟ್ಟೆ ಒಡೆದಿತ್ತು. ಎಲ್ಲರೂ ಎದ್ದು ಆತನಿಗೆ 'ಸುಮ್ಮನೆ ಕೂರದಿದ್ದರೆ ನಿನ್ನನ್ನು ಇಲ್ಲಿಯೇ ಇಳಿಸುತ್ತೇವೆ' ಎಂದು ಜೋರಾಗಿ ಗದರಿದಾಗ ಸುಮ್ಮನಾಗಿ ಒಂದು ಕಡೆ ಕುಳಿತು, ಪಾಕಿಸ್ತಾನ, ಭಯೋತ್ಪಾದಕ ಎಂದೆಲ್ಲ ಗೊಣಗುತ್ತಲೇ ಇದ್ದ. ಆತನ ಮಡದಿ 'ಅಣ್ಣೋವ್ರೆ ಬೇಜಾರಾಗಬೇಡಿ, ಕುಡಿದರೆ ಆತ ಮನುಷ್ಯನೇ ಅಲ್ಲ' ಎಂದು ಜನರ ಕ್ಷಮೆ ಕೇಳುತ್ತಿದ್ದಳು.

ಈ ಪ್ರಕರಣ ನನ್ನನ್ನು ಆಘಾತಕ್ಕೆ ಒಳಗುಮಾಡಿತ್ತು. ಒಂದು ವೇಳೆ ಆತ ಕುಡಿಯದೇ, ರಾತ್ರಿಪೂರ್ತಿ ಗಲಾಟೆ ಮಾಡದೇ ಇದ್ದಕ್ಕಿದ್ದಂತೆ ಸಹಪ್ರಯಾಣಿಕರ ಮೇಲೆ ಹೀಗೆ ಆರೋಪ ಮಾಡಿದ್ದರೆ, ಪ್ರಯಾಣಿಕರಲ್ಲಿ ಕೆಲವರು ಆತನ ಮನಃಸ್ಥಿತಿಯವರೇ ಆಗಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತು ಎಂದು ಯೋಚಿಸಿ ನಡುಗಿಹೋದೆ. ತನ್ನ ಸಂಸಾರವನ್ನು ನೆಟ್ಟಗೆ ಪೋಷಿಸಲಾಗದ ವ್ಯಕ್ತಿಯೊಬ್ಬ ಇದ್ದಕ್ಕಿದ್ದಂತೆ ರಾಷ್ಟ್ರೀಯವಾದಿ, ದೇಶಭಕ್ತ ಆಗಿಬಿಡುವ ಈ ವಿಚಿತ್ರ ಸನ್ನಿವೇಶ ನನ್ನನ್ನು ಇನ್ನೂ ಆತಂಕಕ್ಕೆ ದೂಡಿತ್ತು.

ನಾವೊಂದು ದ್ವಂದ್ವದ ಕಾಲದಲ್ಲಿ ನಿಂತಿದ್ದೇವೆ. ಪ್ರಜಾತಾಂತ್ರಿಕ ಸಂಬಂಧಗಳನ್ನು ಜನರ ನಡುವೆ ಕಟ್ಟಬೇಕು ಎಂಬ ಆಶಯವನ್ನು ಹೊತ್ತ ಸಂವಿಧಾನ ಒಂದು ಕಡೆ ಇದ್ದರೆ, ಮತ್ತೊಂದು ಕಡೆ, ಬರೀ ರಾಜಕೀಯ ಅಧಿಕಾರದ ಕಾರಣಕ್ಕೆ ಹುಸಿ ರಾಷ್ಟ್ರೀಯವಾದದ ಹೆಸರಿನಲ್ಲಿ ಕಟ್ಟಲಾಗುತ್ತಿರುವ ಸಂಕುಚಿತ ರಾಜಕೀಯ ನಿರೂಪಣೆಗಳಿವೆ. ಈ ಸಂಕುಚಿತ ರಾಷ್ಟ್ರೀಯತೆಯ ಸಂಕಥನಗಳನ್ನು ವ್ಯವಸ್ಥಿತವಾಗಿ ಯುವ ಮನಸ್ಸುಗಳಿಗೆ ದಾಟಿಸುತ್ತಿರುವ ದೃಶ್ಯ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣದಂತಹ ಆಧುನಿಕ ಸಂವಹನ ಸಾಧನಗಳು ತಳಮಟ್ಟದ ಜನರನ್ನು ಎಷ್ಟು ಅಪಾಯಕಾರಿ ಮನಃಸ್ಥಿತಿಗೆ ದೂಡಬಲ್ಲವು ಎಂಬುದನ್ನು ಈ ಪ್ರಕರಣ ನನಗೆ ಮನವರಿಕೆ ಮಾಡಿಕೊಟ್ಟಿತ್ತು.



ಯಾವುದೇ ಸ್ವರೂಪದ ಮೂಲಭೂತವಾದ ಮೊದಲು ಕಲ್ಪಿತ ಶತ್ರುವೊಂದನ್ನು ಸೃಷ್ಟಿಸಿಕೊಳ್ಳುತ್ತದೆ. ಆ ಶತ್ರುವಿನ ಭಯ ತೋರಿಸುವ ಮೂಲಕ ತಾನು ನಡೆಸುವ ಹಿಂಸೆಗೆ ಜನರ ಒಪ್ಪಿಗೆಯನ್ನು ಉತ್ಪಾದಿಸಿಕೊಳ್ಳುತ್ತಿರುತ್ತದೆ. ಅದು ಮೊನ್ನೆ ಬೆಂಗಳೂರಿನಲ್ಲಿ ಭಾಷೆಯ ಹೆಸರಿನಲ್ಲಿ ಹೋಟೆಲೊಂದರ ಅರೇಬಿಕ್ ಶ್ಲೋಕದ ಮೇಲೆ ಕನ್ನಡಸೇನೆಯ ಕಾರ್ಯಕರ್ತ ನಡೆಸಿದ ದಾಳಿ ಇರಬಹುದು ಅಥವಾ ಕೆಲವೇ ದಿನಗಳ ಹಿಂದೆ ನಮ್ಮ ನಡುವೆ ಘಟಿಸಿದ ಹಿಜಾಬ್, ಹಲಾಲ್, ಬುರ್ಖಾ, ಜಟ್ಕಾ ಕಟ್‌ನಂತಹ ಅಭಿಯಾನಗಳನ್ನು ಬೆಂಬಲಿಸಿದ ಮನಸ್ಸುಗಳು ಇರಬಹುದು. ಇಂಥ ಕೆಲವರ ಮನಃಸ್ಥಿತಿಗೂ ರೈಲಿನಲ್ಲಿ ಪಾಕಿಸ್ತಾನ, ಭಯೋತ್ಪಾದಕ ಎಂದು ಅರಚಿದ ಆ ವ್ಯಕ್ತಿಯ ಮನಃಸ್ಥಿತಿಗೂ ಹೆಚ್ಚಿನ ವ್ಯತ್ಯಾಸ ಇರಲಾರದು. ಆದರೆ ಸ್ವರೂಪದಲ್ಲಿ ಮಾತ್ರ ಭಿನ್ನತೆಯಿದೆ ಅನ್ನಿಸುತ್ತಿದೆ.

ಈ ಸ್ಥಿತಿಯನ್ನು ಬದಲಾಯಿಸುವ ಕಡೆ ನಮ್ಮ ಆಡಳಿತ ವ್ಯವಸ್ಥೆ ಗಂಭೀರ ಪ್ರಯತ್ನವನ್ನು ಮಾಡಬೇಕಿದೆ. ಬಹಳ ಮುಖ್ಯವಾಗಿ, ಸಂವಿಧಾನ ಬಯಸಿದ ಜಾತ್ಯತೀತ ಸಮಾಜದ ಪರಿಕಲ್ಪನೆಯನ್ನು ಶಿಕ್ಷಣದ ಮೂಲಕ ಮಕ್ಕಳಲ್ಲಿ ಮೂಡಿಸುವ, 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಪ್ರಜ್ಞೆಯೇ ನಮ್ಮ ಸಾಮಾಜಿಕ ಮೌಲ್ಯ ಎಂಬ ಅರಿವನ್ನು ಯುವಜನರಿಗೆ ದಾಟಿಸುವ ಕಡೆ ನಾವು ಯೋಚಿಸಬೇಕಿದೆ. ಸಂವಿಧಾನದ ಪೂರ್ವ ಪೀಠಿಕೆಯನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಓದಿಸುವ ಯೋಜನೆ ಈ ದಿಕ್ಕಿನಲ್ಲಿನ ಆರಂಭಿಕ ಹೆಜ್ಜೆಯೇ ಹೌದು.

ವಾಚಕರ ವಾಣಿ

ಗ್ರಂಥಾಲಯದ ಹಣ ಎಲ್ಲಿ ಹೋಯಿತು?

'ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯಿತಿ ವ್ಯಾಪ್ತಿಯ 5,600 ಗ್ರಂಥಾಲಯಗಳನ್ನು ಮೇಲ್ದರ್ಜೆಗೆ ಏರಿಸಿದೆ' ಎಂದು ಸುಧೀಶ್ ವೆಂಕಟೇಶ್ ಅವರು ಗ್ರಂಥಾಲಯದ ಮಹತ್ವ ಕುರಿತ ಲೇಖನದಲ್ಲಿ ಬರೆದಿರುವುದನ್ನು (ಪ್ರ.ವಾ., ಜೂನ್ 19) ನೋಡಿ ಒಂದೆಡೆ ಖುಷಿಯಾಯಿತು. ಮತ್ತೊಂದು ಕಾರಣಕ್ಕೆ ಬೇಸರವಾಯಿತು. ನನ್ನದು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಪುಟ್ಟ ಗ್ರಾಮ ಯರಗುಪ್ಪಿ. ನನ್ನೂರಲ್ಲಿ 3 ಕನ್ನಡ ಶಾಲೆಗಳು, 1 ಉರ್ದು ಶಾಲೆ, ನಾಲ್ಕಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿವೆ. ಸುತ್ತಮುತ್ತಲಿನ 2 ಗ್ರಾಮಗಳ ಮಕ್ಕಳು ನಮ್ಮ ಗ್ರಾಮದ ಶಾಲೆಗಳಿಗೆ ಬರುತ್ತಾರೆ. ಇನ್ನು ಗ್ರಂಥಾಲಯದ ವಿಷಯಕ್ಕೆ ಬಂದರೆ, ಸುಮಾರು ವರ್ಷಗಳಿಂದ ಇಲ್ಲಿ ಗ್ರಂಥಾಲಯ ಸೌಲಭ್ಯ ಮರೀಚಿಕೆಯಾಗಿದೆ. ಹಾಗಾದರೆ ಗ್ರಂಥಾಲಯಕ್ಕೆ ಬರುವ ಸರ್ಕಾರದ ಹಣ ಎಲ್ಲಿ ಹೋಯಿತು? ಅಥವಾ ಸರ್ಕಾರದಿಂದ ನನ್ನ ಗ್ರಾಮದ ಗ್ರಂಥಾಲಯಕ್ಕೆ ಹಣವೇ ಬಂದಿಲ್ಲವೇ?

ಗ್ರಾಮದಲ್ಲಿ 'ಮನೆಯ ಪಟ್ಟಿ' ಹೆಸರಿನಲ್ಲಿ ತುಂಬಿಸಿಕೊಳ್ಳುವ ಹಣದಲ್ಲಿ ಗ್ರಂಥಾಲಯಕ್ಕೆ ಇಷ್ಟು ಎಂದು ನಿಗದಿಯಾಗಿರುತ್ತದೆ. ಆ ಹಣ ಏನಾಗುತ್ತಿದೆ? ಸ್ಥಳೀಯ ಮಟ್ಟದಲ್ಲಿ ಈ ಸಮಸ್ಯೆ ಬಗೆಹರಿಯುವಂತೆ ಕಾಣುತ್ತಿಲ್ಲ. ಶಾಸಕರು ಇತ್ತ ಗಮನಹರಿಸಿ, ಗ್ರಾಮದಲ್ಲಿ ಅತ್ಯಾಧುನಿಕ ಗ್ರಂಥಾಲಯ ನಿರ್ಮಿಸಿಕೊಡಲಿ.

ಬಸನಗೌಡ ಪಾಟೀಲ, ಯರಗುಪ್ಪಿ

ಅಕ್ಕಿ ಕಡಿತಗೊಳಿಸಿದ್ದು ನೆನಪಿಲ್ಲವೇ?

'ಅನ್ನಭಾಗ್ಯ ಯೋಜನೆಯಡಿ ಸರ್ಕಾರ ನೀಡಲು ಉದ್ದೇಶಿಸಿರುವ ಅಕ್ಕಿಯಲ್ಲಿ ಒಂದು ಗ್ರಾಂ ಅಕ್ಕಿ ಕಡಿಮೆಯಾದರೂ ಜನ ಸುಮ್ಮನಿರುವುದಿಲ್ಲ' ಎಂದು ಹೇಳುವ ಮೂಲಕ (ಪ್ರ.ವಾ., ಜೂನ್ 19) ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಅವರು ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಮಾಡಲು ಹೊರಟಂತೆ ಕಾಣುತ್ತದೆ. ಈ ಹಿಂದೆ ನೀಡುತ್ತಿದ್ದ 7 ಕೆ.ಜಿ. ಅಕ್ಕಿಯನ್ನು 5 ಕೆ.ಜಿಗೆ ಇಳಿಸಿದ್ದು, ಬಳಿಕ ಅದನ್ನು 3 ಹಾಗೂ ಮೂರೂವರೆ ಕೆ.ಜಿಗೆ ಇಳಿಸಿದ್ದು ಹಿಂದೆ ಸರ್ಕಾರದ ಚುಕ್ಕಾಣಿ ಹಿಡಿದಿದ್ದ ಬಸವರಾಜ ಬೊಮ್ಮಾಯಿ ಅವರಿಗಾಗಲೀ ಅಥವಾ ಯಡಿಯೂರಪ್ಪ ಅವರಿಗಾಗಲೀ ಗೊತ್ತೋ ಇಲ್ಲವೋ ಕಾಣೆ.

ವಿರೋಧ ಪಕ್ಷ ಅಂದಾಕ್ಷಣ ಪ್ರತಿಯೊಂದಕ್ಕೂ ವಿರೋಧ ಒಡ್ಡುವುದು ಸರಿಯಲ್ಲ. ಆಡಳಿತ ವಿರೋಧಿ ಅಲೆಯಿಂದ ಕಂಗೆಟ್ಟ ನೀವು ನಿಮ್ಮ ಹೇಳಿಕೆಗಳು, ಧೋರಣೆಗಳನ್ನು ಜನರ ಮೇಲೆ ಹಾಕುತ್ತಾ ಸಮಾಜದ ದಾರಿ ತಪ್ಪಿಸುವ ಕೆಲಸ ಮಾಡಬಾರದು. ಮೂರೂವರೆ ಕೆ.ಜಿ. ಅಕ್ಕಿಯನ್ನೇ ಕಣ್ಣಿಗೊತ್ತಿಕೊಂಡ ಜನ ಈಗ ಹತ್ತು ಕೆ.ಜಿ. ಅಕ್ಕಿಗೆ ನಿರೀಕ್ಷೆ ಇಟ್ಟುಕೊಂಡಿರುವುದು ಸ್ವಾಭಾವಿಕವೇ. ಆದರೆ ಅಕ್ಕಿಯ ವಿಚಾರದಲ್ಲಿ ಜನಸಾಮಾನ್ಯನ ಅಳತೆಗೋಲು ಮುಖ್ಯವೇ ವಿನಾ ರಾಜಕಾರಣಿಗಳ ಉದ್ದೇಶಪೂರ್ವಕ ಧೋರಣೆಗಳಲ್ಲ.

ಅಶ್ವತ್ಥ ಕಲ್ಲೇದೇವರಹಳ್ಳಿ, ಕುಂಕಾನಾಡು, ಕಡೂರು

ಸರಿಯಿಲ್ಲ ಅಂತಲ್ಲವೇ...?

ವಿದ್ಯುತ್ ದರ ಏರಿಕೆ
ಹಿಂದಿನವರದು ಅಂತ
ಇಂದಿನವರು ಅಂದಿರುವುದು
ಸುತರಾಂ ಸರಿಯಿಲ್ಲ,
ಅವರು ಸರಿಯಿಲ್ಲ ಅಂತಲ್ಲವೇ
ನಿಮ್ಮನ್ನು ಅಧಿಕಾರಕ್ಕೆ
ತಂದಿರುವುದು.

ಮಲ್ಲಿಕಾರ್ಜುನ, ಸುರಧೇನುಪುರ

ಪುರುಷರಿಗೆ ಸೀಟು ಮೀಸಲು ಕಡ್ಡಾಯಗೊಳ್ಳಲಿ

ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಟ್ಟಿರುವುದು ಸ್ವಾಗತಾರ್ಹ. ಇದರಿಂದ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆ ಹೆಚ್ಚಿ ನೂಕುನುಗ್ಗಲು ಸರ್ವೇಸಾಮಾನ್ಯವಾಗಿದೆ. ಹೀಗಾಗಿ, ತುರ್ತು ಹಾಗೂ ಅಗತ್ಯ ಕಾರ್ಯಗಳ ನಿಮಿತ್ತ ಪ್ರಯಾಣಿಸುವವರಿಗೆ ತುಸು ಅಡಚಣೆ ಉಂಟಾಗುತ್ತಿದೆ. ಕೆಲವು ಬಸ್‌ಗಳಲ್ಲಿ ಹಿರಿಯ ನಾಗರಿಕರಿಗೆ ಮೀಸಲಾದ ಆಸನಗಳನ್ನೂ ಮಹಿಳೆಯರೇ ಆಕ್ರಮಿಸಿಕೊಳ್ಳುವುದರಿಂದ ವಯಸ್ಸಾದವರು ಪ್ರಯಾಣಿಸಲು ಕಷ್ಟಕರವಾಗಿದೆ. ಜೊತೆಗೆ ಕಚೇರಿ, ಆಸ್ಪತ್ರೆ, ತುರ್ತು ಕಾರ್ಯದ ನಿಮಿತ್ತ ದೂರದ ಸ್ಥಳಗಳಿಗೆ ಸಂಚರಿಸಬೇಕಾದ ಪುರುಷರು ಆಸನಗಳಿಲ್ಲದೆ ನಿಂತು ಪ್ರಯಾಣಿಸಬೇಕಾಗಿದೆ. ಸರ್ಕಾರ ಯೋಜನೆ ಜಾರಿಗೆ ತರುವ ಸಂದರ್ಭದಲ್ಲಿ ಹೇಳಿದಂತೆ ಶೇ 50ರಷ್ಟು ಸೀಟುಗಳನ್ನು ಕಡ್ಡಾಯವಾಗಿ ಪುರುಷರಿಗೆ ಮೀಸಲಿಡಬೇಕು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ರಾಜ್ಯ ಸರ್ಕಾರಗಳ ಹಿತದಲ್ಲೇ ಕೇಂದ್ರದ ಹಿತ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಅನ್ನಭಾಗ್ಯ ಯೋಜನೆಗೆ, ಕೇಂದ್ರದ ಉಗ್ರಾಣದಿಂದ ಕಡಿಮೆ ದರದಲ್ಲಿ ಪೂರೈಕೆಯಾಗುವ ಅಕ್ಕಿಗೆ ತಡೆ ಬಿದ್ದಿದೆ. ರಾಜಕೀಯ ಏನೇ ಇರಲಿ, ಕೇಂದ್ರವು ಮೊದಲಿನಿಂದಲೂ ಸಹಕಾರಿ ತತ್ವದ ಬಗ್ಗೆ ಮಾತನಾಡುತ್ತಲೇ ಬಂದಿದೆ. 'ಅನ್ನ ದೇವರಿಗಿಂತ ಇನ್ನು ದೇವರು ಉಂಟೇ' ಎಂಬಂತೆ, ಇದು ಹಸಿದ ಹೊಟ್ಟೆಗಳನ್ನು ತಣಿಸುವ ಒಂದು ಯೋಜನೆ. ಹೀಗಾಗಿ ಇದನ್ನು ಸಮರ್ಪಕವಾಗಿ ಕಾರ್ಯಗತವಾಗುವಂತೆ ನಿರ್ವಹಿಸುವುದರಲ್ಲಿಯೇ ಕೇಂದ್ರದ ಹಿತವೂ ಅಡಗಿದೆ. ಇನ್ನೂ ಕೆಲವು ರಾಜ್ಯಗಳ ಚುನಾವಣೆ ಈ ವರ್ಷ ಬಾಕಿ ಇದೆ ಹಾಗೂ ಮುಂಬರುವ ಲೋಕಸಭಾ ಚುನಾವಣೆಯ ದೃಷ್ಟಿಯಿಂದ ರಾಜ್ಯ ಸರ್ಕಾರಗಳ ಹಿತದಲ್ಲಿಯೇ ತನ್ನ ಹಿತವೂ ಇದೆ ಎಂದು ಸಹಕರಿಸುವುದು ಒಳ್ಳೆಯದು.

ಅಂತರ್ಗಾಮಿಯಾಗಿರುವ ಆಡಳಿತ ವಿರೋಧಿ ಅಲೆಯನ್ನು ಸರಿಯಾಗಿ ಅಂದಾಜಿಸಲಾಗದೆ ಕರ್ನಾಟಕ ಚುನಾವಣೆಯಲ್ಲಿ ಬಿಜೆಪಿ ಹೀನಾಯ ಸೋಲನ್ನು ಕಂಡಿದೆ. ಹಿಂದಿನ ಐದು ವರ್ಷಗಳ ಅವಧಿಯಲ್ಲಿ ದೇಶವು ಬಹಳಷ್ಟು ಸವಾಲುಗಳನ್ನು ಎದುರಿಸಿದೆ. ಕೋವಿಡ್, ನೆರೆ, ಅತಿವೃಷ್ಟಿ, ರೈತರ ಪ್ರತಿಭಟನೆ, ನಿರುದ್ಯೋಗ, ಹಣದುಬ್ಬರ ಇವೆಲ್ಲವೂ ಚುನಾವಣೆಯಲ್ಲಿ ಗುಪ್ತಗಾಮಿನಿಯಾಗಿ ಕೆಲಸ ಮಾಡುವಂಥವು. ಜನರಿಗೆ ಬಹಳಷ್ಟು ಅನನುಕೂಲ ಆಗುವ ಸಂಗತಿಗಳ ಬಗ್ಗೆ ಮಾತನಾಡದಿದ್ದ ಮಾತ್ರಕ್ಕೆ ಅವು ಸಂಪೂರ್ಣ ಪರಿಹಾರವಾಗಿವೆ ಎಂದೇನೂ ಅಲ್ಲ. ಹೀಗಾಗಿ, ರಾಜ್ಯ ಸರ್ಕಾರಗಳು ಜನರ ಹಿತಕ್ಕಾಗಿ ಮಾಡುವಂಥ ಯೋಜನೆಗಳ ಜೊತೆಗೆ ಕೇಂದ್ರವು ಕೈ ಜೋಡಿಸುವುದರಲ್ಲಿಯೇ ಹೆಚ್ಚು ಅರ್ಥವಿದೆ ಎನಿಸುತ್ತದೆ.

ಎ.ವಿ.ಮುರಳೀಧರ ಆಚಾರ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು

ಗುತ್ತಿಗೆಗೆ ಆದ್ಯತೆ, ದಲಿತರ ನೌಕರಿಗೆ ಕತ್ತರಿ

• ಜಯಸಿಂಹ ಆರ್., ಸುಕೃತ ಎಸ್.

ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳ ಅಧೀನದಲ್ಲಿ ಇರುವ ಉದ್ದಿಮೆ ಸಂಸ್ಥೆಗಳಲ್ಲಿ ಎಂಟು ವರ್ಷಗಳಲ್ಲಿ 2.28 ಲಕ್ಷದಷ್ಟು ಉದ್ಯೋಗವನ್ನು ಕಡಿತ ಮಾಡಲಾಗಿದೆ. ಆದರೆ, ಹೀಗೆ ಉದ್ಯೋಗ ಕಳೆದುಕೊಂಡವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಜನರ ಸಂಖ್ಯೆಯೇ ಹೆಚ್ಚು ಎಂಬ ಮಾಹಿತಿಯು ಸರ್ಕಾರಿ ಉದ್ದಿಮೆ ಸಂಸ್ಥೆಗಳ ಸಮೀಕ್ಷಾ ವರದಿಗಳಲ್ಲಿ ಇದೆ.

2013–14ನೇ ಆರ್ಥಿಕ ಸಾಲಿನ ಅಂತ್ಯದ ವೇಳೆಗೆ ದೇಶದಲ್ಲಿದ್ದ ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ನೌಕರರ ಸಂಖ್ಯೆ 5.60 ಲಕ್ಷದಷ್ಟಿತ್ತು. ಅದೇ ವರ್ಷದ ಮೇನಲ್ಲಿ ಬಿಜೆಪಿ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ರಚನೆಯಾಗಿತ್ತು ಮತ್ತು ನರೇಂದ್ರ ಮೋದಿ ಅವರು ಪ್ರಧಾನಿಯಾದರು. ಮೋದಿ ಅವರ ನೇತೃತ್ವದ ಬಿಜೆಪಿ ಅಧಿಕಾರಕ್ಕೆ ಬಂದ ನಂತರದ ಪ್ರತಿ ವರ್ಷವೂ ಈ ಜಾತಿ ಸಮುದಾಯಗಳು ಮತ್ತು ವರ್ಗಗಳ ನೌಕರರ ಸಂಖ್ಯೆ ಇಳಿಕೆಯಾಗುತ್ತಲೇ ಬಂದಿದೆ. 2021–22ರ ಆರ್ಥಿಕ ವರ್ಷದ ಮಾರ್ಚ್ ಅಂತ್ಯದ ವೇಳೆಗೆ ಈ ನೌಕರರ ಸಂಖ್ಯೆ 4.20 ಲಕ್ಷಕ್ಕೆ ಇಳಿಕೆಯಾಗಿದೆ. ಈ ಅವಧಿಯಲ್ಲಿ ಈ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ನೌಕರರ ಸಂಖ್ಯೆಯಲ್ಲಿ 1.39 ಲಕ್ಷದಷ್ಟು ಕಡಿಮೆಯಾಗಿದೆ.

ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿ ಗುತ್ತಿಗೆ ನೌಕರರ ನೇಮಕಾತಿಗೆ ಆದ್ಯತೆ ನೀಡುತ್ತಿರುವುದೇ ಇದಕ್ಕೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ. ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಾಗ, ಅಂತಹ ಹುದ್ದೆಗಳಿಗೆ ಮೀಸಲಾತಿ ಅನ್ವಯವಾಗುವುದಿಲ್ಲ. ಈ ಅವಧಿಯಲ್ಲಿ ಸರ್ಕಾರದ ಉದ್ದಿಮೆ ಸಂಸ್ಥೆಗಳಲ್ಲಿ ಗುತ್ತಿಗೆ ನೌಕರರ ಸಂಖ್ಯೆ ದುಪ್ಪಟ್ಟಾಗಿದೆ. ಆ ಎಲ್ಲಾ ಹುದ್ದೆಗಳಿಗೆ ಮೀಸಲಾತಿ ಅನ್ವಯವಾಗದೇ ಇರುವ ಕಾರಣ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಜನರಿಗೆ ಇಲ್ಲಿ ಉದ್ಯೋಗದಲ್ಲಿ ಮೀಸಲಾತಿ ದೊರೆಯುತ್ತಿಲ್ಲ. ಹೀಗಾಗಿ ಅವರಿಗೆ ಈ ಸಂಸ್ಥೆಗಳಲ್ಲಿ ಕೆಲಸವೂ ಸಿಗುತ್ತಿಲ್ಲ. ಪರಿಣಾಮವಾಗಿ ಈ ಸಂಸ್ಥೆಗಳಲ್ಲಿ ತಳ ಸಮುದಾಯಗಳ ಪ್ರಾತಿನಿಧ್ಯ ಕಡಿಮೆಯಾಗುತ್ತಾ ಬಂದಿದೆ.

ಈ ಮೂರೂ ಜಾತಿ ಸಮುದಾಯಗಳಲ್ಲಿ ಅತಿಹೆಚ್ಚು ಉದ್ಯೋಗ ಕಳೆದುಕೊಂಡದ್ದು ಪರಿಶಿಷ್ಟ ಜಾತಿಗಳು. 2013–14ರಲ್ಲಿ ಈ ಸರ್ಕಾರಿ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿಗಳ ನೌಕರರ ಸಂಖ್ಯೆ 2.38 ಲಕ್ಷದಷ್ಟಿತ್ತು. 2021–22ರ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಪರಿಶಿಷ್ಟ ಜಾತಿಗಳ ನೌಕರರ ಸಂಖ್ಯೆ 1.45 ಲಕ್ಷಕ್ಕೆ ಕುಸಿದಿದೆ. ಈ ಅವಧಿಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ನೌಕರರ ಸಂಖ್ಯೆಯಲ್ಲಿ 93,065ರಷ್ಟು ಇಳಿಕೆಯಾಗಿದೆ. ಪರಿಶಿಷ್ಟ ಪಂಗಡಗಳಿಗೆ ಸೇರಿದ ನೌಕರರ ಸಂಖ್ಯೆಯಲ್ಲಿ 29,988ರಷ್ಟು ಇಳಿಕೆಯಾಗಿದೆ. ಇತರೆ ಹಿಂದುಳಿದ ವರ್ಗಗಳ ನೌಕರರ ಸಂಖ್ಯೆಯಲ್ಲಿ 16,314ರಷ್ಟು ಇಳಿಕೆಯಾಗಿದೆ.


ಸರ್ಕಾರ ಬಿಡುಗಡೆ ಮಾಡಿರುವ ವರದಿಯಲ್ಲಿ 2022ರ ಮಾರ್ಚ್‌ವರೆಗಿನ (2021–22ನೇ ಆರ್ಥಿಕ ವರ್ಷದ ಅಂತ್ಯ) ಮಾಹಿತಿ ಮಾತ್ರ ಲಭ್ಯವಿದೆ. 2022–23ನೇ ಆರ್ಥಿಕ ವರ್ಷದ ವರದಿ ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ವರದಿ ಬಿಡುಗಡೆಯಾದರೆ, ಆ ಒಂದು ವರ್ಷದಲ್ಲಿ ಈ ಸಮುದಾಯಗಳ ನೌಕರರ ಸಂಖ್ಯೆ ಇನ್ನೆಷ್ಟು ಕಡಿತವಾಗಿದೆ ಎಂಬುದರ ಮಾಹಿತಿ ದೊರೆಯಲಿದೆ.

5.60 ಲಕ್ಷ 2013–14ನೇ ಸಾಲಿನ ಅಂತ್ಯದ ವೇಳೆಗೆ ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿ ಇದ್ದ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗಗಳ ನೌಕರರ ಸಂಖ್ಯೆ

4.20 ಲಕ್ಷ 2021–22ನೇ ಸಾಲಿನ ಅಂತ್ಯದ ವೇಳೆಗೆ ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿ ಇದ್ದ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗಗಳ ನೌಕರರ ಸಂಖ್ಯೆ


1.40 ಲಕ್ಷ ಎಂಟು ವರ್ಷಗಳ ಅವಧಿಯಲ್ಲಿ ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿ ಪರಿಶಿಷ್ಟರು ಮತ್ತು ಹಿಂದುಳಿದ ವರ್ಗಗಳು ಕಳೆದುಕೊಂಡ ನೌಕರಿಗಳ ಸಂಖ್ಯೆ

ಪರಿಶಿಷ್ಟರು, ಹಿಂದುಳಿದ ನೌಕರರ ಸಂಖ್ಯೆಯಲ್ಲಿ ಇಳಿಕೆ



ಇಳಿಯುತ್ತಲೇ ಇದೆ ನೌಕರಿಗಳ ಸಂಖ್ಯೆ


ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿ 2.28 ಲಕ್ಷ ಉದ್ಯೋಗವು ಕಡಿತಗೊಂಡಿದೆ. ಈ ಸಂಸ್ಥೆಗಳಲ್ಲಿ 2013–14ರಲ್ಲಿ 16.90 ಲಕ್ಷದಷ್ಟಿದ್ದ ಉದ್ಯೋಗವು 2021–22ರಲ್ಲಿ 14.62 ಲಕ್ಷಕ್ಕೆ ಇಳಿಕೆಯಾಗಿದೆ. 2014ರಲ್ಲಿ ನಡೆದ ಲೋಕಸಭಾ ಚುನಾವಣೆಯ ಪ್ರಚಾರ ಸಭೆಗಳಲ್ಲಿ ನರೇಂದ್ರ ಮೋದಿ ಅವರು ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುವುದಾಗಿ ಭರವಸೆ ನೀಡಿ, ಅಧಿಕಾರ ಹಿಡಿದ್ದರು. ಆದರೆ, 2014ರಿಂದ ಈಚೆಗೆ ಸರ್ಕಾರಿ ಉದ್ದಿಮೆ ಸಂಸ್ಥೆಗಳಲ್ಲಿನ ಉದ್ಯೋಗವು ಕಡಿಮೆ ಆಗುತ್ತಲೇ ಬಂದಿದೆ.



2013–14ನೇ ಸಾಲಿನಲ್ಲಿ ದೇಶದಲ್ಲಿದ್ದ ಸರ್ಕಾರಿ ಉದ್ದಿಮೆಗಳ ಸಂಖ್ಯೆ 235. ಈಗ ಅವುಗಳ ಸಂಖ್ಯೆ 389ಕ್ಕೆ ಏರಿಕೆಯಾಗಿದೆ. ಆದರೆ, ಇವುಗಳಲ್ಲಿ 248 ಉದ್ದಿಮೆ ಸಂಸ್ಥೆಗಳು ಮಾತ್ರವೇ ಕಾರ್ಯನಿರ್ವಹಿಸುತ್ತಿವೆ. 2021–22ರ ವರದಿಯಲ್ಲಿಯೇ ಹೇಳಿರುವಂತೆ ಸರ್ಕಾರಿ ಉದ್ದಿಮೆ ಸಂಸ್ಥೆಗಳು ಹಿಂದಿನ ಆರ್ಥಿಕ ವರ್ಷಗಳಿಗಿಂದ ಈ ಆರ್ಥಿಕ ವರ್ಷದಲ್ಲಿ ಉತ್ತಮ ಸಾಧನೆಯನ್ನೇ ತೋರಿವೆ. ಸರ್ಕಾರಿ ಉದ್ದಿಮೆಗಳ ಸಂಖ್ಯೆ ಏರಿಕೆಯಾಗಿದ್ದು ಈ ಸಂಸ್ಥೆಗಳು ಉತ್ತಮ ಸಾಧನೆ ತೋರುತ್ತಿದ್ದರೂ ಉದ್ಯೋಗ ಸೃಷ್ಟಿಸುವಲ್ಲಿ ವಿಫಲವಾಗಿವೆ.

ಅತಿಯಾದ ಖಾಸಗೀಕರಣ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಖಾಸಗಿ ಸಂಸ್ಥೆಗಳ ಪರ ಎಂದು ವಿರೋಧ ಪಕ್ಷಗಳು ಮೊದಲಿನಿಂದಲೂ ಆರೋಪಿಸುತ್ತಾ ಬಂದಿವೆ. ಅಂತೆಯೇ, ಸರ್ಕಾರಿ ಉದ್ದಿಮೆ ಸಂಸ್ಥೆಗಳ ನೌಕರರು ಕೂಡ 2018ರ ಜನವರಿಯಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಈ ಆರೋಪಗಳಿಗೆ ಪುಷ್ಟಿ ನೀಡುವಂತೆ, ಸರ್ಕಾರಿ ಉದ್ದಿಮೆಸಂಸ್ಥೆಗಳಲ್ಲಿ ದೊಡ್ಡ ಮಟ್ಟದ ಉದ್ಯೋಗ ಸೃಷ್ಟಿ ಸಾಧ್ಯವಾಗುತ್ತಿದ್ದ, ಎಂಟಿಎನ್‌ಎಲ್, ಎಸ್‌ಇಸಿಎಲ್ ಎಫ್‌ಸಿಐ, ಒಎನ್‌ಜಿಸಿ, ಬಿಎಸ್‌ಎನ್‌ಎಲ್ ಸಂಸ್ಥೆಗಳಲ್ಲಿ ಭಾರಿ ಪ್ರಮಾಣ ಉದ್ಯೋಗ ಕಡಿತ ಮಾಡಲಾಯಿತು. ಬಿಎಸ್‌ಎನ್‌ಎಲ್‌ಗೆ ಉತ್ತೇಜನ ನೀಡಬೇಕಿದ್ದ ಕೇಂದ್ರವು ಖಾಸಗಿ ದೂರಸಂಪರ್ಕ ಸಂಸ್ಥೆಗೆ ಉತ್ತೇಜನ ನೀಡಿತು ಎಂಬ ದೂರುಗಳನ್ನು ವಿರೋಧ ಪಕ್ಷಗಳು ಮಾಡುತ್ತಾ ಬಂದಿವೆ. ಆದ್ದರಿಂದ ಸರ್ಕಾರದ ಇಂಥ ನೀತಿಗಳ ಕಾರಣಕ್ಕಾಗಿ ಉದ್ಯೋಗ ನಷ್ಟವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈಚೆಗೆ ದೂರಿದ್ದಾರೆ.

ಗುತ್ತಿಗೆ ನೌಕರರ ಸಂಖ್ಯೆ ಭಾರಿ ಏರಿಕೆ



ವರದಿಯಲ್ಲಿ ಗಮನಿಸಬೇಕಾಗ ಮತ್ತೊಂದು ಅಂಶವೊಂದಿದೆ. ಈ ಉದ್ದಿಮೆ ಸಂಸ್ಥೆಗಳಲ್ಲಿ 2013ರಿಂದ ಈಚೆಗೆ ಗುತ್ತಿಗೆ ನೌಕರರ ನೌಕರರ ಸಂಖ್ಯೆಯಲ್ಲಿ ಏರಿಕೆ ಕಂಡುಬಂದಿದೆ. 2013–14ರಲ್ಲಿ 3.08 ಲಕ್ಷ ಇದ್ದ ಗುತ್ತಿಗೆ ನೌಕರರು 2021–22ರಲ್ಲಿ 5.24 ಲಕ್ಷದಷ್ಟಾಗಿದ್ದಾರೆ. 2017–18ರಲ್ಲಿ 3.38 ಲಕ್ಷದಷ್ಟಿದ್ದ ಗುತ್ತಿಗೆ ನೌಕರರ ಸಂಖ್ಯೆ 2018–19 ಆರ್ಥಿಕ ವರ್ಷದಲ್ಲೇ 4.50 ಲಕ್ಷಕ್ಕೆ ಏರಿಕೆಯಾಗಿದೆ. ಗುತ್ತಿಗೆ ಆಧಾರದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ನೀಡುತ್ತಿರುವ ಖಾಸಗಿ ಸಂಸ್ಥೆಗಳ ಪ್ರವೃತ್ತಿಯನ್ನೇ ಕೇಂದ್ರ ಸರ್ಕಾರವು ಪಾಲಿಸಿದಂತೆ ತೋರುತ್ತಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

ಪ್ರಜಾವಾಣಿ ಗ್ರಾಫಿಕ್ಸ್: ಹಳೇಮನಿ



12 ವರ್ಷ... 'ಸಪ್ತ ಸಾಗರ...'

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಎರಡು ಭಾಗಗಳಲ್ಲಿ ತೆರೆಕಾಣಲಿದೆ ಎಂದು ನಿರ್ದೇಶಕ ಹೇಮಂತ್ ಎಂ.ರಾವ್ ಈ ಹಿಂದೆಯೇ ತಿಳಿಸಿದ್ದರು. ಇದೀಗ ಎರಡೂ ಭಾಗಗಳ ರಿಲೀಸ್ ದಿನಾಂಕ ಘೋಷಣೆಯಾಗಿದೆ.

ರಕ್ಷಿತ್ ಶೆಟ್ಟಿ ನಟನೆಯ ಈ ಸಿನಿಮಾ 'ಸೈಡ್–A' ಹಾಗೂ 'ಸೈಡ್–B' ಎಂಬ ಅಡಿಬರಹದಡಿ ಬಿಡುಗಡೆಯಾಗುತ್ತಿದ್ದು, 'ಸೈಡ್–A' ಇದೇ ಸೆ.1ರಂದು ತೆರೆಕಾಣಲಿದೆ. ಇದಾಗಿ 50 ದಿನಗಳಲ್ಲೇ ಎಂದರೆ ಅ.20ರಂದು 'ಸೈಡ್–B' ಬಿಡುಗಡೆಯಾಗಲಿದೆ. ಚಿತ್ರದಲ್ಲಿ 'ಮನು' ಎಂಬ ಪಾತ್ರವನ್ನು ರಕ್ಷಿತ್ ಶೆಟ್ಟಿ ಅವರು ನಿಭಾಯಿಸಿದ್ದು, ಅವರಿಗೆ ಎರಡು ಶೇಡ್ಸ್ ಇವೆ. ದಶಕದ ಹಿಂದೆ ನಡೆಯುವ ಒಂದು ತೀವ್ರವಾದ ಪ್ರೇಮಕಥೆಯನ್ನು ಈ ಸಿನಿಮಾ ಹೊಂದಿದೆ. 'ಸೈಡ್–A'ಯಲ್ಲಿ 'ಮನು'ವಿನ ಪ್ರೀತಿಯ ಆರಂಭಿಕ ಹೆಜ್ಜೆಗಳನ್ನು ಹಿಡಿದಿಟ್ಟಿರುವಂತಿದೆ. 'ಸೈಡ್–B'ಯಲ್ಲಿ 'ಮನು'ವಿನ ಇನ್ನೊಂದು ಮುಖ ಅನಾವರಣಗೊಂಡಿದೆ. ಚಿತ್ರದಲ್ಲಿ ನಟಿ ರುಕ್ಮಿಣಿ ವಸಂತ್ 'ಪ್ರಿಯಾ' ಎಂಬ ಪಾತ್ರದ ಮೂಲಕ ಹಾಗೂ 'ಸುರಭಿ' ಎಂಬ ಪಾತ್ರದ ಮೂಲಕ ನಟಿ ಚೈತ್ರಾ ಆಚಾರ್, ರಕ್ಷಿತ್‌ಗೆ ಜೋಡಿಯಾಗಿದ್ದಾರೆ.

'ಕವಲುದಾರಿ' ನಂತರ ಹೇಮಂತ್ ರಾವ್ ನಿರ್ದೇಶಿಸಿರುವ ಚಿತ್ರ ಇದಾಗಿದೆ. 'ಈ ಸಿನಿಮಾದ ಕಥೆಯನ್ನು ನಾನು 12 ವರ್ಷಗಳ ಹಿಂದೆಯೇ ಬರೆದಿದ್ದೆ. ಹೃದಯಕ್ಕೆ ಬಹಳ ಸನಿಹದಲ್ಲಿರುವ ಸಿನಿಮಾವಿದು. ಅಲ್ಲಿಂದಿತ್ತೀಚೆಗೆ ಈ ಕಥೆ ವಿಕಸನಗೊಂಡಿದೆ. ಇದೀಗ ಈ ಕಥೆಯನ್ನು ನಿಮ್ಮ ಮುಂದೆ ಹೇಳುವ ಸಮಯ ಬಂದಿದೆ' ಎಂದಿದ್ದಾರೆ ಹೇಮಂತ್. ಸಿನಿಮಾದಲ್ಲಿ ಎರಡು ಶೇಡ್ಸ್‌ನಲ್ಲಿ ರಕ್ಷಿತ್ ಕಾಣಿಸಿಕೊಳ್ಳಬೇಕಿದ್ದ ಕಾರಣ 137 ದಿನಗಳ ಸುದೀರ್ಘ ಚಿತ್ರೀಕರಣ ನಡೆದಿತ್ತು. ಪರಂವಃ ಪಿಕ್ಚರ್ಸ್‌ನಡಿ ನಿರ್ಮಾಣವಾಗಿರುವ ಈ ಚಿತ್ರಗಳನ್ನು ಕೆ.ವಿ.ಎನ್. ಪ್ರೊಡಕ್ಷನ್ಸ್ ಬಿಡುಗಡೆ ಮಾಡುತ್ತಿದೆ. ಅವಿನಾಶ್, ಶರತ್ ಲೋಹಿತಾಶ್ವ, ಅಚ್ಯುತ್ ಕುಮಾರ್, ಪವಿತ್ರಾ ಲೋಕೇಶ್, ಗೋಪಾಲಕೃಷ್ಣ ದೇಶಪಾಂಡೆ, ರಮೇಶ್ ಇಂದಿರಾ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚರಣ್ ರಾಜ್ ಸಂಗೀತ ಮತ್ತು ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ. ❖

ಮತ್ತೆ 'ಪ್ರೀಮಿಯರ್ ಪದ್ಮಿನಿ' ಹತ್ತಿ...

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟು, 'ಉಡಾಳ್ ಬಾಬು ರಾವ್' ಆಗಿ ಮಿಂಚಿದ ನಟ ಪ್ರಮೋದ್ ಇದೀಗ ಮತ್ತೆ 'ಪ್ರೀಮಿಯರ್ ಪದ್ಮಿನಿ' ಏರಲು ಸಜ್ಜಾಗಿದ್ದಾರೆ.

'ಪ್ರೀಮಿಯರ್ ಪದ್ಮಿನಿ' ಸಿನಿಮಾ ನಿರ್ಮಾಣ ಮಾಡಿದ್ದ ನಿರ್ದೇಶಕಿ ಶ್ರುತಿ ನಾಯ್ಡು ಅವರ ಹೊಸ ಚಿತ್ರ ಸೆಟ್ಟೇರಿದ್ದು, ಇದರಲ್ಲಿ ಪ್ರಮೋದ್ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ.

ಶ್ರುತಿ ನಾಯ್ಡು ಅವರ ಧಾರಾವಾಹಿಯಲ್ಲಿ ಪ್ರಮೋದ್ ನಟಿಸಿದ್ದರು. ಇಲ್ಲಿನ ಅವರ ನಟನೆಯನ್ನೇ ನೋಡಿ ಶ್ರುತಿ ಅವರು 'ಪ್ರೀಮಿಯರ್ ಪದ್ಮಿನಿ'ಯಲ್ಲಿ ಪ್ರಮೋದ್‌ಗೆ ಅವಕಾಶ ನೀಡಿದ್ದರು. ಜಗ್ಗೇಶ್ ಅವರೊಂದಿಗೆ ಪ್ರಮೋದ್ ಅವರಿಲ್ಲಿ ತೆರೆಹಂಚಿಕೊಂಡಿದ್ದರು. ಆ ಚಿತ್ರದಲ್ಲಿನ ಪಾತ್ರ ಸ್ಯಾಂಡಲ್‌ವುಡ್‌ನಲ್ಲಿ ಪ್ರಮೋದ್ ಅವರನ್ನು ಗುರುತಿಸಿತ್ತು. ಇದಾದ ಬಳಿಕ ಪ್ರಮೋದ್ ಅವರಿಗೆ ಸಿನಿಮಾಗಳ ಆಫರ್‌ಗಳ ಸಂಖ್ಯೆ ಏರಿಕೆಯಾಗಿತ್ತು.


ಪ್ರಮೋದ್

ಇದೀಗ ಮತ್ತೊಮ್ಮೆ ಶ್ರುತಿ ಅವರ ತಂಡ ಸೇರಿಕೊಂಡಿದ್ದಾರೆ ಪ್ರಮೋದ್. ಹೊಸ ಚಿತ್ರದ ಕಥೆಯೊಂದಿಗೆ ಚಿತ್ರತಂಡ ಮೈಸೂರಿನ ಚಾಮುಂಡೇಶ್ವರಿಯ ದರ್ಶನ ಪಡೆದಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಅತ್ಯಾಚಾರ ಹಾಗೂ ಮತಾಂತರದ ಬೆದರಿಕೆ ಒಡ್ಡಿದ ಆರು ಮುಸ್ಲಿಂ ಯುವಕರನ್ನು ದಲಿತ ಮಹಿಳೆಯೊಬ್ಬರು ಹತ್ಯೆ ಮಾಡಿದ್ದಾರೆ. ಇದು ವಾರಾಣಸಿಯ ಹಿಮಂತ್‌ಪುರ ಗ್ರಾಮದಲ್ಲಿ ನಡೆದಿದೆ. ಘಟನೆ ಬಳಿಕ ಮಹಿಳೆ ಕಾಣೆಯಾಗಿದ್ದಾರೆ. ಮುಸ್ಲಿಂ ಯುವಕರ ಬೆದರಿಕೆ ಕುರಿತು ದೂರು ನೀಡಿದರೆ, ಪೊಲೀಸರು ಮುಸ್ಲಿಮರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು 'ಯುಪಿ ತಕ್' ಮಾಡಿರುವ ವರದಿ ಎನ್ನಲಾಗುವ ವರದಿಯ ಚಿತ್ರವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಕೆಲವರು ಮಹಿಳೆಯ ಕೃತ್ಯವನ್ನು ಸಮರ್ಥಿಸಿಕೊಂಡಿದ್ದು, ಇದು ನಾರಿ ಶಕ್ತಿ ಎಂದು ಬರೆದುಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಈ ಸುದ್ದಿಯು ಸುಳ್ಳು ಎಂದು ವಾರಾಣಸಿಯ ಡಿಸಿಪಿ ಟ್ವೀಟ್ ಮಾಡಿದ್ದಾರೆ. ಇಂಥ ಯಾವುದೇ ಘಟನೆ ಈ ಪ್ರದೇಶದಲ್ಲಿ ನಡೆದೇ ಇಲ್ಲ ಎಂದು ಹೇಳಿದ್ದಾರೆ. ಜೊತೆಗೆ, 'ಯುಪಿ ತಕ್' ಸುದ್ದಿ ಸಂಸ್ಥೆ ಕೂಡ ಈ ವರದಿಯನ್ನು ಅಲ್ಲಗಳೆದಿದೆ. ಈ ಬಗ್ಗೆ ಟ್ವೀಟ್ ಮಾಡಿರುವ ಸಂಸ್ಥೆ 'ಈ ರೀತಿಯ ವರದಿಯನ್ನು ನಾವು ಮಾಡಿಲ್ಲ, ಇದೊಂದು ಸುಳ್ಳು ಸೃಷ್ಟಿ' ಎಂದಿದೆ. ಪತ್ರಿಕೆಯೊಂದರ ವರದಿಯಂತೆ ಕಾಣುವಂತೆ ಪೋಸ್ಟರ್ ಸೃಷ್ಟಿಸಲಾಗಿದೆ. ಅದರಲ್ಲಿ ಬಳಸಿರುವ ಫೋಟೊಗಳು ಅಲಹಾಬಾದ್ ದೇವಸ್ಥಾನವೊಂದರ ಫೋಟೊ ಹಾಗೂ ಇನ್ನೆಲ್ಲೊ ನಿಂತಿರುವ ಪೊಲೀಸರ ಫೋಟೊಗಳು ಸೇರಿಸಿ ವರದಿಯಲ್ಲಿ ಹಾಕಿರುವ ಫೋಟೊವನ್ನು ಸಿದ್ಧಪಡಿಸಲಾಗಿದೆ ಎಂಬುದಾಗಿ ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಜಗವನಾಳುವ ಜಾಣ

ಮಗುವಾಗಿ ಬೊಂಬೆಗೆಂದತ್ತು ಪಿರಿಯರ ಕಾಡಿ |
ಜಗದುಣಿಸುಗಳನುಂಡು ಬೆಳೆದವಂ ತಾನೆ ||
ಮಗುಗಳನು ಬೆಳೆಸುತ್ತ
ಮನೆಯನಾಳುವವೋಲು |
ಜಗವನಾಳ್ವನು ಜಾಣ – ಮಂಕುತಿಮ್ಮ || 909 ||

ಪದ-ಅರ್ಥ: ಬೊಂಬೆಗೆಂದತ್ತು = ಬೊಂಬೆಗೆ + ಎಂದು + ಅತ್ತು, ಪಿರಿಯರ = ಹಿರಿಯರ. ಜಗದುಣಿಸುಗಳನುಂಡು = ಜಗದ + ಉಣಿಸುಗಳನು + ಉಂಡು, ಬೆಳೆದವಂ = ಬೆಳೆದವನು, ಮನೆಯನಾಳುವವೋಲು = ಮನೆಯನು + ಆಳುವ + ಓಲು, ಜಗವನಾಳ್ವನು = ಜಗವನು + ಆಳ್ವನು.

ವಾಚ್ಯಾರ್ಥ: ಮಗುವಾಗಿದ್ದಾಗ ಬೊಂಬೆಗೆ ಎಂದು ಹಟ ಮಾಡಿ, ಅತ್ತು, ಹಿರಿಯರನ್ನು ಕಾಡಿ, ಜಗತ್ತಿನ ತಿನಿಸುಗಳನ್ನು ತಿಂದು ಬೆಳೆದವನು ನೀನು. ಈಗ ಮಕ್ಕಳನ್ನು ಬೆಳೆಸುತ್ತ ಮನೆಯನ್ನು ಆಳುವವನಂತೆ ಜಗತ್ತನ್ನು ಆಳುವವನು ಜಾಣ.

ವಿವರಣೆ: ಈ ಕಗ್ಗ ಮತ್ತೆ ಈಶಾವಾಸ್ಯ ಉಪನಿಷತ್ತಿನ ಮೊದಲನೆಯ ಮಂತ್ರಕ್ಕೆ ವಿಶೇಷ ವಿವರಣೆ ನೀಡುವಂತಿದೆ. ಕಗ್ಗ, ನಮ್ಮ ಮುಂದೆ ಒಂದು ಸುಂದರವಾದ ದೃಷ್ಟಾಂತವನ್ನು ತರುತ್ತದೆ. ಪುಟ್ಟ ಮಗು ಬೊಂಬೆ ಬೇಕು ಎಂದು ಹಟ ಹಿಡಿದು ಅಳುತ್ತದೆ. ಅದು ದೊರೆಯುವವರೆಗೂ ಹಿರಿಯರನ್ನು ಕಾಡಿ ಬೇಡುತ್ತದೆ. ಆಗ ಜವಾಬ್ದಾರಿ ಏನಾದರೂ ಇತ್ತೇ? ಒಂದು ಪರಿವಾರ ಪ್ರವಾಸಕ್ಕೆ ಹೊರಟಿದೆ ಎಂದಿಟ್ಟುಕೊಳ್ಳಿ. ಮಕ್ಕಳಿಗೆ ಏನಾದರೂ ಚಿಂತೆ ಉಂಟೆ? ರೈಲಿನ ಟಿಕೆಟ್ ಆಯಿತೇ? ಹೋಗುವ ಸ್ಥಳದಲ್ಲಿ ಹೊಟೆಲ್ಲು ಅಥವಾ ಉಳಿದುಕೊಳ್ಳುವ ವ್ಯವಸ್ಥೆಯಾಗಿದೆಯೇ? ಊಟ, ತಿಂಡಿ ಎಲ್ಲಿ? ಯಾವ ಯಾವ ಸ್ಥಳಗಳನ್ನು ನೋಡಬೇಕು? ಇದಾವುದರ ವಿಚಾರವೂ ಮಕ್ಕಳಿಗೆ ಇಲ್ಲ. ಯಾಕೆಂದರೆ ಹಿರಿಯರಿದ್ದಾರಲ್ಲ, ಅವರು ಎಲ್ಲವನ್ನು ನೋಡಿಕೊಳ್ಳುತ್ತಾರೆ. ತಮಗೆ ಬೇಕಾದ್ದನ್ನು ಕೇಳುವುದು ಮಾತ್ರ ಅವರಿಗೆ ಸೇರಿದ್ದು. ಪೂರೈಸುವುದು ಹಿರಿಯರ ಜವಾಬ್ದಾರಿ. ಮಗು ಬೆಳೆದು ದೊಡ್ಡದಾಗುತ್ತದೆ. ಈಗ ಆ ವ್ಯಕ್ತಿಗೆ ಮಕ್ಕಳಿದ್ದಾರೆ. ಮಕ್ಕಳು ಅಪೇಕ್ಷಿಸಿದ್ದನ್ನು ಕೊಡುವುದು ಅವನ ಕರ್ತವ್ಯ. ಇಷ್ಟು ದಿನ ಮಗುವಾಗಿದ್ದಾಗ ಕೇಳಿ ಪಡೆದುಕೊಂಡದ್ದಾಯಿತು. ಇನ್ನು ನೀಡುವ ಸರದಿ. ತನ್ನ ಅವಶ್ಯಕತೆಗಳನ್ನು ಹಿಂದಿಕ್ಕಿ, ಮಕ್ಕಳ ಅವಶ್ಯಕತೆಗಳಿಗೆ ಆದ್ಯತೆ ನೀಡಬೇಕು. ಅವರ ತೃಪ್ತಿಯಲ್ಲಿ ತನ್ನ ಸಂತೋಷವನ್ನು ಕಾಣಬೇಕು. ಹೀಗೆ ಮತ್ತೊಬ್ಬರ ಸಂತೋಷದಲ್ಲಿ ತನ್ನ ಸಂತೃಪ್ತಿಯನ್ನು ಕಾಣುವುದು ಯಜಮಾನಿಕೆ. ಈ ದೃಷ್ಟಾಂತ ಒಂದು ಸಂಕೇತ. ಇದರ ಹಿಂದಿರುವ ಅರ್ಥ ವಿಶಾಲವಾದದ್ದು. ವಿಸ್ತಾರವಾದ ಪ್ರಪಂಚದಲ್ಲಿ ನಾವು ಮಕ್ಕಳ ತರಹ ಬೇಡುತ್ತಲೇ, ಪಡೆಯುತ್ತಲೇ ಇರುತ್ತೇವೆ. ಬೇಡುವುದು ಮಗುತನವೇ. ಆ ಬೇಡಿಕೆ ಹಣಕ್ಕಾಗಿ, ಅಧಿಕಾರಕ್ಕಾಗಿ, ಮನ್ನಣೆಗಾಗಿ, ಸಂಸಾರಸುಖಕ್ಕಾಗಿ ಅಥವಾ ಇನ್ನಾವುದಕ್ಕೇ ಆಗಿರಬಹುದು. ಅದು ಮಗುತನವೇ. ಕೆಲವರು ಆಯುಷ್ಯ ಪೂರ್ತಿ ಮಗುವಾಗಿಯೇ ಉಳಿಯುತ್ತಾರೆ. ಅದಕ್ಕೆ ಕಗ್ಗ ಹೇಳುತ್ತದೆ, ಮಗುವಾಗಿ ಬೇಡಿದ್ದು ಸಾಕು, ಈಗ ಯಜಮಾನನಾಗು. ನೀನೀಗ ಬೇಡುವುದನ್ನು ನಿಲ್ಲಿಸಿ ಜಗತ್ತಿಗೆ ಏನು ಬೇಕೋ ಅದನ್ನು ಸಂತೋಷದಿಂದ ಕೊಡು. ಕೊಟ್ಟು ತೃಪ್ತಿಯನ್ನು ಪಡೆ. ಹೀಗೆ ಕೊಡುವುದರಲ್ಲಿ ತೃಪ್ತಿಯನ್ನು ಪಡೆಯುವವವನು ಯಜಮಾನ. ಹಾಗೆ ಬಾಳುವವನೇ ನಿಜವಾದ ಜಾಣ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಜೂನ್ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಶುದ್ಧ ದ್ವಿತೀಯ ಗಂ. 13-08 ನಕ್ಷತ್ರ: ಪುನರ್ವಸು ಗಂ. 22-37 ಯೋಗ: ಧ್ರುವ 25-47 ಕರಣ: ಕೌಲವ ಗಂ. 13-08, ಮಿಥುನ ಮಾಸದ 05 ನೇ ದಿನ,
ಮಳೆನಕ್ಷತ್ರ: ಮೃಗಶಿರ 4.ರಾಹುಕಾಲ : ಸಾಯಂಕಾಲ 03-00 – 04-30
ಸೂರ್ಯೋದಯ : 06-08 **ಸೂರ್ಯಾಸ್ತ :** 06-56
ಮುಸ್ಲಿಂ ದಿನಾಂಕ : 01 ಜುಲ್‌ಹಿಜಾ
ದಿನ ವಿಶೇಷ : ರಥಯಾತ್ರಾ, ಅದೃಷ್ಟ ಸಂಖ್ಯೆ : 6, 4

ಮೇಷ: ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಯೊಂದು ಇಂದು ದೂರಾಗುವುದು. ಆರೋಗ್ಯದ ಬಗ್ಗೆ ವಿಶೇಷ ಗಮನಹರಿಸಬೇಕಾದೀತು. ವೃತ್ತಿಯಲ್ಲಿನ ಸಣ್ಣ-ಪುಟ್ಟ ಬದಲಾವಣೆ ಧನಲಾಭ ತಂದು ಕೊಡುವುದು.

ವೃಷಭ: ಇತರರಿಗೆ ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಉತ್ತಮ ಗುಣ ಜೀವನದ ಶೈಲಿಯಲ್ಲಿ ವೃದ್ಧಿಸಿಕೊಳ್ಳಿರಿ. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ಈ ದಿನ ಈಡೇರಲಿವೆ.

ಮಿಥುನ: ಔಷಧ ಕಂಪನಿಗಳಿಗೆ ಮತ್ತು ಔಷಧ ಮಾರಾಟ ಪ್ರತಿನಿಧಿಗಳಿಗೆ ಮಾರಾಟದಲ್ಲಿ ಹೆಚ್ಚಳವಾಗುವುದು. ಕೃಷಿಯಲ್ಲಿ ಬೇಸಾಯದ ಕೆಲಸಗಳಿಂದಾಗಿ ಖರ್ಚು ಸಂಭವಿಸಬಹುದು. ನಿವೃತ್ತ ಶಿಕ್ಷಕರಿಗೆ ಗೌರವಯುತ ಸ್ಥಾನಮಾನ ಲಭ್ಯ.

ಕರ್ಕಾಟಕ: ಮನೆಗೆ ಬಂಧು ಮಿತ್ರರ ಆಗಮನ ನವ ಉಲ್ಲಾಸ ತರಲಿದೆ. ದೇವರ ಸೇವೆಯಿಂದ ಕೌಟುಂಬಿಕ ಸಮಸ್ಯೆಗಳು ದೂರವಾಗಲಿವೆ. ಇತರರ ಸಲಹೆಯನ್ನು ವಿಮರ್ಶಿಸದೇ ಒಪ್ಪಿಕೊಳ್ಳಬೇಡಿ. ದೇಹಕ್ಕೆ ಶೀತ ಬಾಧೆ ಬರಲಿದೆ.

ಸಿಂಹ: ಷೇರುಗಳ ಮೇಲೆ ಹೆಚ್ಚಿನ ಹೂಡಿಕೆ ವಿಚಾರದಲ್ಲಿ ಆಳ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರಿಂದ ಸಲಹೆ ಬರುವುದು. ಪೊಲೀಸ್ ಅಧಿಕಾರಿಗಳಿಗೆ ವರ್ಗಾವಣೆ ಆಗಬಹುದು. ರಾಜಕೀಯದಲ್ಲಿ ಜಯ ಸಾಧಿಸುವಿರಿ.

ಕನ್ಯಾ: ಅಸಾಧ್ಯ ಕಾರ್ಯ ಸಾಧಿಸಿ ತೋರಿಸುವಷ್ಟು ಮನೋಬಲ, ಛಲವನ್ನು ವೃದ್ಧಿಸಿಕೊಳ್ಳಿ. ನವದಂಪತಿಗೆ ಸಂತಾನದ ಶುಭ ಸುದ್ದಿ ಕೇಳಿ ಬರುವುದು. ಪುಣ್ಯಕ್ಷೇತ್ರಗಳಿಗೆ ಹೋಗಿಬರುವಂತಹ ಯೋಗವಿದೆ.

ತುಲಾ: ಕುಟುಂಬದಲ್ಲಿ ಅಥವಾ ಮನೆಯಲ್ಲಿನ ನಿಮ್ಮ ಮೇಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವ ಯೋಗವಿದೆ.

ವೃಶ್ಚಿಕ: ಸಂತೋಷ ಹೊಂದಿದವರಾಗಿ ಹಾಗೂ ಪ್ರೀತಿ ಪಾತ್ರರೊಂದಿಗೆ ಉತ್ತಮ ಹೊಂದಾಣಿಕೆ ಇರುವಂತಾಗಲಿದೆ. ಆಸ್ಪತ್ರೆ ಸಿಬ್ಬಂದಿ ವರ್ಗಕ್ಕೆ ಸರ್ಕಾರದಿಂದ ಸೌಲಭ್ಯ ಸಿಗಲಿದೆ. ಮೆಚ್ಚಿನ ಹವ್ಯಾಸಕ್ಕೆ ಬಿಡುವು ಮಾಡಿಕೊಳ್ಳುವಿರಿ.

ಧನು: ದಿನಸಿ ವ್ಯಾಪಾರಿಗಳು ವ್ಯಾಪಾರವನ್ನು ವಿಸ್ತರಣೆ ಮಾಡುವುದಕ್ಕಿಂತ ಗುಣಮಟ್ಟ ಕಾಪಾಡುವ ಬಗ್ಗೆ ಗಮನಹರಿಸಿ. ವಾಹನ ರಿಪೇರಿಗಾಗಿ ಖರ್ಚು ಮಾಡಬೇಕಾಗುವುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಂಡುಬರಲಿದೆ.

ಮಕರ: ಪೂರ್ವ ನಿಯಮಕವಾಗಿ ಕೆಲಸ ಮಾಡುವುದು ಬಹಳ ಮುಖ್ಯ. ಸಾಮಾಜಿಕ ವಿಷಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ. ವೃತ್ತಿರಂಗದ ಕೆಲವು ಹೊಸ ರೀತಿಯ ಬದಲಾವಣೆಗಳಿಗೆ ಹೊಂದಿಕೊಳ್ಳುವುದು ಕಷ್ಟವಾಗಲಿದೆ.


ಕುಂಭ: ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯಬದಲಾವಣೆಗಳಾಗುವುದು. ಮಕ್ಕಳ ತೀರ್ಮಾನ ಬಹುಮಟ್ಟಿಗೆ ಸರಿಯಾಗಿರುವುದು. ಹಣದ ದುಂದುವೆಚ್ಚವನ್ನು ನಿಲ್ಲಿಸಿ.

ಮೀನ: ಕೆಲಸಗಳು ಎಷ್ಟೇ ಕಷ್ಟವಾದರೂ, ಸ್ವತಃ ನೀವೇ ಸೋಲನ್ನು ಘೋಷಿಸಿಕೊಳ್ಳಬೇಡಿ. ಇಷ್ಟ ಮಿತ್ರರಿಂದ ಸಕಾಲದಲ್ಲಿ ಸಹಕಾರ ಒದಗಿ ಬರಲಿದೆ. ಅನ್ಯರ ಭಾವನೆಗಳಿಗೆ ಬೆಲೆ ಕೊಡುವಂತಹಾ ಗುಣವನ್ನು ಅಭ್ಯಾಸ ಮಾಡಿಕೊಳ್ಳಿ.

ಪದಬಂಧ 5355
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪಾಂಡಿತ್ಯಪೂರ್ಣವಾದ ಮಾತು (6)
4.ರತ್ನಖಚಿತವಾದ ವಸ್ತು (4)
5.ಓದುಗ ಇಲ್ಲಿದ್ದಾನೆ (3)
7.ವರ ಕೊನೆಗಿದ್ದರೆ ಮಾತ್ರ ಇದು ಸ್ಥಿರವಾದುದು! (3)
10.ಜಿಪುಣನನ್ನು ಹೀಗೂ ಕರೆವರು (3)
12.ಗಡಕ್ಕನೆ ಬಂದೆರಗಿದ ಕೋಪ (3)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
15.ಪ್ರಜೆಗಳನ್ನು ಪ್ರತಿನಿಧಿಸುವವನು (6)

ಮೇಲಿಂದ ಕೆಳಕ್ಕೆ
1.ಎದುರಾಳಿ ಇಲ್ಲಿದ್ದಾನೆ (4)
2.ನಗರದಲ್ಲಿರುವ ಮನುಷ್ಯ (2)
3.ಸಂಪ್ರದಾಯವನ್ನು ಅನುಸರಿಸುವವನು (4)
6.ಬೈರಾಗಿಗಳು ಬಳಸುವ ನೀರಿನ ಪಾತ್ರೆ (4)
7.ಈತ ಪ್ರತಿಷ್ಠಾಪಿಸುವವನು (3)
8.ಯುದ್ಧಭೂಮಿಯಿದು (4)
9.ಜಂಬುಕದ ಲಾಂಗೂಲ (4)
11.ಎಂದೂ ನಾಶವಾಗದ ನಿಧಿ (4)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



5354ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ಥಾನಪಲ್ಲಟ
4.ಗರ್ಜನೆ 5.ಗಯ್ಯಾಳಿ
6.ಪುಕಾರು 7.ಕೆಸರು
9.ಮಂಕರಿ 10.ಪಾನಕ
13.ಸೆರಗು 15.ಕನಕ
16.ಜರೂರು 17.ಅಳ್ವೇರಿ
18.ಮರಣಕಾಲ

ಮೇಲಿಂದ ಕೆಳಕ್ಕೆ:
1.ಸ್ಥಾನಭ್ರಷ್ಟ 2.ಪತ್ರಪುಸ್ತಕ
3.ಟಗರು 4.ಗಳಿಕೆ
8.ಸಭಿಕ 9.ಮಂದಿರ
11.ನವೀಕರಣ 12.ಇಳಿಗಾಲ
14.ಗುಜರಿ 15.ಕರುಮ

ಸುಡೊಕು 5741


	2					8		7
4		8						
	9					6		4
	5		7				6	
				9			5	
2		3			4		7	
7								6
	1		2		9		4	
6		2				9	8	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5740 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,826
ಇಂದಿನ ಅಂತ್ಯ	18,755
▼	71
ದಿನದ ಕನಿಷ್ಠ	18,719

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1300-1500
ಮಧ್ಯಮ	₹1000-1300
ಸಣ್ಣ	₹500-1000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹601

ಖಾದ್ಯ ತೈಲ ಮುಂಬೈ



(10 ಕೆಜಿಗೆ)


ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹960 (950)
ಸೂರ್ಯಕಾಂತಿ (ರಿಫೈನ್ಡ್)	₹960 (950)
ಪಾಮೋಲಿನ್	₹859 (860)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್. ಪೇಟೆ	₹7850-7850
ಪುತ್ತೂರು	₹4500-7300
ತುರುವೇಕೆರೆ	₹7700-8000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151.50
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹127

ಮುದ್ರಮನೆ ಕಾಫಿ



(50 ಕೆಜಿಗೆ)

ಎಪಿ	₹15300
ಎಸಿ	₹7980
ಆರ್‌ಪಿ	₹10800
ಆರ್‌ಸಿ	₹6360

ಇನ್ವಿಕ್ಟೊ: ಬುಕಿಂಗ್ ಆರಂಭಿಸಿದ ಮಾರುತಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಇನ್ವಿಕ್ಟೊ ವಾಹನಕ್ಕೆ ಸೋಮವಾರದಿಂದ ಬುಕಿಂಗ್ ಆರಂಭಿಸಿದೆ. ಈ ವಾಹನವನ್ನು ಜುಲೈ 5ರಂದು ಬಿಡುಗಡೆ ಮಾಡಲಿದೆ.

ನೆಕ್ಸಾ ಮಳಿಗೆಗಳಲ್ಲಿ ಅಥವಾ ಆನ್‌ಲೈನ್ ಮೂಲಕ ₹25 ಸಾವಿರ ಪಾವತಿಸಿ ವಾಹನವನ್ನು ಬುಕ್ ಮಾಡಬಹುದು. ಮೂರು ಸಾಲು ಆಸನಗಳು ಇರುವ ಪ್ರೀಮಿಯಂ ವರ್ಗದ ವಾಹನ ಮಾರುಕಟ್ಟೆಯಲ್ಲಿ ಹಿಡಿತ ಸಾಧಿಸುವ ಉದ್ದೇಶವು ಕಂಪನಿಗೆ ಇದೆ.

3 ಸಾಲು ಆಸನಗಳ, ಪ್ರೀಮಿಯಂ ವರ್ಗದ ಕಾರು ಮಾರುಕಟ್ಟೆಗೆ ಮಾರುತಿ ಸುಜುಕಿ, ಈ ಮಾದರಿಯ ಮೂಲಕ ಪ್ರವೇಶ ಪಡೆಯುತ್ತಿದೆ.

ಏರ್‌ಬಸ್‌ನಿಂದ 500 ವಿಮಾನ ಖರೀದಿಸಲಿರುವ ಇಂಡಿಗೊ



ಪ್ಯಾರಿಸ್ (ಎಎಫ್‌ಪಿ): ಕಡಿಮೆ ವೆಚ್ಚದಲ್ಲಿ ವಿಮಾನಯಾನ ಸೇವೆ ಒದಗಿಸುವ ಇಂಡಿಗೊ ಕಂಪನಿಯು ಯುರೋಪಿನ ವಿಮಾನ ತಯಾರಿಕಾ ಕಂಪನಿ ಏರ್‌ಬಸ್‌ನಿಂದ ಒಟ್ಟು 500 ವಿಮಾನಗಳನ್ನು (ಎ320) ಖರೀದಿಸಲಿದೆ. ಇಲ್ಲಿ ನಡೆಯುತ್ತಿರುವ 'ಪ್ಯಾರಿಸ್ ಏರ್ ಶೋ' ಸಂದರ್ಭದಲ್ಲಿ ಈ ವಿಚಾರವನ್ನು ಇಂಡಿಗೊ ತಿಳಿಸಿದೆ.

₹4.50 ಲಕ್ಷ ಕೋಟಿ ಮೊತ್ತದ ಈ ಖರೀದಿಯು ನಾಗರಿಕ ವಿಮಾನಯಾನ ಉದ್ದಿಮೆಯಲ್ಲಿನ ಇದುವರೆಗಿನ ಅತಿದೊಡ್ಡ ಮೊತ್ತದ ವಹಿವಾಟು ಎಂದು ಇಂಡಿಗೊ ಕಂಪನಿಯ ಮುಖ್ಯಸ್ಥ ಪೀಟರ್ ಎಲ್ಬರ್ಸ್ ಹೇಳಿದ್ದಾರೆ. ಏರ್‌ಬಸ್ ಕಂಪನಿಯು ಈ ವಿಮಾನಗಳನ್ನು ಇಂಡಿಗೊ ಕಂಪನಿಗೆ 2030ರಿಂದ 2035ರ ನಡುವೆ ವಿತರಿಸಲಿದೆ.

ಎ320 ಮಾದರಿಯ ಒಟ್ಟು 1,300 ವಿಮಾನಗಳಿಗೆ ಬೇಡಿಕೆ ಬಂದಿದೆ. ಇದರಲ್ಲಿ ಇಂಡಿಗೊ ಕಡೆಯಿಂದ ಬಂದಿರುವ ಬೇಡಿಕೆ ಅತಿದೊಡ್ಡದು.

ಕಡಿಮೆ ವೆಚ್ಚದಲ್ಲಿ ವಿಮಾನಯಾನ ಸೇವೆಯನ್ನು ಒದಗಿಸುತ್ತಿರುವ ಇಂಡಿಗೊ ಕಂಪನಿಯು, ದೇಶದೊಳಗಿನ ಅತಿದೊಡ್ಡ ಸೇವಾದಾತರ ಪೈಕಿ ಒಂದು.

ಟಾಟಾ ಸಮೂಹಕ್ಕೆ ಸೇರಿರುವ ಏರ್ ಇಂಡಿಯಾ ಕಂಪನಿಯು 2023ರ ಫೆಬ್ರುವರಿಯಲ್ಲಿ ಒಂದೇ ಬಾರಿಗೆ 470 ವಿಮಾನಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿತ್ತು. ಇದು ಅದುವರೆಗಿನ ಅತಿದೊಡ್ಡ ಖರೀದಿ ಒಪ್ಪಂದವಾಗಿತ್ತು. ಆಗ ಏರ್ ಇಂಡಿಯಾ ಕಂಪನಿಯು ಏರ್‌ಬಸ್ ಹಾಗೂ ಅಮೆರಿಕದ ಬೋಯಿಂಗ್ ಜೊತೆ ಒಪ್ಪಂದಕ್ಕೆ ಸಹಿ ಮಾಡಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಸಾಗರ		ಕೆಂಪುಗೋಟು	
ಬಂಟ್ವಾಳ		ಬಿಳಿಗೋಟು	27699-36229		28611-33889
ಕೋಕ	12500-25000	ಚಾಲಿ	36299-39229	ರಾಶಿ	44069-50339
ಹೊಸತು	27500-40500	ಕೋಕ	28009-36879	ತಟ್ಟಿಬೆಟ್ಟೆ	40499-48609
ಹಳತು	48000-53000	ಕೆಂಪುಗೋಟು		ಶಿರಸಿ	
ಕಾರ್ಕಳ			29699-38699	ಬೆಟ್ಟೆ	40099-46799
ಹೊಸತು	30000-40500	ರಾಶಿ	34899-53429	ಬಿಳಿಗೋಟು	24199-34419
ಹಳತು	40000-53000	ಸಿಪ್ಪೆಗೋಟು	15690-22599	ಚಾಲಿ	45618-50898
ಕುಮಟಾ		ಶಿವಮೊಗ್ಗ		ಕೆಂಪುಗೋಟು	24199-34419
ಚಿಪ್ಪು	29899-33599	ಬೆಟ್ಟೆ	48699-54599	ರಾಶಿ	45618-50898
ಕೋಕ	22509-33299	ಗೊರಬಲು	23116-40011	ಯಲ್ಲಾಪುರ	
ಫ್ಯಾಕ್ಟರಿ	14509-22699	ರಾಶಿ	39009-53599	ಬಿಳಿಗೋಟು	24212-35299
ಹಳೆಚಾಲಿ	37089-39501	ಸರಕು	52000-82400	ಚಾಲಿ	35609-40300
ಹೊಸಚಾಲಿ	36999-39499	ಸಿದ್ದಾಪುರ		ಕೋಕ	18969-33129
ಪುತ್ತೂರು		ಬಿಳಿಗೋಟು	30889-34411	ಕೆಂಪುಗೋಟು	24899-34899
ಕೋಕ	11000-25000	ಚಾಲಿ	36199-39699	ರಾಶಿ	42679-53992
ಹೊಸತು	33500-41000	ಕೋಕ	29099-33099	ತಟ್ಟಿಬೆಟ್ಟೆ	34299-48819

ಮುಂಬೈ ಧಾರಣೆ

ಶೇಂಗಾ

19-6-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12100-12200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690(1690)
ಒಂದು ವಾರದ ಡೆಲಿವರಿ	1685(1685)
ಸೋಯಾ ಕಚ್ಚಾ	900 (900)
ಪಾಮ್ ವಾರದ ಡೆಲಿವರಿ	857 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,000 (59,250)
ಬೆಳ್ಳಿ ಕೆ.ಜಿ 72,350 (72,350)

ಆವರಣದಲ್ಲಿ ಶನಿವಾರದ ಧಾರಣೆ

ಎಕರೆಗೆ ₹2 ಲಕ್ಷಕ್ಕಿಂತ ಹೆಚ್ಚು ಖರ್ಚು: ಬೆಂಬಲ ಬೆಲೆಗೆ ಬೆಳೆಗಾರರ ಆಗ್ರಹ

ಒಣದ್ರಾಕ್ಷಿ ದರ ಪಾತಾಳಕ್ಕೆ


• ಬಸವರಾಜ್ ಸಂಪಳ್ಳಿ

ವಿಜಯಪುರ: ಕರ್ನಾಟಕ ಹಾಗೂ ಮಹಾರಾಷ್ಟ್ರದ ಮಾರುಕಟ್ಟೆಯಲ್ಲಿ ಒಣದ್ರಾಕ್ಷಿ ದರ ತೀವ್ರ ಕುಸಿದಿದೆ. ಇದರಿಂದಾಗಿ ದ್ರಾಕ್ಷಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಿಂದಿನ ವರ್ಷಗಳಲ್ಲಿ ಕೆ.ಜಿ ಒಣದ್ರಾಕ್ಷಿ ₹180ರಿಂದ ₹300ರ ವರೆಗೆ ಮಾರಾಟವಾಗುತಿತ್ತು. ಈ ವರ್ಷ ಕೆ.ಜಿಗೆ ₹80ರಿಂದ ₹135ಕ್ಕೆ ದರ ಕುಸಿದಿದೆ.

'ಉತ್ತಮ ದರ ಸಿಗುವ ನಿರೀಕ್ಷೆಯಲ್ಲಿದ್ದೇವೆ. ಆದರೆ, ಮಾರುಕಟ್ಟೆಯಲ್ಲಿ ದಿನದಿಂದ ದಿನಕ್ಕೆ ದರ ಕುಸಿಯುತ್ತಿದ್ದು, ದಿಕ್ಕು ತೋಚದಂತಾಗಿದೆ. ಕೋಲ್ಡ್ ಸ್ಟೋರೇಜ್‌ಗೆ ಬಾಡಿಗೆ ಪಾವತಿಸಲೂ ಆಗುತ್ತಿಲ್ಲ. ಅನ್ಯಮಾರ್ಗವಿಲ್ಲದೇ ಸಿಕ್ಕಷ್ಟೇ ಬೆಲೆಗೆ ಮಾರುತ್ತಿದ್ದೇವೆ' ಎಂದು ಒಣದ್ರಾಕ್ಷಿ ಬೆಳೆಗಾರರೊಬ್ಬರು ತಿಳಿಸಿದರು.

ಬೆಂಬಲ ಬೆಲೆ ನೀಡಿ: 'ಬೆಳೆಗಾರರ ಹಿತದೃಷ್ಟಿಯಿಂದ ರಾಜ್ಯ ಸರ್ಕಾರವು ಒಣ ದ್ರಾಕ್ಷಿಗೆ ಬೆಂಬಲ ಬೆಲೆ ಘೋಷಿಸಬೇಕು. ಜೊತೆಗೆ ರಫ್ತಿಗೆ ಉತ್ತೇಜಿಸಬೇಕು. ಸರ್ಕಾರವೇ ಬೆಂಬಲ ಬೆಲೆಯಲ್ಲಿ ಒಣ ದ್ರಾಕ್ಷಿ ಖರೀದಿಸಿ ಅಂಗನವಾಡಿ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಮೊಟ್ಟೆ, ಬಾಳೆಹಣ್ಣು, ಹಾಲು, ಆಹಾರದ ಜೊತೆಗೆ ವಾರಕ್ಕೊಮ್ಮೆ ವಿತರಿಸಬೇಕು' ಎಂದು ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘದ ಅಧ್ಯಕ್ಷ ಡಾ. ಕೆ.ಎಚ್.ಮುಂಬಾರಡ್ಡಿ ಒತ್ತಾಯಿಸಿದರು.

ಮಾರಾಟವಾಗದ ಹಸಿ ದ್ರಾಕ್ಷಿ: 'ಪ್ರತಿ ವರ್ಷ ಶೇ 35ರಷ್ಟು ಹಸಿ ದ್ರಾಕ್ಷಿ (ಟೇಬಲ್ ಗ್ರೇಪ್) ಮಾರಾಟವಾಗುತ್ತಿತ್ತು. ಉಳಿದಿದ್ದು ಒಣ ದ್ರಾಕ್ಷಿ ಆಗುತ್ತಿತ್ತು. ಆದರೆ, ಈ ವರ್ಷ ಹಸಿ ದ್ರಾಕ್ಷಿ ಹಣ್ಣು ಹೆಚ್ಚು ವ್ಯಾಪಾರವಾಗಿಲ್ಲ. ಅದಕ್ಕೆ ವಿಜಯಪುರ, ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆ ಬೆಳೆಗಾರರು ಒಣ ದ್ರಾಕ್ಷಿಗೆ ಹೆಚ್ಚು ಒತ್ತು ನೀಡಿದ್ದಾರೆ' ಎಂದು ದ್ರಾಕ್ಷಿ ಬೆಳೆಗಾರ ಅಭಯಕುಮಾರ್ ಎಸ್. ನಾಂದ್ರೇಕರ್ 'ಪ್ರಜಾವಾಣಿ'ಗೆ ತಿಳಿಸಿದರು.



'30 ವರ್ಷಗಳ ಹಿಂದೆ 1 ಕೆಜಿ ಒಣ ದ್ರಾಕ್ಷಿ ₹150 ರಿಂದ ₹170ಕ್ಕೆ ಮಾರಾಟವಾಗುತ್ತಿತ್ತು. ಆಗ 1 ಎಕರೆ ದ್ರಾಕ್ಷಿ ತೋಟದ ನಿರ್ವಹಣೆಗೆ ₹15 ಸಾವಿರದಿಂದ ₹ 20 ಸಾವಿರ ಖರ್ಚಾಗುತ್ತಿತ್ತು. ಸದ್ಯ 1 ಎಕರೆ ನಿರ್ವಹಣೆಗೆ ₹ 2 ಲಕ್ಷಕ್ಕೂ ಅಧಿಕ ವೆಚ್ಚವಾಗುತ್ತಿದೆ. ಈಗಿನ ದರದಿಂದ ರೈತರು ಬೆಳೆ ಬೆಳೆಯುವುದನ್ನೇ ಕೈಬಿಡಬೇಕಾದ ಸ್ಥಿತಿಯಿದೆ' ಎಂದರು.

ರಾಜ್ಯದಲ್ಲಿ 36,371 ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಬೆಳೆ ಬೆಳೆದರೆ, ವಿಜಯಪುರ ಜಿಲ್ಲೆಯಲ್ಲಿ 25,575 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಜಿಲ್ಲೆಯ ಪಾಲು ಶೇ 70.32ರಷ್ಟು ಇದೆ. ಅಂದಾಜು 6.33 ಲಕ್ಷ ಟನ್ ವಾರ್ಷಿಕ ಉತ್ಪಾದನೆಯಾಗುತ್ತದೆ. ಇದರಲ್ಲಿ ಶೇ 90ರಷ್ಟು ಒಣದ್ರಾಕ್ಷಿ ಮಾಡಲಾಗುತ್ತಿದೆ.

ಎಸ್‌ಐಪಿ: ಖಾತೆ ಮುಚ್ಚಿದ ಪ್ರಮಾಣ ಶೇ 7.4 ಏರಿಕೆ

ನವದೆಹಲಿ (ಪಿಟಿಐ): ವ್ಯವಸ್ಥಿತ ಹೂಡಿಕೆ ಯೋಜನೆಯ (ಎಸ್‌ಐಪಿ) ಖಾತೆಗಳನ್ನು ಮುಚ್ಚುವ ಪ್ರಮಾಣವು ಮೇ ತಿಂಗಳಿನಲ್ಲಿ ಶೇಕಡ 7.4ರಷ್ಟು ಹೆಚ್ಚಾಗಿದ್ದು, 14.19 ಲಕ್ಷಕ್ಕೆ ತಲುಪಿದೆ. ಏಪ್ರಿಲ್‌ನಲ್ಲಿ 13.21 ಲಕ್ಷ ಎಸ್‌ಐಪಿ ಖಾತೆಗಳನ್ನು ಮುಚ್ಚಲಾಗಿತ್ತು.

ಮೇ ತಿಂಗಳಿನಲ್ಲಿ ಹೊಸದಾಗಿ ಎಸ್‌ಐಪಿಗೆ ನೋಂದಣಿ ಆದವರ ಸಂಖ್ಯೆಯು 5.14 ಲಕ್ಷದಷ್ಟು ಹೆಚ್ಚಾಗಿದ್ದು, 24.7 ಲಕ್ಷಕ್ಕೆ ತಲುಪಿದೆ. ಏಪ್ರಿಲ್‌ನಲ್ಲಿ ಹೊಸದಾಗಿ ಆರಂಭವಾದ ಎಸ್‌ಐಪಿ ಖಾತೆಗಳ ಸಂಖ್ಯೆಯು 19.56 ಲಕ್ಷ ಆಗಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಒಕ್ಕೂಟವು (ಎಎಂಎಫ್‌ಐ) ಮಾಹಿತಿ ನೀಡಿದೆ.

ಎಸ್‌ಐಪಿಯಿಂದ ಹೊರಹೋಗುವವರಿಗಿಂತಲೂ ಹೊಸದಾಗಿ ನೋಂದಣಿ ಆಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಎಸ್‌ಐಪಿ ಬಗ್ಗೆ ಹೂಡಿಕೆದಾರರಿಗೆ ಇರುವ ವಿಶ್ವಾಸವನ್ನು ಇದು ತಿಳಿಸುತ್ತದೆ ಎಂದು ಎಸ್‌ಬಿಐ ಮ್ಯೂಚುವಲ್ ಫಂಡ್‌ನ ಉಪ ವ್ಯವಸ್ಥಾಪಕ ನಿರ್ದೇಶಕ ಡಿ.ಪಿ. ಸಿಂಗ್ ಹೇಳಿದ್ದಾರೆ.

ಎಸ್‌ಐಪಿ ಖಾತೆಯನ್ನು ಆನ್‌ಲೈನ್ ಮೂಲಕವೇ ಸುಲಭವಾಗಿ ಮುಚ್ಚಬಹುದಾಗಿದೆ. ಈ ಕಾರಣಕ್ಕಾಗಿಯೂ ಹೊರಹೋಗುವವರ ಸಂಖ್ಯೆ ಹೆಚ್ಚಾಗಿರಬಹುದು ಎಂದು ಅವರು ತಿಳಿಸಿದ್ದಾರೆ. 2022-23ರಲ್ಲಿ ಒಟ್ಟು 1.43 ಕೋಟಿ ಎಸ್‌ಐಪಿ ಖಾತೆಗಳನ್ನು ಮುಚ್ಚಲಾಗಿದೆ. 2021-22ರಲ್ಲಿ 1.11 ಕೋಟಿ ಖಾತೆಗಳನ್ನು ಮುಚ್ಚಲಾಗಿತ್ತು. ಎಸ್‌ಐಪಿಯ ನಿರ್ವಹಣಾ ಸಂಪತ್ತು ಮೌಲ್ಯವು ಏಪ್ರಿಲ್‌ನಲ್ಲಿ ₹7.17 ಲಕ್ಷ ಕೋಟಿ ಇದ್ದಿದ್ದು ಮೇ ತಿಂಗಳಲ್ಲಿ ₹7.53 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಲಾಭಗಳಿಕೆಗೆ ಇಳಿದ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸೋಮವಾರದ ವಹಿವಾಟಿನ ಆರಂಭದಲ್ಲಿ ಕಂಡುಕೊಂಡಿದ್ದ ಗಳಿಕೆಯನ್ನು ಉಳಿಸಿಕೊಳ್ಳಲು ವಿಫಲವಾದ್ದರಿಂದ, ವಹಿವಾಟು ಇಳಿಮುಖವಾಗಿ ಅಂತ್ಯಗೊಂಡಿತು.

ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ಇಳಿಮುಖ ವಹಿವಾಟು ಮತ್ತು ಲಾಭ ಗಳಿಕೆಯ ವಹಿವಾಟಿನ ಜೊತೆಗೆ ಹೂಡಿಕೆದಾರರು ದೂರಸಂಪರ್ಕ, ವಿದ್ಯುತ್ ಮತ್ತು ಯುಟಿಲಿಟಿ ವಲಯದ ಷೇರುಗಳನ್ನು ಮಾರಾಟ ಮಾಡಿದ್ದರಿಂದ ನಕಾರಾತ್ಮಕ ವಹಿವಾಟು ನಡೆಯಿತು.

ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್ ಮತ್ತು ಕೋಟಕ್ ಬ್ಯಾಂಕ್ ಷೇರುಗಳು ಸಹ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಆಗಿದ್ದರಿಂದ ಹೂಡಿಕೆ ಚಟುವಟಿಕೆ ಮೇಲೆ ಪರಿಣಾಮ ಉಂಟಾಯಿತು ಎಂದು ವರ್ತಕರು ಹೇಳಿದ್ದಾರೆ.

ಶುಕ್ರವಾರ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ್ದ ಬಿಎಸ್‌ಇ ಸೆನ್ಸೆಕ್ಸ್ ಸೋಮವಾರ 216 ಅಂಶ ಇಳಿಕೆ ಕಂಡು 63,168 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 70 ಅಂಶ ಇಳಿಕೆ ಕಂಡು 18,755 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ಮಧ್ಯಾಹ್ನದ ನಂತರ ಷೇರುಪೇಟೆಯಲ್ಲಿ ಮಾರಾಟದ ಒತ್ತಡ ಹೆಚ್ಚು ಕಂಡುಬಂದಿತು. ಇದರಿಂದಾಗಿ ಸೂಚ್ಯಂಕಗಳು ದಾಖಲೆ ಮಟ್ಟದಿಂದ ಕೆಳಗಿಳಿಯುವಂತಾಯಿತು.

ಖಾಸಗಿ ಬ್ಯಾಂಕ್‌ಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಿ ಲಾಭ ಮಾಡಿಕೊಳ್ಳಲು ಮುಂದಾದರು. ಜಾಗತಿಕ ಮಾರುಕಟ್ಟೆಗಳಲ್ಲಿಯೂ ವಹಿವಾಟು ಇಳಿಕೆ ಕಂಡಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.38ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 76.31 ಡಾಲರ್‌ನಂತೆ ಮಾರಾಟ ಆಯಿತು.

'ಆದಿಪುರುಷ್'ನಲ್ಲಿ ಸೀತೆಯ ಜನ್ಮಸ್ಥಳ ವಿವಾದ

ಕಠ್ಮಂಡು: ಹಿಂದಿ ಚಿತ್ರಗಳಿಗೆ ನಿಷೇಧ

ಕಠ್ಮಂಡು (ಪಿಟಿಐ): ಸೀತೆಯ ಜನ್ಮಸ್ಥಳ ವಿವಾದಕ್ಕೆ ಸಂಬಂಧಿಸಿದಂತೆ ನೇಪಾಳದ ಕಠ್ಮಂಡು ಮತ್ತು ಪ್ರಸಿದ್ಧ ಪ್ರವಾಸಿ ತಾಣ ಪೋಖರಾದಲ್ಲಿ ಬಾಲಿವುಡ್‌ನ 'ಆದಿಪುರುಷ್' ಚಿತ್ರ ಸೇರಿದಂತೆ ಹಿಂದಿ ಸಿನಿಮಾಗಳ ಪ್ರದರ್ಶನಕ್ಕೆ ಸೋಮವಾರ ನಿಷೇಧ ಹೇರಲಾಗಿದೆ.

ಓಂ ರಾವುತ್ ಆ್ಯಕ್ಷನ್ ಕಟ್ ಹೇಳಿರುವ ಪ್ರಭಾಸ್ ನಟನೆಯ 'ಆದಿಪುರುಷ್' ಚಿತ್ರವು ಶುಕ್ರವಾರ ವಿಶ್ವದಾದ್ಯಂತ ಹಿಂದಿ ಸೇರಿದಂತೆ ಭಾರತದ ಇತರ 4 ಭಾಷೆಗಳಲ್ಲಿ ಅದ್ದೂರಿಯಾಗಿ ತೆರೆಕಂಡಿತ್ತು. ಇದರಲ್ಲಿ 'ಜಾನಕಿಯು ಭಾರತದ ಮಗಳು' ಎಂದು ಬರೆದಿರುವ ಸಂಭಾಷಣೆಯು ನೇಪಾಳದ ಪ್ರಜೆಗಳನ್ನು ಭಾವನಾತ್ಮಕವಾಗಿ ಕೆರಳಿಸಿದೆ.

ಸೀತೆಯು ಆಗ್ನೇಯ ನೇಪಾಳದ ಜನಕಪುರಿಯಲ್ಲಿ ಜನಿಸಿದ್ದು, ಆಕೆಯು ನೇಪಾಳದ ಮಗಳು ಎಂಬುದು ಇಲ್ಲಿನವರ ನಂಬಿಕೆ. ಆದರೆ, ಚಿತ್ರದಲ್ಲಿ 'ಭಾರತದ ಪುತ್ರಿ' ಎಂದು ಉಲ್ಲೇಖಿಸಿರುವುದಕ್ಕೆ ಬಾಲಿವುಡ್ ವಿರುದ್ಧ ಆಕ್ರೋಶಗೊಂಡಿದ್ದಾರೆ.

'ಭದ್ರತೆ ದೃಷ್ಟಿಯಿಂದ ಹಲವು ನಗರ ಮತ್ತು ಪಟ್ಟಣಗಳಲ್ಲಿ 'ಆದಿಪುರುಷ್' ಪ್ರದರ್ಶನವನ್ನು ಮುಂದೂಡಲಾಗಿದೆ' ಎಂದು ನೇಪಾಳದಲ್ಲಿ ಈ ಚಿತ್ರದ ಹಂಚಿಕೆಯ ಹಕ್ಕುಗಳನ್ನು ಪಡೆದಿರುವ ಶ್ರೀಬೈರವೆಂಕಟೇಶ್ ಎಂಟರ್‌ಟೈನ್‌ಮೆಂಟ್ ಸ್ಪಷ್ಟಪಡಿಸಿದೆ.

ಇದಕ್ಕೆ ಕ್ಯೂಎಫ್‌ಎಕ್ಸ್‌ನ ಸಂಸ್ಥಾಪಕ ನಕಿಮ್ ಉದ್ದೀನ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, 'ನಿಷೇಧದ ಆದೇಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು' ಎಂದು ತಿಳಿಸಿದ್ದಾರೆ.

ಪ್ರದರ್ಶನ ಸ್ಥಗಿತ: ಕಠ್ಮಂಡುವಿನ ಎಲ್ಲಾ 17 ಚಿತ್ರಮಂದಿರಗಳಲ್ಲಿ ಹಿಂದಿ ಚಿತ್ರಗಳ ಪ್ರದರ್ಶನ ಮಾಡದಂತೆ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ಸಂಭಾಷಣೆ ಮಾರ್ಪಾಡಿಗೆ ನಿರ್ಧಾರ

ವಿವಾದ ಉಲ್ಬಣಗೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡಿರುವ 'ಆದಿಪುರುಷ್' ಚಿತ್ರ ತಂಡವು ಸಿನಿಮಾದಲ್ಲಿನ ಕೆಲವು ಸಂಭಾಷಣೆಗಳನ್ನು ಮಾರ್ಪಾಡು ಮಾಡಲು ನಿರ್ಧರಿಸಿದೆ.

'ವಾರದೊಳಗೆ ಸಂಭಾಷಣೆಗಳನ್ನು ಮಾರ್ಪಡಿಸಲಾಗುವುದು' ಎಂದು ಈ ಚಿತ್ರದ ಸಂಭಾಷಣೆಕಾರ ಮನೋಜ್ ಮುಂತಾಶಿರ್ ಭಾನುವಾರ ಟ್ವೀಟ್ ಮಾಡಿದ್ದಾರೆ. 'ಈ ಚಿತ್ರಕ್ಕಾಗಿ ನಾನು ನಾಲ್ಕು ಸಾವಿರಕ್ಕೂ ಹೆಚ್ಚು ಸಂಭಾಷಣೆ ಬರೆದಿದ್ದೇನೆ. ಆದರೆ, ಕೇವಲ ಐದು ಸಂಭಾಷಣೆಗಳಿಗೆ ಆಕ್ಷೇಪ ವ್ಯಕ್ತವಾಗುತ್ತಿರುವುದು ನೋವು ತಂದಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಅಮೆರಿಕದ ವಿವಿಧ ನಗರಗಳಲ್ಲಿ ಪ್ರಧಾನಿ ಸ್ವಾಗತಕ್ಕೆ ಏಕತಾ ಜಾಥಾ ಆಯೋಜನೆ

ಮೋದಿ ಭೇಟಿಗೆ ಭಾರತೀಯರ ಕಾತರ

ವಾಷಿಂಗ್ಟನ್/ಹ್ಯೂಸ್ಟನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕ ಪ್ರವಾಸದ ವೇಳೆ ಭವ್ಯ ಸ್ವಾಗತ ನೀಡಲು ಇಲ್ಲಿರುವ ಭಾರತ ಮೂಲದ ಸಮುದಾಯ ಸಜ್ಜಾಗಿದೆ. ಭಾರತ ಮೂಲದ ಅಮೆರಿಕನ್ನರನ್ನು ಅಕ್ಷರಶಃ ಸುಖಭಾವನೆಯ ಸಂಭ್ರಮ ಆವರಿಸಿಕೊಂಡಿದೆ.

20ಕ್ಕೂ ಹೆಚ್ಚು ಪ್ರಮುಖ ನಗರಗಳಲ್ಲಿ ಮೋದಿ ಅವರಿಗೆ ಸ್ವಾಗತ ಕೋರಲು ಏಕತಾ ಅಭಿಯಾನ ಆಯೋಜಿಸಲು ಸಿದ್ಧತೆ ನಡೆದಿದೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಹ್ವಾನದ ಮೇರೆಗೆ ಮೋದಿ ಜೂನ್ 21-24ರವರೆಗೆ ಅಮೆರಿಕ ಪ್ರವಾಸ ಕೈಗೊಳ್ಳುವರು.

ಮೋದಿ ಪ್ರವಾಸದ ವೇಳೆ 22ರಂದು ಅಮೆರಿಕ ಕಾಂಗ್ರೆಸ್‌ನ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವರು. ಮೋದಿ ಗೌರವಾರ್ಥ ಬೈಡನ್ ದಂಪತಿ ಜೂನ್ 22ರಂದು ಔತಣಕೂಟ ಆಯೋಜಿಸಿದ್ದಾರೆ.



ವಾಷಿಂಗ್ಟನ್‌ನಲ್ಲಿ ಭಾರತ ಮೂಲದ ಅಮೆರಿಕನ್ನರು ಮೋದಿಯವರಿಗೆ ಸ್ವಾಗತ ಕೋರುವ ಭಿತ್ತಿಪತ್ರ ಪ್ರದರ್ಶಿಸಿದರು –ಪಿಟಿಐ ಚಿತ್ರ

23ರಂದು ವಾಷಿಂಗ್ಟನ್‌ನ ಅಂತರ ರಾಷ್ಟ್ರೀಯ ವಾಣಿಜ್ಯ ಕೇಂದ್ರದಲ್ಲಿರುವ ರೊನಾಲ್ಡ್ ರೇಗನ್ ಸಂಕೀರ್ಣದಲ್ಲಿ ಭಾರತ ಸಮುದಾಯದ ಆಯ್ದ ಆಹ್ವಾನಿತರನ್ನು ಉದ್ದೇಶಿಸಿ ಮೋದಿ ಭಾಷಣ ಮಾಡಲಿದ್ದಾರೆ.

ಭಾನುವಾರದಂದೇ ಭಾರತ ಮೂಲದ ಕೆಲ ಅಮೆರಿಕನ್ನರು ವಾಷಿಂಗ್ಟನ್ ಡಿ.ಸಿಯಲ್ಲಿ ಜಾಥಾ ನಡೆಸಿ 'ಮೋದಿ ಭೇಟಿಗೆ ಕಾತುರರಾಗಿದ್ದೇವೆ' ಎಂಬ ಸಂದೇಶ ರವಾನಿಸಿದರು. ಜಾಥಾದಲ್ಲಿ ಸಮೂಹ ನೃತ್ಯ ಇತ್ತು, ಮೋದಿ ಪರ ಘೋಷಣೆಗಳು ಕೇಳಿಬಂದವು.

ಇಂಧನ, ಬಾಹ್ಯಾಕಾಶ, ಆರೋಗ್ಯ, ಶಿಕ್ಷಣ, ಮಾಹಿತಿ ತಂತ್ರಜ್ಞಾನ ಸೇರಿದಂತೆ ವಿವಿಧ ಉದ್ಯಮಗಳ ಪ್ರಮುಖರು, ಭಾರತ ಮೂಲದ ಅಮೆರಿಕನ್ನರ ಸಮುದಾಯ ಮೋದಿ ಭೇಟಿ ಬಗ್ಗೆ ಉತ್ಸುಕವಾಗಿದೆ ಎಂದು ಹ್ಯೂಸ್ಟನ್‌ನ ಕಾನ್ಸುಲ್ ಜನರಲ್ ಅಸೀಮ್ ಮಹಾಜನ್ ಹೇಳಿದರು.

ವಾಷಿಂಗ್ಟನ್ ಡಿ.ಸಿ.ಯಲ್ಲಿ ನಡೆಯುವ ಮೋದಿ ಸ್ವಾಗತ ಕಾರ್ಯಕ್ರಮದಲ್ಲಿ ಭಾಗವಹಿಸಲು ಟೆಕ್ಸಾಸ್ ಸೇರಿ ವಿವಿಧೆಡೆಯಿಂದ ಪ್ರಮುಖರು ತೆರಳುವರು. 'ಇವೆಲ್ಲವೂ ಮೋದಿ ಆಕರ್ಷಣೆ' ಎಂದು ಉದ್ಯಮಿ, ಇಂಡಿಯಾಸ್ಪೊರಾ ಸ್ಥಾಪಕ ಎಂ.ಆರ್.ರಂಗಸ್ವಾಮಿ ಹೇಳಿದರು.

ಮೋದಿ ಪ್ರವಾಸ ಕಾರ್ಯಕ್ರಮ

- ಜೋ ಬೈಡನ್ ಅಧಿಕಾರ ಸ್ವೀಕರಿಸಿದ ಬಳಿಕ ಇದು ಪ್ರಧಾನಿ ಮೋದಿ ಅವರ ಮೊದಲ ಅಮೆರಿಕ ಭೇಟಿ.
- ಬೈಡನ್ ಆಡಳಿತ, ಭಾರತ ಮೂಲದ ಪ್ರಭಾವಿ ಅಮೆರಿಕನ್ನರಿಂದ ಪ್ರಧಾನಿಗೆ ಕೆಂಪು ರತ್ನಗಂಬಳಿಯ ಸ್ವಾಗತ ನೀಡಲು ಸಿದ್ಧತೆ.
- 21ರಂದು ವಿಶ್ವಸಂಸ್ಥೆಯಲ್ಲಿ ಯೋಗ ದಿನ ಕಾರ್ಯಕ್ರಮ. 150 ದೇಶಗಳ ಪ್ರತಿನಿಧಿಗಳು ಭಾಗಿ.
- 22ರಂದು ಶ್ವೇತಭವನದಲ್ಲಿ ಉಭಯ ನಾಯಕರು, ನಿಯೋಗಗಳ ನಡುವೆ ದ್ವಿಪಕ್ಷೀಯ ಮಾತುಕತೆ.
- ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರೊಂದಿಗೂ ಭೇಟಿ.
- ಭಾರತದಲ್ಲಿ ಹೂಡಿಕೆ ಕುರಿತು ಕೆಲ ಕಂಪನಿಗಳು ನಿರ್ಧಾರ ಪ್ರಕಟಿಸುವ ಸಾಧ್ಯತೆ.
- ಬೈಡನ್–ಮೋದಿ ಮತ್ತು ಉನ್ನತ ನಿಯೋಗದ ಚರ್ಚೆ ಬಳಿಕ ಜಂಟಿ ಹೇಳಿಕೆ ಬಿಡುಗಡೆ ಸಂಭವ.
- ದ್ವಿಪಕ್ಷೀಯ ಮಾತುಕತೆ ಬಳಿಕ ಕ್ಯಾಪಿಟಲ್ ಹಿಲ್‌ನಲ್ಲಿ ಅಮೆರಿಕ ಸಂಸತ್‌ನ ಜಂಟಿ ಅಧಿವೇಶನ ಉದ್ದೇಶಿಸಿ ಮೋದಿ ಭಾಷಣ.
- 24ರಂದು ಈಜಿಪ್ಟ್‌ಗೆ ಪ್ರವಾಸ

ವಿಶ್ವಸಂಸ್ಥೆ: ನಾಳೆ ಯೋಗ ದಿನದಲ್ಲಿ ಭಾಗಿ

ನ್ಯೂಯಾರ್ಕ್ (ಪಿಟಿಐ): 'ಪ್ರಧಾನಿ ಮೋದಿ ಅವರು ಇದೇ ಮೊದಲ ಬಾರಿಗೆ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಜೂನ್ 21ರಂದು ಯೋಗ ದಿನಾಚರಣೆ ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ. 9ನೇ ಅಂತರರಾಷ್ಟ್ರೀಯ ಯೋಗ ದಿನ ನಿಮಿತ್ತ ಈ ಕಾರ್ಯಕ್ರಮ ನಡೆಯಲಿದೆ.

ಇದು, ಅಸಂಖ್ಯ ಭಾರತ ಮೂಲದ ಅಮೆರಿಕನ್ನರ ಸಂಭ್ರಮಕ್ಕೆ ಕಾರಣವಾಗಿದೆ. 'ಇದು, ಒಳ್ಳೆಯದು' ಎಂದು ನ್ಯೂಯಾರ್ಕ್‌ನಲ್ಲಿ ರೆಸ್ಟೋರೆಂಟ್ ಹೊಂದಿರುವ ವಿಜಯ್ ಶರ್ಮಾ ಸಂತಸ ವ್ಯಕ್ತಪಡಿಸಿದರು.

ಮೋದಿ ಅವರು ಭಾರತದ ಜಾಗತಿಕ ವರ್ಚಸ್ಸು ವೃದ್ಧಿಗೆ ಯತ್ನಿಸುತ್ತಿದ್ದಾರೆ. ಹೀಗಾಗಿ, ಅವರ ಭೇಟಿ ಕಾರ್ಯಕ್ರಮದ ಜೊತೆಗೆ ಗುರುತಿಸಿಕೊಳ್ಳಲು ಖುಷಿಯಾಗುತ್ತದೆ ಎಂದು ಹೇಳಿದರು. ಅಮೆರಿಕ ಪ್ರವಾಸದಲ್ಲಿರುವ ದಿನೇಶ್ ಬೋಹ್ರಾ, 'ನಾನು ಭಾಗವಹಿಸುತ್ತೇನೆ' ಎಂದು ದನಿಗೂಡಿಸಿದರು. ಎಲ್ಲರೂ ಭಾರತ ಕುರಿತು ಹಿಂದೆಂದಿಗಿಂತಲೂ ಹೆಚ್ಚು ಮಾತನಾಡುತ್ತಿದ್ದಾರೆ. ಇದು, ಹೆಚ್ಚು ಖುಷಿ ನೀಡುತ್ತಿದೆ ಎಂದು ಅವರು ಹೇಳಿದರು.


ನಿರ್ದಿಷ್ಟ ವಿಷಯಗಳಲ್ಲಿ ಒಪ್ಪಂದ: ಬ್ಲಿಂಕನ್

ಬೀಜಿಂಗ್ (ಪಿಟಿಐ): ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಸೋಮವಾರ ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಜೊತೆ ವಿಸ್ತೃತವಾಗಿ ಚರ್ಚಿಸಿದರು. 'ಕೆಲ ನಿರ್ದಿಷ್ಟ ವಿಷಯ'ಗಳಲ್ಲಿ ಒಪ್ಪಂದಕ್ಕೆ ಬರಲಾಗಿದೆ' ಎಂದು ಬ್ಲಿಂಕನ್ ತಿಳಿಸಿದ್ದಾರೆ. ಆದರೆ, ಹೆಚ್ಚಿನ ವಿವರಗಳನ್ನು ನೀಡಲಿಲ್ಲ.

'ಬ್ಲಿಂಕನ್ ಅವರ ಜೊತೆಗೆ ವಿವಿಧ ವಿಷಯಗಳ ಕುರಿತು ಆಳವಾದ ಚರ್ಚೆ ನಡೆಯಿತು ಎಂದು ಚೀನಾದ ಉನ್ನತ ರಾಜತಾಂತ್ರಿಕರಾದ ವಾಂಗ್ ಯಿ ಮತ್ತು ವಿದೇಶಾಂಗ ಸಚಿವ ಕ್ವಿನ್ ಗಾಂಗ್ ಬಣ್ಣಿಸಿದರು' ಎಂದೂ ಷಿ ಜಿನ್‌ಪಿಂಗ್ ಹೇಳಿದರು.

'ಚೀನಾದ ನಿಲುವು ಸ್ಪಷ್ಟಪಡಿಸಿದ್ದೇವೆ. ಬಾಲಿಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಜೊತೆ ಆಗಿದ್ದ ಹೊಂದಾಣಿಕೆ ನಿರ್ಧಾರಗಳನ್ನು ಪಾಲಿಸಲು ಒಪ್ಪಿದ್ದೇವೆ ಎಂದು ಅಧ್ಯಕ್ಷ ಷಿ ಜಿನ್‌ಪಿಂಗ್ ಹೇಳಿದರು' ಎಂದು ಸರ್ಕಾರಿ ಮಾಧ್ಯಮ ಸಿಜಿಟಿಎನ್ ವರದಿ ಮಾಡಿದೆ.

ಸಲ್ಮಾನ್ ರಶ್ದಿಗೆ ಜರ್ಮನಿ ಶಾಂತಿ ಪ್ರಶಸ್ತಿ



ಬರ್ಲಿನ್(ಎಪಿ): ಭಾರತೀಯ ಮೂಲದ ಲೇಖಕ ಸಲ್ಮಾನ್ ರಶ್ದಿ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಸೇವೆಯನ್ನು ಪರಿಗಣಿಸಿ ಜರ್ಮನಿಯ ಪ್ರತಿಷ್ಠಿತ ಶಾಂತಿ ಪ್ರಶಸ್ತಿ ನೀಡಲಾಗಿದೆ. ನಿರಂತರವಾಗಿ ಅಪಾಯ ಎದುರಾದ ಸಂದರ್ಭದಲ್ಲೂ ರಶ್ದಿ ಅವರು ಸಾಹಿತ್ಯ ಕ್ಷೇತ್ರದಲ್ಲಿ ತೋರಿದ ದೃಢಸಂಕಲ್ಪ ಮತ್ತು ಸಕಾರಾತ್ಮಕ ಮನೋಭಾವಕ್ಕಾಗಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಪ್ರಶಸ್ತಿಯ ಸಂಘಟಕ ಸಂಸ್ಥೆಯಾದ ಜರ್ಮನ್ ಬುಕ್ ಟ್ರೇಡ್ ಹೇಳಿದೆ. ₹22.41 ಲಕ್ಷ ಮೊತ್ತದ ಪ್ರಶಸ್ತಿಯನ್ನು ಫ್ರಾಂಕ್ ಫರ್ಟ್‌ನಲ್ಲಿ ಅಕ್ಟೋಬರ್ 22ರಂದು ರಶ್ದಿ ಸ್ವೀಕರಿಸಲಿದ್ದಾರೆ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

‘ಕಾನೂನು ಸುವ್ಯವಸ್ಥೆ ಸುಧಾರಣೆ ತುರ್ತು ಅಗತ್ಯ’

ನವದೆಹಲಿ (ಪಿಟಿಐ): ರಾಜಧಾನಿ ದೆಹಲಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ರಕ್ಷಣೆಗೆ ತುರ್ತು ಗಮನಹರಿಸಬೇಕಾದ ಅಗತ್ಯವಿದೆ ಎಂದು ದೆಹಲಿ ಮಹಿಳಾ ಆಯೋಗದ (ಡಿಸಿಡಬ್ಲ್ಯು) ಮುಖ್ಯಸ್ಥೆ ಸ್ವಾತಿ ಮಲಿವಾಲ್ ಹೇಳಿದ್ದಾರೆ.

ಕಾನೂನು ಸ್ಥಿತಿ ಹದಗೆಟ್ಟಿದೆ ಎಂಬುದಕ್ಕೆ ಈಚೆಗೆ ನಡೆದ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಮತ್ತು ಇಬ್ಬರು ಸಹೋದರಿಯರ ಕೊಲೆ ಹೊಸ ನಿದರ್ಶನ ಎಂದು ಅವರು ಹೇಳಿದ್ದಾರೆ.

ಗೆಳತಿಗೆ ಕಿರುಕುಳ ನೀಡುತ್ತಿದ್ದಕ್ಕೆ ಆಕ್ಷೇಪಿಸಿದರು ಎಂಬ ಕಾರಣಕ್ಕೆ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಯನ್ನು ಆರ್ಯಭಟ ಕಾಲೇಜು ಬಳಿ ಇರಿದು ಕೊಲ್ಲಲಾಗಿತ್ತು. ಇನ್ನೊಂದು ಪ್ರಕರಣದಲ್ಲಿ ಹಣಕಾಸು ವಿವಾದ ಸಂಬಂಧ ಇಬ್ಬರು ಮಹಿಳೆಯರನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು.

‘ದೆಹಲಿಯಲ್ಲಿ ಕ್ರಿಮಿನಲ್‌ಗಳಿಗೆ ಕಾನೂನಿನ ಭೀತಿಯೇ ಇಲ್ಲವಾಗಿದೆ. ನಾವು ಪಾರಾಗಬಹುದು ಎಂಬ ಭಾವನೆ ಮೂಡಿದೆ’ ಎಂದು ಟ್ವೀಟ್ ಮಾಡಿದ್ದಾರೆ. ಇದರೊಂದಿಗೆ ಅಪರಾಧ ಕೃತ್ಯಗಳಿಗೆ ಸಂಬಂಧಿಸಿ ಮಾಧ್ಯಮದ 2 ವರದಿಗಳನ್ನು ಹಂಚಿಕೊಂಡಿದ್ದಾರೆ.

ಯೋಧನಿಗೆ ಗಾಯ: ಹಿಂಸಾಚಾರಕ್ಕೆ ಪರಿಹಾರ ಹುಡುಕಲು ಮೋದಿಗೆ ಮನಸ್ಸಿಲ್ಲ– ಕಾಂಗ್ರೆಸ್

ಮಣಿಪುರ: ನಿಲ್ಲದ ಗುಂಡಿನ ದಾಳಿ

ಇಂಫಾಲ್/ನವದೆಹಲಿ (ಪಿಟಿಐ): ಮಣಿಪುರದ ಪಶ್ಚಿಮ ಇಂಫಾಲ್ ಜಿಲ್ಲೆಯಲ್ಲಿ ಭಾನುವಾರ ಮಧ್ಯರಾತ್ರಿಯಿಂದ ಮುಂಜಾನೆ ಮೂರು ಗಂಟೆವರೆಗೂ ಅಪರಿಚಿತ ದುಷ್ಕರ್ಮಿಗಳು ಮತ್ತು ಸೇನೆಯ ನಡುವೆ ಗುಂಡಿನ ದಾಳಿ ನಡೆದಿದೆ.

ಚಿಂಗ್ಮಾಂಗ್ ಗ್ರಾಮದಲ್ಲಿ ಅಪರಿಚಿತನೊಬ್ಬ ಮೂರು ಮನೆಗಳಿಗೆ ಬೆಂಕಿ ಹಚ್ಚಿದ್ದಾನೆ. ಇದಾದ ಕೆಲವು ಗಂಟೆಗಳ ಬಳಿಕ ಕಾಂಟ್ ಸಬಾಲ್ ಗ್ರಾಮದಲ್ಲಿ ಕಿಡಿಗೇಡಿಗಳು ಅಪ್ರಚೋದಿತ ಗುಂಡಿನ ದಾಳಿ ನಡೆಸಿದ್ದಾರೆ. ಇದಕ್ಕೆ ಪ್ರತಿಯಾಗಿ ಯೋಧರು ದಾಳಿ ನಡೆಸಿದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಚಿಂಗ್ಮಾಂಗ್ ಪ್ರದೇಶಕ್ಕೆ ಹೊಂದಿಕೊಂಡಿರುವ ಕಾಂಟ್ ಸಬಾಲ್ ಹಳ್ಳಿಯಲ್ಲಿ ಶಸ್ತ್ರಸಜ್ಜಿತ ದುಷ್ಕರ್ಮಿಯೊಬ್ಬ ನಡೆಸಿದ ಅಪ್ರಚೋದಿತ ಗುಂಡಿನ ದಾಳಿಗೆ ಯೋಧರೊಬ್ಬರು ಗಾಯಗೊಂಡಿದ್ದಾರೆ. ಎಡಗಾಲಿಗೆ ತೀವ್ರ ಗಾಯವಾಗಿರುವ ಅವರನ್ನು ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಆರೋಗ್ಯ ಸ್ಥಿರವಾಗಿದೆ. ಯೋಧರು ಪ್ರತಿ ದಾಳಿ ನಡೆಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ ಎಂದು ತಿಳಿಸಿದ್ದಾರೆ.

> ಶಸ್ತ್ರಾಸ್ತ್ರಗಳನ್ನು ಹೊಂದಿರುವ ಮೈತೇಯಿ ಜನರು ದಾಳಿ ನಿಲ್ಲಿಸಿ ಶಾಂತಿ ನೆಲೆಸಲು ಸಹಕರಿಸಬೇಕು. ಇಲ್ಲವಾದರೆ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು
>
> **ಎನ್. ಬಿರೇನ್ ಸಿಂಗ್**, ಮುಖ್ಯಮಂತ್ರಿ, ಮಣಿಪುರ

ಮೈತೇಯಿ ಮತ್ತು ಕುಕಿ ಸಮುದಾಯದ ನಡುವೆ ಹಿಂಸಾಚಾರ ಆರಂಭವಾಗಿ ಒಂದೂವರೆ ತಿಂಗಳು ಉರುಳಿದ್ದು, ಮುಂಜಾಗ್ರತೆಯಾಗಿ 11 ಜಿಲ್ಲೆಗಳಲ್ಲಿ ಕರ್ಫ್ಯೂ ಮುಂದುವರಿಸಲಾಗಿದೆ. ವದಂತಿಗಳು ಹರಡುವುದನ್ನು ತಡೆಯಲು ಇಂಟರ್‌ನೆಟ್ ಸೇವೆಗೆ ನಿರ್ಬಂಧ ಹೇರಲಾಗಿದೆ.

ಮೋದಿ ವಿರುದ್ಧ ಕಾಂಗ್ರೆಸ್ ಟೀಕೆ: ನರೇಂದ್ರ ಮೋದಿ ಅವರ ಮೌನವನ್ನು ಸೋಮವಾರವೂ ಟೀಕಿಸಿರುವ ಕಾಂಗ್ರೆಸ್, ‘ಪ್ರತಿದಿನವೂ ನಿರ್ಲಕ್ಷ್ಯ ಮುಂದುವರಿಸುತ್ತಿರುವ ಪ್ರಧಾನಿ ಮತ್ತು ಬಿಜೆಪಿಗೆ ಹಿಂಸಾಚಾರಕ್ಕೆ ಪರಿಹಾರ ಹುಡುಕುವ ಮನಸ್ಸಿಲ್ಲ. ಮತ್ತಷ್ಟು ದಿನಗಳ ಕಾಲ ಸಂಘರ್ಷ ಮುಂದುವರಿಯಲಿ ಎಂಬ ಆಸೆ ಇದ್ದಂತಿದೆ’ ಎಂದು ವ್ಯಂಗ್ಯವಾಡಿದೆ.

‘ಕಣಿವೆ ರಾಜ್ಯ ಹೊತ್ತಿ ಉರಿಯುತ್ತಿದ್ದರೂ ಬಿಕ್ಕಟ್ಟಿನ ಬಗ್ಗೆ ಒಂದು ಪದವನ್ನೂ ಮಾತನಾಡದೆ ವಿದೇಶಕ್ಕೆ ಹಾರಲು ಮೋದಿ ಸಜ್ಜಾಗಿದ್ದಾರೆ’ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಟ್ವೀಟ್ ಮೂಲಕ ಟೀಕಿಸಿದ್ದಾರೆ.

‘ಸಂಘರ್ಷದಿಂದ ನೂರಾರು ಜನರು ಮೃತಪಟ್ಟಿದ್ದು, ಸಾವಿರಾರು ನಾಗರಿಕರು ನಿರಾಶ್ರಿತರಾಗಿದ್ದಾರೆ. ಚರ್ಚ್‌ಗಳು, ಪ್ರಾರ್ಥನಾ ಮಂದಿರಗಳು ಧ್ವಂಸವಾಗಿವೆ. ಮಣಿಪುರ ಸರ್ಕಾರ ಸಮಸ್ಯೆಯಲ್ಲಿ ಸಿಲುಕಿದೆ. ಆದರೂ, ಪರಿಹಾರ ಸಿಕ್ಕಿಲ್ಲ. ಈಗ ಹಿಂಸಾಚಾರವು ಮಿಜೋರಾಂಗೂ ಹಬ್ಬುವ ಹಂತ ತಲುಪಿದೆ’ ಎಂದಿದ್ದಾರೆ.

‘ವಿವಿಧ ಪಕ್ಷಗಳ ನಾಯಕರು ಪ್ರಧಾನಿ ಅವರ ಮಧ್ಯಸ್ಥಿಕೆಯನ್ನು ಬಯಸುತ್ತಿದ್ದಾರೆ. ಆದರೆ, ಇದಕ್ಕೆ ಅವರ ಸ್ಪಂದನೆ ಸಿಕ್ಕಿಲ್ಲ. ಸ್ವಯಂಘೋಷಿತ ವಿಶ್ವಗುರು ಮಣಿಪುರ ಜನರ ಮನದ ಮಾತನ್ನು ಯಾವಾಗ ಕೇಳುತ್ತಾರೆ ಎಂಬುದು ಗೊತ್ತಿಲ್ಲ’ ಎಂದು ಹೇಳಿದ್ದಾರೆ.

‘ಶಾಂತಿ ಕಾಪಾಡುವಂತೆ ಮೋದಿ ಯಾವಾಗ ಮನವಿ ಮಾಡುತ್ತಾರೆ ಎನ್ನುವುದು ಗೊತ್ತಿಲ್ಲ. ಶಾಂತಿ ಪುನರ್ ಸ್ಥಾಪನೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಸೋತಿದ್ದಾರೆ. ಈ ಇಬ್ಬರ ಹೊಣೆಗಾರಿಕೆಯನ್ನು ಮೋದಿ ಪ್ರಶ್ನಿಸುತ್ತಾರೆಯೇ’ ಎಂದು ಹೇಳಿದ್ದಾರೆ.



ಹಿಂಸಾಚಾರದಿಂದ ನಲುಗಿರುವ ಮಣಿಪುರದ ಬಿಷ್ಣುಪುರ ಜಿಲ್ಲೆಯ ಇರೆಂಗ್ಬಾಮ್ ಗ್ರಾಮದಲ್ಲಿ ಸೋಮವಾರ ಯೋಧರು ಗಸ್ತು ನಡೆಸಿದರು

ಸಮಾನ ಮನಸ್ಕ ಪಕ್ಷಗಳ ಚರ್ಚೆ

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮಧ್ಯಪ್ರವೇಶಿಸಬೇಕೆಂದು ಕಾಂಗ್ರೆಸ್ ನೇತೃತ್ವದ ಮಣಿಪುರದ ಸಮಾನ ಮನಸ್ಕ 10 ರಾಜಕೀಯ ಪಕ್ಷಗಳ ನಾಯಕರು ಆಗ್ರಹಿಸಿದ್ದಾರೆ.

ಸೋಮವಾರ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರ ದೆಹಲಿ ನಿವಾಸದಲ್ಲಿ ಸಭೆ ಸೇರಿ ಕಣಿವೆ ರಾಜ್ಯದ ಸದ್ಯದ ಸ್ಥಿತಿಗತಿ ಕುರಿತು ಸುದೀರ್ಘವಾಗಿ ಮಾತುಕತೆ ನಡೆಸಿದರು. ಸರ್ವಪಕ್ಷ ನಿಯೋಗದ ಮೂಲಕ ಪ್ರಧಾನಿ ಅವರನ್ನು ಭೇಟಿ ಮಾಡುವುದಕ್ಕೆ ಸಂಬಂಧಿಸಿದಂತೆಯೂ ಚರ್ಚಿಸಿದರು.

ಜಮ್ಮು–ಕಾಶ್ಮೀರ: 5 ವರ್ಷ ಪೂರೈಸಿದ ಕೇಂದ್ರದ ಆಡಳಿತ

ಶ್ರೀನಗರ (ಪಿಟಿಐ): ಜಮ್ಮು– ಕಾಶ್ಮೀರವು ಚುನಾಯಿತ ಸರ್ಕಾರವಿಲ್ಲದೇ, ಕೇಂದ್ರದ ಆಡಳಿತದಲ್ಲಿ ಸೋಮವಾರ ಐದು ವರ್ಷಗಳನ್ನು ಪೂರೈಸಿದೆ.

ಕಣಿವೆ ಪ್ರದೇಶದಲ್ಲಿ ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುವಲ್ಲಿ ಆಗುತ್ತಿರುವ ವಿಳಂಬದ ಕುರಿತು ಮುಖ್ಯವಾಹಿನಿಯ ರಾಜಕೀಯ ಪಕ್ಷಗಳಾದ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಪಿ) ಮತ್ತು ಪೀಪಲ್ಸ್ ಡೆಮಾಕ್ರಟಿಕ್ ಪಕ್ಷಗಳು (ಪಿಡಿಪಿ) ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿವೆ.

‘ಪ್ರಜಾಪ್ರಭುತ್ವವು ನಮ್ಮ ನರನಾಡಿಗಳಲ್ಲಿ, ನಮ್ಮ ಸಂಸ್ಕೃತಿಯಲ್ಲಿದೆ. ‘ಭಾರತವು ಪ್ರಜಾಪ್ರಭುತ್ವದ ತಾಯಿ’, ‘ಭಾರತ ಪ್ರಜಾಪ್ರಭುತ್ವದ ದೇವಾಲಯ’ ಈ ಪದಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮುದಾಯದ ಕುರಿತು ಉತ್ತಮ ಧ್ವನಿಯನ್ನು ಹೊರಡಿಸುತ್ತವೆ. ಆದರೆ, ಜಮ್ಮು–ಕಾಶ್ಮೀರ ಎಲ್ಲಿ ಆರಂಭವಾಗುತ್ತದೆಯೋ ಅಲ್ಲಿ ಪ್ರಜಾಪ್ರಭುತ್ವ ಕೊನೆಗೊಳ್ಳುತ್ತದೆ’ ಎಂದು ನ್ಯಾಷನಲ್ ಕಾನ್ಫರೆನ್ಸ್‌ನ (ಎನ್‌ಪಿ) ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಸೋಮವಾರ ವ್ಯಂಗ್ಯವಾಗಿ ಟ್ವೀಟ್ ಮಾಡಿದ್ದಾರೆ.

‘ಚುನಾಯಿತ ಸರ್ಕಾರವಿಲ್ಲದೇ ಐದು ವರ್ಷ ಪೂರ್ಣಗೊಂಡಿರುವುದಕ್ಕೆ ಇಡೀ ರಾಷ್ಟ್ರವೇ ನಾಚಿಕೆಯಿಂದ ತಲೆತಗ್ಗಿಸಿಕೊಳ್ಳಬೇಕಿದೆ’ ಎಂದು ಪಿಡಿಪಿಯ ವಕ್ತಾರ ಮೋಹಿತ್ ಭಾನ್ ಹೇಳಿದ್ದಾರೆ.

‘ಪ್ರಜಾಪ್ರಭುತ್ವದ ತಾಯಿ’ ಎಂದು ಕರೆದುಕೊಳ್ಳುವುದಕ್ಕಾಗಿ ಇಡೀ ರಾಷ್ಟ್ರ ಮತ್ತು ಅದರ ನಾಯಕತ್ವವು ನಾಚಿಕೆಯಿಂದ ತಲೆ ತಗ್ಗಿಸಬೇಕಾಗಿದೆ. ಜಮ್ಮು ಮತ್ತು ಕಾಶ್ಮೀರವು 5 ವರ್ಷಗಳ ಕಾಲ ಕೇಂದ್ರದ ಆಡಳಿತದಲ್ಲಿ ಸೊರಗಿದೆ. ಜನರ ಹಕ್ಕುಗಳು ಮತ್ತು ಪ್ರಾತಿನಿಧ್ಯವನ್ನು ನಿರ್ಲಕ್ಷಿಸಲಾಗಿದೆ’ ಎಂದೂ ಅವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಈ ನಡುವೆ, ಬಿಜೆಪಿ ಸೇರಿದಂತೆ ಇತರ ರಾಜಕೀಯ ಪಕ್ಷಗಳು ಜಮ್ಮು–ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆಗಳನ್ನು ನಡೆಸಬೇಕೆಂದು ಒತ್ತಾಯಿಸುತ್ತಿವೆ. ಜಮ್ಮು ಮತ್ತು ಕಾಶ್ಮೀರದಲ್ಲಿ 2014ರಲ್ಲಿ ಕೊನೆಯ ಬಾರಿಗೆ ವಿಧಾನಸಭಾ ಚುನಾವಣೆ ನಡೆದಿತ್ತು. 2019ರ ಆಗಸ್ಟ್ 5ರಂದು ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡುವ ಆರ್ಟಿಕಲ್ 370 ಅನ್ನು ಕೇಂದ್ರ ಸರ್ಕಾರ ಹಿಂಪಡೆದಿತ್ತು. ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ 2018ರ ಜೂನ್ 19ರಂದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಆದಿಪುರುಷ್: 3 ದಿನಗಳಲ್ಲಿ ₹340 ಕೋಟಿ ಗಳಿಕೆ

ಮುಂಬೈ (ಪಿಟಿಐ): ಓಂ ರಾವುತ್ ನಿರ್ದೇಶನದ ‘ಆದಿಪುರುಷ್’ ಸಿನಿಮಾವು ಬಿಡುಗಡೆಯಾದ ಮೂರು ದಿನಗಳಲ್ಲಿ ಜಾಗತಿಕ ಬಾಕ್ಸ್ ಆಫೀಸ್‌ನಲ್ಲಿ ₹340 ಕೋಟಿ ಗಳಿಸಿದೆ ಎಂದು ತಯಾರಕರು ಸೋಮವಾರ ತಿಳಿಸಿದ್ದಾರೆ.

‘ಚಿತ್ರವು ಎಲ್ಲ ಪೀಳಿಗೆಯ ವೀಕ್ಷಕರನ್ನು ಸೆಳೆದಿದೆ. ಬಾಕ್ಸ್ ಆಫೀಸ್‌ನಲ್ಲಿ ₹340 ಕೋಟಿ ಗಳಿಸಿದೆ. ಜೈ ಶ್ರೀರಾಂ’ ಎಂದು ನಿರ್ಮಾಣ ಸಂಸ್ಥೆ ಟಿ–ಸೀರೀಸ್ ಟ್ವಿಟರ್‌ನಲ್ಲಿ ಹೇಳಿಕೆಯನ್ನು ಬಿಡುಗಡೆ ಮಾಡಿದೆ.

‘ನೋಯಿಸುವ ಹಕ್ಕಿಲ್ಲ’ (ಮುಂಬೈ ವರದಿ): ‘ಆದಿಪುರುಷ್’ ಚಿತ್ರದ ವಿವಾದದ ಕುರಿತು ಸೋಮವಾರ ಪ್ರತಿಕ್ರಿಯಿಸಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ‘ಜನರ ಭಾವನೆಗಳನ್ನು ನೋಯಿಸುವ ಹಕ್ಕು ಯಾರಿಗೂ ಇಲ್ಲ. ಸಿಬಿಎಫ್‌ಸಿಯು ಈ ವಿಷಯದ ಕುರಿತು ನಿರ್ಧಾರ ತೆಗೆದುಕೊಂಡಿದೆ. ಅದು ಅವರ ಕೆಲಸ’ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚಿತ್ರದ ನಿರ್ದೇಶಕರು ಸಿನಿಮಾದಲ್ಲಿ ಕೆಲ ಬದಲಾವಣೆಗಳನ್ನು ಮಾಡಲು ಒಪ್ಪಿಕೊಂಡಿದ್ದಾರೆ’ ಎಂದಿದ್ದಾರೆ.

ಬಿಹಾರ: ನಿತೀಶ್ ಸರ್ಕಾರಕ್ಕೆ ಎಚ್‌ಎಎಂ ಬೆಂಬಲ ವಾಪಸು

ಪಟ್ನಾ (ಪಿಟಿಐ): ಬಿಹಾರದ ನಿತೀಶ್ ಕುಮಾರ್ ನೇತೃತ್ವದ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಮಾಜಿ ಮುಖ್ಯಮಂತ್ರಿ ಜಿತನ್ ರಾಮ್ ಮಾಂಝಿ ಅವರ ಹಿಂದೂಸ್ತಾನಿ ಆವಾಂ ಮೋರ್ಚಾ (ಎಚ್‌ಎಎಂ) ಪಕ್ಷವು ಸೋಮವಾರ ಹಿಂಪಡೆದಿದೆ.

ಮಾಂಝಿ ಅವರ ಪುತ್ರ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಸಂತೋಷ್ ಸುಮನ್, ಬೆಂಬಲ ವಾಪಸು ಪಡೆದಿರುವ ಪತ್ರವನ್ನು ನೀಡಲು ರಾಜ್ಯಪಾಲರ ಭೇಟಿಗೆ ಸಮಯ ಕೋರಲಾಗಿದೆ ಎಂದು ತಿಳಿಸಿದರು.

ಸುಮನ್ ಕಳೆದ ವಾರವಷ್ಟೇ ಸಂಪುಟಕ್ಕೆ ರಾಜೀನಾಮೆ ಸಲ್ಲಿಸಿದ್ದರು. ‘ಜೆಡಿಯು ಜೊತೆಗೆ ಪಕ್ಷವನ್ನು ವಿಲೀನಗೊಳಿಸುವಂತೆ ನಿತೀಶ್ ಕುಮಾರ್ ಒತ್ತಡ ಹೇರುತ್ತಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ಆರೋಪಿಸಿದರು.

ಭವಿಷ್ಯದ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಇದಕ್ಕೆ ಮೊದಲು ನಡೆದಿದ್ದ ಪಕ್ಷದ ರಾಷ್ಟ್ರೀಯ ಕಾರ್ಯಕಾರಣಿಯು ಸುಮನ್ ಅವರಿಗೆ ನೀಡಿತ್ತು.

ಸುಮನ್ ಅವರು ದೆಹಲಿಗೆ ಭೇಟಿ ನೀಡಲಿದ್ದು, ಹೊಸ ಆಯ್ಕೆ ಸಾಧ್ಯತೆಗಳನ್ನು ಗುರುತಿಸುವುದು ಇದರ ಉದ್ದೇಶ ಎನ್ನಲಾಗಿದೆ. ಎನ್‌ಡಿಎಯಿಂದ ಮೈತ್ರಿ ಸೇರಲು ಆಹ್ವಾನ ಬಂದರೆ ಒಪ್ಪಿಕೊಳ್ಳಲು ತೀರ್ಮಾನಿಸಿದ್ದಾರೆ ಎಂದು ಹೇಳಲಾಗಿದೆ.

243 ಸದಸ್ಯ ಬಲದ ವಿಧಾನಸಭೆಯಲ್ಲಿ ಜೆಡಿಯು ನೇತೃತ್ವದ ಮೈತ್ರಿಕೂಟ 160 ಸದಸ್ಯರನ್ನು ಹೊಂದಿದೆ. ಮೈತ್ರಿಯಲ್ಲಿ ಆರ್‌ಜೆಡಿ, ಕಾಂಗ್ರೆಸ್ ಮತ್ತು ಮೂರು ಎಡಪಕ್ಷಗಳು ಸೇರಿವೆ. ಮೈತ್ರಿ ಭಾಗವಾಗಿದ್ದ ಎಚ್‌ಎಎಂ ಒಟ್ಟು ನಾಲ್ವರು ಸದಸ್ಯರನ್ನು ಹೊಂದಿದೆ.

ನಾಯಿಯಂತೆ ಕೂರಿಸಿ ಹಲ್ಲೆ: ಆರೋಪಿಗಳ ಮನೆ ಧ್ವಂಸಕ್ಕೆ ಆದೇಶ

ಭೋಪಾಲ್: ವ್ಯಕ್ತಿಯೊಬ್ಬರನ್ನು ನಾಯಿಯಂತೆ ಕಟ್ಟಿಹಾಕಿ ಬೊಗಳಲು ಒತ್ತಾಯಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮುಸ್ಲಿಂ ಸಮುದಾಯದ ಮೂವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ (ಎನ್‌ಎಸ್‌ಎ) ಪ್ರಕರಣ ದಾಖಲಿಸಲಾಗಿದೆ. ತಮ್ಮನ್ನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳುವಂತ ಒತ್ತಾಯಿಸಿ ಥಳಿಸಿದರು ಎಂದು ವಿಜಯ್ ರಾಮ್‌ಚಾಂದನಿ ದೂರಿನಲ್ಲಿ ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ, ಅವರ ಮನೆಗಳನ್ನು ನೆಲಸಮ ಮಾಡುವಂತೆ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಆದೇಶಿಸಿದ್ದಾರೆ.

ಗುಜರಾತ್: ಭಾರಿ ಮಳೆ, ಹಲವೆಡೆ ಪ್ರವಾಹದ ಭೀತಿ • ಚೆನ್ನೈನಲ್ಲಿ ಶಾಲೆಗಳಿಗೆ ರಜೆ

ಚಂಡಮಾರುತದ ನಂತರ ವಾಯುಭಾರ ಕುಸಿತ

ಅಹಮದಾಬಾದ್ (ಪಿಟಿಐ): ಬಿಪೊರ್‌ಜಾಯ್ ಚಂಡಮಾರುತದ ನಂತರದ ವಾಯುಭಾರ ಕುಸಿತ ಉಂಟಾಗಿದ್ದು ಗುಜರಾತ್‌ನ ಉತ್ತರ ಭಾಗದಲ್ಲಿ ಕಳೆದ 24 ಗಂಟೆಗಳಲ್ಲಿ ಭಾರಿ ಮಳೆ ಸುರಿದಿದೆ. ಬನಾಸ್ಕಾಂತಾ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ದಕ್ಷಿಣ ರಾಜಸ್ಥಾನದ ಕೇಂದ್ರ ಭಾಗ ಮತ್ತು ಸುತ್ತಲಿನ ಪ್ರದೇಶಗಳಲ್ಲೂ ಇದೇ ಅವಧಿಯಲ್ಲಿ ಅತ್ಯಧಿಕ ಮಳೆಯಾಗಿದೆ. ಮುಂದಿನ ಎರಡು ದಿನಗಳಲ್ಲಿ ಸೌರಾಷ್ಟ್ರ ಪ್ರದೇಶ ಸೇರಿ ಹಲವಾರು ಭಾಗಗಳಲ್ಲಿ ಸಾಧಾರಣ ಮಳೆಯಾಗುವ ನಿರೀಕ್ಷೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಪ್ರಕಟಣೆಯೊಂದರಲ್ಲಿ ತಿಳಿಸಿದೆ.

ಬನಾಸ್ಕಾಂತಾ ಜಿಲ್ಲೆಯ ಗ್ರಾಮವೊಂದರಲ್ಲಿ 20 ಜಾನುವಾರುಗಳು ನೀರಿನಲ್ಲಿ ಕೊಚ್ಚಿಹೋಗಿವೆ. ರಕ್ಷಣಾಕಾರ್ಯದಲ್ಲಿ ತೊಡಗಿರುವ ಸ್ಥಳೀಯ ಆಡಳಿತಕ್ಕೆ ನೆರವಾಗಲು ಹಿರಿಯ ಅಧಿಕಾರಿಗಳು ಜಿಲ್ಲೆಯ ಧನೇರಾ ಪಟ್ಟಣಕ್ಕೆ ತೆರಳಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ 24 ಗಂಟೆಗಳಲ್ಲಿ ದಾಂತಾ ತಾಲೂಕಿನಲ್ಲಿ 126 ಮಿ.ಮೀ ಮಳೆ ಆಗಿದೆ. ಅಮೀರ್‌ಗಢದಲ್ಲಿ 86 ಮಿ.ಮೀ ಮಳೆಯಾಗಿದೆ ಎಂದು ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ ತಿಳಿಸಿದೆ.



ಚೆನ್ನೈನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಜಲಾವೃತಗೊಂಡಿರುವ ರಸ್ತೆಯಲ್ಲಿ ವಾಹನ ಸವಾರರು ಸಂಚರಿಸಿದರು —ಎಎಫ್‌ಪಿ ಚಿತ್ರ

ಚೆನ್ನೈನಲ್ಲಿ ಭಾರಿ ಮಳೆ– ಶಾಲೆಗಳಿಗೆ ರಜೆ ಘೋಷಣೆ (ಚೆನ್ನೈ) (ಪಿಟಿಐ): ತಮಿಳುನಾಡು ರಾಜಧಾನಿ ಚೆನ್ನೈ ಮತ್ತು ಅದರ ಉಪನಗರಗಳಲ್ಲಿ ಇಡೀ ರಾತ್ರಿ ಸುರಿದ ಧಾರಾಕಾರ ಮಳೆಯ ಕಾರಣದಿಂದ ಅಲ್ಲಿಯ ಸ್ಥಳೀಯ ಆಡಳಿತವು ಸೋಮವಾರ ಶಾಲೆಗಳಿಗೆ ರಜೆ ಘೋಷಿಸಿದೆ.

ಚೆನ್ನೈ ವಿಮಾನ ನಿಲ್ದಾಣದಲ್ಲಿ ಅತಿಹೆಚ್ಚು, ಅಂದರೆ 16 ಸೆಂ.ಮೀ ಮಳೆ ಸುರಿದಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ಪ್ರಾದೇಶಿಕ ಹವಾಮಾನ ಕೇಂದ್ರ ತಿಳಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಮಳೆ ಮತ್ತು ವಾಹನ ದಟ್ಟಣೆ ನಡುವೆಯೇ ಜನರು ಸೋಮವಾರ ಕಚೇರಿಗಳಿಗೆ ತೆರಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಅಂತರರಾಷ್ಟ್ರೀಯ ವಿಮಾನಗಳ ಹಾರಾಟಕ್ಕೂ ಮಳೆಯಿಂದ ಅಡಚಣೆ ಉಂಟಾಗಿದೆ. ಚೆನ್ನೈ ವಿಮಾನ ನಿಲ್ದಾಣದಲ್ಲಿ ನಿಲುಗಡೆಯಾಗಬೇಕಿದ್ದ ಸುಮಾರು ಹತ್ತು ಅಂತರರಾಷ್ಟ್ರೀಯ ವಿಮಾನಗಳನ್ನು ಬೆಂಗಳೂರಿನ ಕಡೆ ತಿರುಗಿಸಲಾಯಿತು. ಪರಿಸ್ಥಿತಿ ಸುಧಾರಿಸುವವರೆಗೆ ಚೆನ್ನೈನಿಂದ ಹೊರಡಬೇಕಿದ್ದ ವಿಮಾನಗಳ ಹಾರಾಟವನ್ನೂ ತಡೆಹಿಡಿಯಲಾಯಿತು. ರೈಲುಗಳ ಸಂಚಾರವನ್ನೂ ಕೆಲಕಾಲ ಸ್ಥಗಿತಗೊಳಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈವರೆಗೂ ಯಾವುದೇ ಸಾವು–ನೋವು, ಆಸ್ತಿ ಹಾನಿಯ ವರದಿಯಾಗಿಲ್ಲ. ಚೆನ್ನೈ ಮಹಾನಗರ ಪಾಲಿಕೆಗೆ ನೆರವಾಗಲು ರಾಜ್ಯ ವಿಪತ್ತು ನಿರ್ವಹಣಾ ಪಡೆ ಸಿಬ್ಬಂದಿಯನ್ನು ಚೆನ್ನೈಗೆ ಕಳಿಸಲಾಗಿದೆ. 260 ಪಂಪ್‌ಸೆಟ್‌ಗಳನ್ನು ಬಳಸಿ ಮಳೆನೀರನ್ನು ಹೊರಹಾಕಲಾಗುತ್ತಿದೆ ಎಂದು ರಾಜ್ಯ ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಕೆಕೆಎಸ್‌ಎಸ್‌ಆರ್ ರಾಮಚಂದ್ರನ್ ಅವರು ತಿಳಿಸಿದ್ದಾರೆ.

ಅಸ್ಸಾಂ: ಮುಂದುವರಿದ ಪ್ರವಾಹ ಪರಿಸ್ಥಿತಿ, 142 ಗ್ರಾಮಗಳು ಜಲಾವೃತ

ಗುವಾಹಟಿ (ಪಿಟಿಐ): ಅಸ್ಸಾಂನ ಹಲವು ಭಾಗಗಳಲ್ಲಿ ಭಾನುವಾರ ಇಡೀ ರಾತ್ರಿ ಭಾರಿ ಮಳೆ ಸುರಿದ ಪರಿಣಾಮ ಸೋಮವಾರವೂ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಕೆಲವು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿಯಲ್ಲಿ ಸ್ವಲ್ಪಮಟ್ಟಿಗೆ ಚೇತರಿಕೆ ಕಂಡುಬಂದಿದೆ.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಎಎಸ್‌ಡಿಎಂಎ) ವರದಿ ಪ್ರಕಾರ, ರಾಜ್ಯದ 33,400ಕ್ಕೂ ಹೆಚ್ಚು ಜನರು ಪ್ರವಾಹದಿಂದ ಭಾದಿತರಾಗಿದ್ದಾರೆ. 142 ಗ್ರಾಮಗಳು ನೀರಿನಲ್ಲಿ ಮುಳುಗಿವೆ ಮತ್ತು 1,511 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ.

ಗುರುವಾರದವರೆಗೂ ಅಸ್ಸಾಂನ ಹಲವು ಜಿಲ್ಲೆಗಳಲ್ಲಿ ಅತ್ಯಧಿಕ ಮಳೆಯಾಗುವ ಸಂಭವವಿದೆ ಎಂದು ಮುನ್ಸೂಚನೆ ನೀಡಿರುವ ಭಾರತೀಯ ಹವಾಮಾನ ಇಲಾಖೆಯು (ಐಎಂಡಿ), ರಾಜ್ಯದ ಹಲವು ಜಿಲ್ಲೆಗಳಲ್ಲಿ ‘ರೆಡ್ ಅಲರ್ಟ್’ ಘೋಷಿಸಿದೆ.

ಕೊಕ್ರಜಾರ್, ಚಿರಾಂಗ್, ಬಾಕ್ಸ, ಬಾರ್ಪೇಟ ಮತ್ತು ಬೋಂಗಾಗಾಂವ್ ಜಿಲ್ಲೆಗಳಲ್ಲಿ ಈ ಅವಧಿಯಲ್ಲಿ ಅತ್ಯಧಿಕ ಮಳೆಯಾಗಲಿದೆ ಎಂದು ಐಎಂಡಿಯ ಪ್ರಾದೇಶಿಕ ಹವಾಮಾನ ಕೇಂದ್ರವು ಮುನ್ಸೂಚನೆ ನೀಡಿದೆ. ದಿಮಾ ಹಸಾವೊ ಮತ್ತು ಕರೀಂಗಂಜ್ ನಗರಗಳಲ್ಲಿ ಭೂಕುಸಿತ ಸಂಭವಿಸಿರುವ ವರದಿಯಾಗಿದೆ.

ವಿಮಾನದಲ್ಲಿ ಗಲಭೆ: ಕೇರಳದ ವ್ಯಕ್ತಿ ಬಂಧನ

ಕೊಚ್ಚಿ (ಪಿಟಿಐ): ಅಬುಧಾಬಿಯಿಂದ ಹೊರಟಿದ್ದ ವಿಮಾನದಲ್ಲಿ ಗಲಭೆ ಸೃಷ್ಟಿಸಿದ್ದಕ್ಕಾಗಿ ಕೇರಳದ 51 ವರ್ಷದ ಬಿಜಾನ್ ಜಾಕೋಬ್ ಎಂಬುವವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

‘ಏರ್ ಇಂಡಿಯಾ ವಿಮಾನದಲ್ಲಿ ಕ್ಷುಲ್ಲಕ ಕಾರಣಕ್ಕೆ ಸಹಪ್ರಯಾಣಿಕ ಹಾಗೂ ಸಿಬ್ಬಂದಿ ಜೊತೆ ಗಲಾಟೆ ಮಾಡಿದ್ದಾರೆ ಎಂದು ಸಿಬ್ಬಂದಿ ನೀಡಿದ ದೂರಿನ ಮೇಲೆ ಆತನನ್ನು ಸೋಮವಾರ ಬೆಳಿಗ್ಗೆ ಕೊಚ್ಚಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ. ಆತ ಮದ್ಯದ ಅಮಲಿನಲ್ಲಿದ್ದ ಎಂಬ ಶಂಕೆ ಇದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ನೆಡುಂಬಸ್ಸೆರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಜಾಮೀನು ಅಡಿಯಲ್ಲಿ ಆತನನ್ನು ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಿಡಿಗೇಡಿಗಳಿಂದ ರಾಜ್ಯದ ಶಾಂತಿ ಕದಡಲು ಯತ್ನ’

ಕೋಲ್ಕತ್ತ (ಪಿಟಿಐ): ರಾಜ್ಯದ ಶಾಂತಿ ಮತ್ತು ಸೌಹಾರ್ದವನ್ನು ಕದಡಲು ಕೆಲವು ಕಿಡಿಗೇಡಿಗಳು ಪ್ರಯತ್ನಿಸುತ್ತಿದ್ದಾರೆ ಎಂದು ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ್ ಸೋಮವಾರ ಹೇಳಿದ್ದಾರೆ.



ಸಿ.ವಿ. ಆನಂದ್

ಅನೀರೀಕ್ಷಿತ ಸನ್ನಿವೇಶಗಳು ಅನಿರೀಕ್ಷಿತ ಕ್ರಮಕ್ಕೆ ಒತ್ತಾಯಿಸುತ್ತಿವೆ. ಎಲ್ಲವನ್ನೂ ಕಾನೂನಿನ ಅಡಿಯಲ್ಲಿ ನಿಭಾಯಿಸಲಾಗುವುದು. ಅದಕ್ಕೂ ಮೊದಲು ಜನರಲ್ಲಿ ಆತ್ಮವಿಶ್ವಾಸವನ್ನು ಗಟ್ಟಿಗೊಳಿಸುವ ಅಗತ್ಯವಿದೆ ಎಂದರು.

ಶಾಂತಿ ಮತ್ತು ಸಾಮರಸ್ಯದ ಹಕ್ಕು ಜನರಿಗೆ ಇದೆ. ಅದನ್ನು ಪಡೆಯಲು ಸರ್ಕಾರ ಮತ್ತು ಆಡಳಿತ ವ್ಯವಸ್ಥೆಯ ಅತ್ಯಗತ್ಯ ಕೊಂಡಿಯಾಗಿ ರಾಜಭವನದಲ್ಲಿ ಶಾಂತಿ ಕೊಠಡಿಯನ್ನು ನಿರ್ಮಿಸಲಾಗಿದೆ.

ಹಲ್ಲೆ ಮತ್ತು ರಾಜಕೀಯ ಬೆದರಿಕೆಗೆ ಸಂಬಂಧಿಸಿದ ನೂರಾರು ದೂರುಗಳು ಕಳೆದ ಮೂರು ದಿನಗಳಲ್ಲಿ ಶಾಂತಿ ಕೊಠಡಿಗೆ ಬಂದಿವೆ ಎಂದರು.



ನೀರಿನ ಬವಣೆ

ಮಧ್ಯಪ್ರದೇಶದ ಜಬಲ್‌ಪುರ ಜಿಲ್ಲೆಯ ಕುಂದಂ ಗ್ರಾಮದಲ್ಲಿ ಸೋಮವಾರ ಬಿರುಬಿಸಿಲಿನಲ್ಲೇ ಮಹಿಳೆಯರು ಬಾವಿಯಿಂದ ಬಿಂದಿಗೆಗಳಿಗೆ ಕುಡಿಯುವ ನೀರು ತುಂಬಿಕೊಂಡರು –ಪಿಟಿಐ ಚಿತ್ರ

‘ಪ್ರತಿಭಟನೆ ದುರ್ಬಲಗೊಳಿಸಲು ಬಬಿತಾ ಫೋಗಟ್, ರಾಣಾ ಯತ್ನ’

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ ಕುಸ್ತಿಪಟು ಮತ್ತು ಬಿಜೆಪಿ ನಾಯಕಿ ಬಬಿತಾ ಫೋಗಟ್ ಅವರು ತಮ್ಮ ಸ್ವಾರ್ಥಕ್ಕಾಗಿ ಕುಸ್ತಿಪಟುಗಳನ್ನು ಬಳಸಿಕೊಳ್ಳಲು ಮತ್ತು ಪ್ರತಿಭಟನೆ ದುರ್ಬಲಗೊಳಿಸಲು ಯತ್ನಿಸಿದ್ದಾರೆ ಎಂದು ಒಲಿಂಪಿಕ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲಿಕ್ ಆರೋಪಿಸಿದ್ದಾರೆ.

ಬಬಿತಾ ಹಾಗೂ ಬಿಜೆಪಿ ನಾಯಕ ತೀರತ್ ರಾಣಾ ಅವರು ಜಂತರ್ ಮಂತರ್‌ನ ಪ್ರತಿಭಟನೆಯಲ್ಲಿ ಭಾಗವಹಿಸಲು ಆರಂಭದಲ್ಲಿ ಪೊಲೀಸರಿಂದ ಅನುಮತಿ ಪಡೆದಿದ್ದರು. ಆದರೆ, ನಂತರದಲ್ಲಿ ಈ ವೇದಿಕೆಯನ್ನು ಯಾವುದೇ ಪಕ್ಷಗಳು ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳಬಾರದೆಂದು ಸಲಹೆ ನೀಡಲು ಪ್ರಾರಂಭಿಸಿದರು ಎಂದು ಸಾಕ್ಷಿ ಮತ್ತು ಅವರ ಪತಿ, ಕುಸ್ತಿಪಟು ಸತ್ಯವ್ರತ ಕಾದಿಯಾನ್ ಶನಿವಾರ ಆರೋಪಿಸಿದ್ದು, ಈ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

‘ತೀರತ್ ರಾಣಾ ಮತ್ತು ಬಬಿತಾ ಫೋಗಟ್ ಅವರು ತಮ್ಮ ಸ್ವಾರ್ಥಕ್ಕಾಗಿ ಕುಸ್ತಿ ಪಟುಗಳನ್ನು ಬಳಸಿಕೊಳ್ಳಲು ಯತ್ನಿಸಿದರು. ನಾವು ಅವರಿಂದ ಬಚಾವಾದೆವು. ಕುಸ್ತಿಪಟುಗಳು ತೊಂದರೆ ಅನುಭವಿಸುತ್ತಿದ್ದಾಗ ಅವರು ಸರ್ಕಾರದ ಜೊತೆ ಸೇರಿಕೊಂಡರು. ನಾವು ಖಂಡಿತವಾಗಿಯೂ ತೊಂದರೆಯಲ್ಲಿದ್ದೇವೆ’ ಎಂದು ಸಾಕ್ಷಿ ಮಲಿಕ್ ಭಾನುವಾರ ಟ್ವೀಟ್ ಮಾಡಿದ್ದಾರೆ.

‘ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ. ಹೀಗಾಗಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಕಳೆದ ಕೆಲವು ತಿಂಗಳುಗಳಿಂದ ನಾವು ಪ್ರತಿಭಟನೆ ನಡೆಸುತ್ತಿದ್ದೇವೆ. ನಮ್ಮ ಹೋರಾಟವು ರಾಜಕೀಯ ಮತ್ತು ಸರ್ಕಾರದ ವಿರುದ್ಧವಲ್ಲ’ ಎಂದು ಸತ್ಯವ್ರತ ಕಾದಿಯಾನ್ ಹೇಳಿದ್ದಾರೆ.

ಮರ್ಯಾದೆಗೇಡು ಹತ್ಯೆ: ಮೃತದೇಹಗಳನ್ನು ನದಿಗೆ ಎಸೆದ ಆರೋಪಿ– ಬಂಧನ

ಮುರೌನ (ಪಿಟಿಐ): ಯುವತಿ ಮತ್ತು ಆಕೆಯ ಪ್ರಿಯಕರನನ್ನು ಗುಂಡಿಕ್ಕಿ ಕೊಂದು, ಅವರ ದೇಹಗಳನ್ನು ಮೊಸಳೆಗಳು ಹೆಚ್ಚಿರುವ ಚಂಬಲ್ ನದಿಗೆ ಎಸೆಯಲಾಗಿರುವ ಪ್ರಕರಣವು ಮಧ್ಯಪ್ರದೇಶದ ಮುರೌನ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಇದು ಮರ್ಯಾದೆಗೇಡು ಹತ್ಯೆ ಪ್ರಕರಣ ಎಂದಿರುವ ಪೊಲೀಸರು, ಯುವತಿಯ ತಂದೆ ರಾಜ್‌ಪಾಲ್ ಸಿಂಗ್ ತೋಮರ್ ಮತ್ತು ಅವರ ಇಬ್ಬರು ಸಂಬಂಧಿಗಳನ್ನು ಶನಿವಾರ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಯುವಕ ರಾಧೇಶ್ಯಾಮ್ ತೋಮರ್ (21) ಕಾಣೆಯಾಗಿರುವ ಕುರಿತು ಆತನ ತಂದೆ ಲಖನ್ ತೋಮರ್ ಅವರು ನೀಡಿದ್ದ ದೂರಿನ ಆಧಾರದಲ್ಲಿ ಅವರೆಲ್ಲರನ್ನು ಬಂಧಿಸಲಾಗಿದೆ.

ತಮ್ಮ ಮಗಳು ಶಿವಾನಿ (19) ಮತ್ತು ಆಕೆಯ ಸ್ನೇಹಿತ ರಾಧೇಶ್ಯಾಮ್‌ನನ್ನು ಕೊಂದು, ಮೃತದೇಹಗಳನ್ನು ಜೂನ್ 3ರಂದು ನದಿಗೆ ಎಸೆಯಲಾಗಿದೆ ಎಂದು ಯುವತಿಯ ತಂದೆ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಚಂಬಲ್ ನದಿಯಲ್ಲಿ ಮೊಸಳೆಗಳು ಭಾರಿ ಸಂಖ್ಯೆಯಲ್ಲಿ ಇರುವ ಕಾರಣ ಮೃತದೇಹಗಳು ಪತ್ತೆಯಾಗುವುದು ಕಷ್ಟ ಎಂದು ಅಲ್ಲಿಯ ಸ್ಥಳೀಯರು ಹೇಳಿದ್ದಾರೆ.

ಮದುವೆಗೂ ಮುನ್ನ ವಧು ಎಳೆದೊಯ್ದ ಪೊಲೀಸರು

ತಿರುವನಂತಪುರ (ಕೇರಳ): ಅಂತರ್‌ಧರ್ಮೀಯ ಜೋಡಿಯೊಂದು ವಿವಾಹವಾಗುವುದಕ್ಕೂ ಮುನ್ನ ವಧುವನ್ನು ಪೊಲೀಸರು ಎಳೆದೊಯ್ದ ನಾಟಕೀಯ ಸನ್ನಿವೇಶ ಇಲ್ಲಿನ ಕೋವಳಂ ದೇವಾಲಯದಲ್ಲಿ ಭಾನುವಾರ ಸೃಷ್ಟಿಯಾಗಿತ್ತು.

ಪರಸ್ಪರ ಪ್ರೀತಿಸುತ್ತಿದ್ದ ಆಲ್ಫಿಯಾ ಮತ್ತು ಅಖಿಲ್, ಮದುವೆಯಾಗಲು ದೇವಾಲಯಕ್ಕೆ ತಲುಪಿದ್ದರು. ಮದುವೆಗೂ ಮುನ್ನ ಸ್ಥಳಕ್ಕೆ ಬಂದ ಪೊಲೀಸರು ಅಲ್ಫಿಯಾರನ್ನು ಎಳೆದೊಯ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ತಾನು ಅಖಿಲ್ ಜೊತೆ ತೆರಳುವುದಾಗಿ ಆಲ್ಫಿಯಾ ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದು, ಅದಕ್ಕೆ ನ್ಯಾಯಾಲಯ ಸಮ್ಮತಿ ನೀಡಿದೆ.

ಆಲ್ಫಿಯಾ ಅವರು ನಾಪತ್ತೆಯಾಗಿರುವುದಾಗಿ ಆಕೆಯ ಪೋಷಕರು ದೂರು ನೀಡಿದ್ದರು. ಈ ಕಾರಣಕ್ಕೆ ಆಕೆಯನ್ನು ಕರೆದೊಯ್ದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಯುಸಿಸಿಗೆ ‘ಜಮಯಾತ್ ಉಲೆಮಾ ಇ ಹಿಂದ್’ ವಿರೋಧ

ನವದೆಹಲಿ (ಪಿಟಿಐ): ಏಕರೂಪ ನಾಗರಿಕ ಸಂಹಿತೆಯು (ಯುಸಿಸಿ) ಧಾರ್ಮಿಕ ಹಕ್ಕು ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದ್ದು, ಕಾನೂನು ಮಿತಿಯಲ್ಲಿ ಇದರ ವಿರುದ್ಧ ಹೋರಾಟ ನಡೆಯಲಿದೆ ಎಂದು ಪ್ರಮುಖ ಮುಸ್ಲಿಂ ಸಂಘಟನೆ ಜಮಯಾತ್ ಉಲೆಮಾ ಇ ಹಿಂದ್ ಸೋಮವಾರ ತಿಳಿಸಿದೆ.

‘ಯುಸಿಸಿ ಸಂವಿಧಾನದ ವಿಧಿ 25 ಮತ್ತು 26ರಲ್ಲಿ ದತ್ತವಾಗಿರುವ ಧಾರ್ಮಿಕ ಮತ್ತು ವ್ಯಕ್ತಿ ಸ್ವಾತಂತ್ರದ ವಿರುದ್ಧವಾಗಿದೆ. ಆದರೆ, ಇದರ ವಿರುದ್ಧ ಹೋರಾಟಕ್ಕೆ ನಾವು ಬೀದಿಗಿಳಿಯುವುದಿಲ್ಲ. ಕಾನೂನು ಪ್ರಕಾರವೇ ಹೋರಾಡಲಿದ್ದೇವೆ’ ಎಂದು ಸಂಸ್ಥೆಯ ಹೇಳಿಕೆ ತಿಳಿಸಿದೆ.

‘ನಮ್ಮದು ಜಾತ್ಯತೀತ ಸಂವಿಧಾನ. ಆ ಪ್ರಕಾರ, ಪ್ರತಿಯೊಬ್ಬರಿಗೂ ಪೂರ್ಣ ಧಾರ್ಮಿಕ ಸ್ವಾತಂತ್ರ್ಯವಿದೆ. ಅಲ್ಲದೆ, ಸರ್ವರಿಗೂ ತಮ್ಮ ಇಷ್ಟದ ಧರ್ಮ ಆಯ್ಕೆ ಮಾಡಿಕೊಳ್ಳುವ ಹಕ್ಕು ಇದೆ. ಭಾರತದಲ್ಲಿ ನಿರ್ದಿಷ್ಟವಾಗಿ ಅಧಿಕೃತ ಧರ್ಮ ಎಂದು ಇಲ್ಲ’ ಎಂದು ಸಂಘಟನೆ ಪ್ರತಿಪಾದಿಸಿದೆ.

‘ಭಾನುವಾರ ನಡೆದ ಜಮಯಾತ್ ಉಲೆಮಾ ಇ ಹಿಂದ್ ಸಂಘಟನೆಯ ಕಾರ್ಯಕಾರಿ ಸಭೆಯಲ್ಲಿ, ಯುಸಿಸಿ ವಿರೋಧಿಸಿ ನಿರ್ಣಯ ಅಂಗೀಕರಿಸಲಾಗಿದೆ. ಯುಸಿಸಿಗೆ ಒತ್ತಾಯಿಸುವುದು ಧಾರ್ಮಿಕ ಹಕ್ಕು ಕಸಿಯುವ ಯತ್ನವಲ್ಲದೇ ಮತ್ತೇನೂ ಅಲ್ಲ’ ಎಂದು ಹೇಳಿದೆ.

ಧಾರ್ಮಿಕ ಸ್ವಾತಂತ್ರ್ಯ ಹತ್ತಿಕ್ಕುವ ಯತ್ನ ಎಂಬ ಕಾರಣಕ್ಕೇ ಆರಂಭದಿಂದಲೂ ಯುಸಿಸಿ ಅನ್ನು ನಾವು ವಿರೋಧಿಸುತ್ತಿದ್ದೇವೆ. ಸಂವಿಧಾನದ ಮೂಲಭೂತ ಹಕ್ಕಿಗೆ ವಿರುದ್ಧವಾಗಿದೆ. ಏಕತೆಗೆ ಭಂಗತರುವ ಇದನ್ನು ಒಪ್ಪಲಾಗದು ಎಂದು ತಿಳಿಸಿದೆ.

ನಿರ್ಣಯ ಕುರಿತು ಮಾತನಾಡಿದ ಸಂಘಟನೆಯ ಅಧ್ಯಕ್ಷ ಮೌಲಾನಾ ಅರ್ಶದ್ ಮದಾನಿ ಅವರು, ‘ಇದು, ಕೇವಲ ಮುಸಲ್ಮಾನರಿಗೆ ಮಾತ್ರವಲ್ಲ, ಎಲ್ಲ ಭಾರತೀಯರಿಗೂ ಸಂಬಂಧಿಸಿದ ವಿಷಯವಾಗಿದೆ’ ಎಂದು ಅಭಿಪ್ರಾಯಪಟ್ಟರು.

ಖಾಲಿಸ್ತಾನ ಉಗ್ರ ಹರ್ದೀಪ್ ಸಿಂಗ್ ಕೆನಡಾದಲ್ಲಿ ಹತ್ಯೆ

ಒಂದನೇ ಪುಟದಿಂದ...

ಕೆನಡಾ ಮೂಲದ ‘ಖಾಲಿಸ್ತಾನ ಟೈಗರ್ ಫೋರ್ಸ್’ ಉಗ್ರ ಸಂಘಟನೆ ಮುಖ್ಯಸ್ಥನಾಗಿ ಭಾರತ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದ. ಖಾಲಿಸ್ತಾನದ ಪರ ಸಂಘಟನೆ ‘ಸಿಖ್ ಫಾರ್ ಜಸ್ಟೀಸ್’ನ ಪ್ರಚಾರಕನಾಗಿಯೂ ಕೆಲಸ ಮಾಡುತ್ತಿದ್ದ.

ನಿಜ್ಜರ್ ಮೇಲೆ ಭಯೋತ್ಪಾದಕ ಚಟುವಟಿಕೆಗೆ ಸಂಬಂಧಿಸಿ ಹಲವು ಪ್ರಕರಣಗಳು ದಾಖಲಾಗಿವೆ.

2021ರಲ್ಲಿ ಜಲಂಧರ್‌ನಲ್ಲಿ ಹಿಂದೂ ಅರ್ಚಕರೊಬ್ಬರ ಹತ್ಯೆ ಸಂಬಂಧ ನಿಜ್ಜರ್ ವಿರುದ್ಧ ಪ್ರಕರಣ ದಾಖಲಾಗಿತ್ತು. ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಕಳೆದ ವರ್ಷ ಜುಲೈನಲ್ಲಿ ಈತನ ಸುಳಿವು ನೀಡಿದವರಿಗೆ ₹10 ಲಕ್ಷ ನಗದು ಬಹುಮಾನ ಘೋಷಿಸಿತ್ತು.

ಉಗ್ರನ ಶವವನ್ನು ಕೆನಡಾ ಪೊಲೀಸರು ಸ್ಥಳದಿಂದ ತೆರವುಗೊಳಿಸುವಾಗ ಸಿಖ್ಖರ ಗುಂಪೊಂದು ಖಾಲಿಸ್ತಾನ ಪರ ಮತ್ತು ಭಾರತ ವಿರೋಧಿ ಘೋಷಣೆಗಳನ್ನು ಕೂಗಿದರು.

ಗೀತಾ ಪ್ರೆಸ್‌ಗೆ ಗಾಂಧಿ ಶಾಂತಿ ಪ್ರಶಸ್ತಿ

₹1 ಕೋಟಿ ನಗದು ನಿರಾಕರಿಸಿದ ಸಂಸ್ಥೆ

ಪ್ರಜಾವಾಣಿ ವಾರ್ತೆ

ಲಖನೌ: 2021ರ ಪ್ರತಿಷ್ಠಿತ ಗಾಂಧಿ ಶಾಂತಿ ಪ್ರಶಸ್ತಿಗೆ ಭಾಜನವಾಗಿರುವ ಉತ್ತರಪ್ರದೇಶದ ಗೋರಕ್‌ಪುರದ ಗೀತಾ ಪ್ರೆಸ್, ಪ್ರಶಸ್ತಿಯ ಭಾಗವಾಗಿರುವ ₹1 ಕೋಟಿ ನಗದನ್ನು ಸ್ವೀಕರಿಸಲು ನಿರಾಕರಿಸಿದೆ.

ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಗೀತಾ ಪ್ರೆಸ್‌ನ ವ್ಯವಸ್ಥಾಪಕ ಡಾ. ಲಾಲ್ ಮಣಿ ತಿವಾರಿ ಅವರು, ‘ಗೀತಾ ಪ್ರೆಸ್ ತನಗೆ ನೀಡಿದ ಯಾವುದೇ ಗೌರವ ಅಥವಾ ಯಾವುದೇ ದೇಣಿಗೆಯನ್ನು ಸ್ವೀಕರಿಸಿಲ್ಲ. ಅಂತೆಯೇ ₹ 1ಕೋಟಿ ಮೊತ್ತವು ‘ದೇಣಿಗೆ’ ಆಗಿರುವುದರಿಂದ ಹಣವನ್ನು ಸ್ವೀಕರಿಸಲಾಗದು. ಆದರೆ, ನಗದು ಹೊರತುಪಡಿಸಿ ಗೀತಾ ಪ್ರೆಸ್‌ನ ಟ್ರಸ್ಟಿಗಳು ಗಾಂಧಿ ಶಾಂತಿ ಪ್ರಶಸ್ತಿಯನ್ನು ಮಾತ್ರ ಸ್ವೀಕರಿಸಲು ನಿರ್ಧರಿಸಿದ್ದಾರೆ’ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ವಿರುದ್ಧ ಜಿತೇಂದ್ರ ಸಿಂಗ್ ವಾಗ್ದಾಳಿ

ನವದೆಹಲಿ (ಪಿಟಿಐ): ಮುಸ್ಲಿಂ ಲೀಗ್ ಅನ್ನು ಜಾತ್ಯತೀತ ಸಂಘಟನೆ ಎಂದು ಪರಿಗಣಿಸುವವರನ್ನು ಹೊರತುಪಡಿಸಿ ಗೀತಾ ಪ್ರೆಸ್‌ಗೆ ನೀಡಿರುವ ಗಾಂಧಿ ಶಾಂತಿ ಪ್ರಶಸ್ತಿಯ ಕುರಿತು ಇತರರಿಗೆ ತಕರಾರುಗಳಿಲ್ಲ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಸೋಮವಾರ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಇಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಗೀತಾ ಪ್ರೆಸ್ ಭಾರತದ ಸಂಸ್ಕೃತಿ, ನೀತಿ ಮತ್ತು ಹಿಂದೂ ನಂಬಿಕೆಯೊಂದಿಗೆ ಸಂಬಂಧ ಹೊಂದಿದೆ. ಇದು ಪ್ರತಿ ಮನೆಯನ್ನು ತಲುಪುವ ಕೈಗೆಟುಕುವ ಸಾಹಿತ್ಯವನ್ನು ಮುದ್ರಿಸುತ್ತದೆ’ ಎಂದರು. ‘ಕಾಂಗ್ರೆಸ್‌ನ ಇಬ್ಬರು ನಾಯಕರು ಟೀಕೆ ಮಾಡಬೇಕಾಗಿರುವುದಿಂದಲೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಗೀತಾ ಪ್ರೆಸ್ ಭಾರತದ ಸಂಸ್ಕೃತಿಯೊಂದಿಗೆ ಸಂಬಂಧ ಹೊಂದಿದೆ. ಮುಸ್ಲಿಂ ಲೀಗ್ ಮಾಡಿದಂತೆ ಅವರು ದೇಶವನ್ನು ವಿಭಜಿಸಿಲ್ಲ’ ಎಂದಿದ್ದಾರೆ.

‘ಸಾವರ್ಕರ್, ಗೋಡ್ಸೆಗೆ ಪ್ರಶಸ್ತಿ ನೀಡಿದಂತೆ’

ಗೀತಾ ಪ್ರೆಸ್‌ಗೆ ಗಾಂಧಿ ಶಾಂತಿ ಪ್ರಶಸ್ತಿ ನೀಡುವ ನಿರ್ಧಾರವನ್ನು ಕಾಂಗ್ರೆಸ್‌ನ ಹಿರಿಯ ನಾಯಕ ಜೈರಾಂ ರಮೇಶ್ ಟೀಕಿಸಿದ್ದಾರೆ.

‘ಪ್ರಶಸ್ತಿ ನೀಡುವ ತೀರ್ಪುಗಾರರ ನಿರ್ಣಯವು ನಿಜವಾಗಿಯೂ ಹಾಸ್ಯಾಸ್ಪದವಾಗಿದೆ. ಇದು ಸಾವರ್ಕರ್ ಮತ್ತು ನಾಥೂರಾಂ ಗೋಡ್ಸೆಗೆ ಪ್ರಶಸ್ತಿ ನೀಡಿದಂತೆ’ ಎಂದು ರಮೇಶ್ ಟ್ವೀಟ್ ಮಾಡಿದ್ದಾರೆ.

ಆದರೆ, ಮಹಾತ್ಮ ಗಾಂಧಿ ಅವರು 1933ರ ಅಕ್ಟೋಬರ್‌ನಲ್ಲಿ ‘ಗೀತಾ ಪ್ರವೇಶಿಕಾ’ಕ್ಕೆ ಮುನ್ನುಡಿ ಬರೆದಿದ್ದಾರೆ ಎಂದು ಗೀತಾ ಪ್ರೆಸ್ ಪ್ರತಿಪಾದಿಸಿದೆ.

ವಿಎಚ್‌ಪಿ ಟೀಕೆ: ಕಾಂಗ್ರೆಸ್‌ನ ಧೋರಣೆಯನ್ನು ಕಟುವಾಗಿ ಟೀಕಿಸಿರುವ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), ‘ದೇಶದ ಅಧ್ಯಾತ್ಮ ಸಾಹಿತ್ಯದ ಬಗ್ಗೆ ಕಾಂಗ್ರೆಸ್ ಕೀಳು ಮನೋಭಾವನೆಯನ್ನು ಹೊಂದಿದೆ’ ಎಂದು ಕಿಡಿಕಾರಿದೆ.



ಪ್ರಶಸ್ತಿಯೊಂದಿಗೆ ಅಶ್ವಿನಿ ಪೊನ್ನಪ್ಪ (ಎಡ) ಮತ್ತು ತನೀಷಾ ಕ್ರಾಸ್ಟೊ

ಬ್ಯಾಡ್ಮಿಂಟನ್: ತನೀಷಾ–ಅಶ್ವಿನಿ ಜೋಡಿಗೆ ಪ್ರಶಸ್ತಿ

ನಾಂಟ್, ಫ್ರಾನ್ಸ್ (ಪಿಟಿಐ): ಭಾರತದ ಅಶ್ವಿನಿ ಪೊನ್ನಪ್ಪ ಮತ್ತು ತನೀಷಾ ಕ್ರಾಸ್ಟೊ ಜೋಡಿ ಫ್ರಾನ್ಸ್‌ನಲ್ಲಿ ನಡೆದ ನಾಂಟ್ ಇಂಟರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಯಿತು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತದ ಜೋಡಿ 21–15, 21–14 ರಲ್ಲಿ ಚೀನಾ ತೈಪೆಯ ಹುಂಗ್ ಎನ್ ತ್ಸು– ಲಿನ್ ಯು ಪೆಯ್ ವಿರುದ್ಧ ಗೆದ್ದಿತು. ಹೊಂದಾಣಿಕೆಯ ಆಟವಾಡಿದ ಅಶ್ವಿನಿ–ತನೀಷಾ 31 ನಿಮಿಷಗಳಲ್ಲಿ ಗೆಲುವು ಒಲಿಸಿಕೊಂಡರು.

ಮೊದಲ ಗೇಮ್‌ನಲ್ಲಿ 0–4 ರಲ್ಲಿ ಹಿನ್ನಡೆಯಲ್ಲಿದ್ದ ಭಾರತದ ಜೋಡಿ ಮರುಹೋರಾಟ ನಡೆಸಿ 10–10 ರಲ್ಲಿ ಸಮಬಲ ಸಾಧಿಸಿತು. ಆ ಬಳಿಕ ಪಂದ್ಯದ ಮೇಲಿನ ಹಿಡಿತ ಬಿಗಿಗೊಳಿಸಿ 21–15 ರಲ್ಲಿ ಗೇಮ್ ಗೆದ್ದಿತು. ಎರಡನೇ ಗೇಮ್‌ನ ಆರಂಭದಲ್ಲಿ 3–3 ರಲ್ಲಿ ಸಮಬಲ ಸಾಧಿಸಿದ ಬಳಿಕ, ಅಶ್ವಿನಿ–ತನೀಷಾ ಮೇಲುಗೈ ಸಾಧಿಸಿ ಏಳು ಪಾಯಿಂಟ್‌ಗಳ ಅಂತರದಿಂದ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಮಿಕ್ಸೆಡ್ ಡಬಲ್ಸ್‌ನಲ್ಲಿ ಗೆದ್ದು 'ಪ್ರಶಸ್ತಿ ಡಬಲ್' ಸಾಧನೆ ಮಾಡಬೇಕೆಂಬ ತನೀಷಾ ಅವರ ಆಸೆ ಕೈಗೂಡಲಿಲ್ಲ. ತನೀಷಾ– ಕೆ.ಸಾಯಿ ಪ್ರಣೀತ್ ಜೋಡಿ ಫೈನಲ್‌ನಲ್ಲಿ 21–14, 14–21, 17–21 ರಲ್ಲಿ ಡೆನ್ಮಾರ್ಕ್‌ನ ಮ್ಯಾಡ್ಸ್ ವೆಸ್ಟರ್‌ಗಾರ್ಡ್– ಕ್ರಿಸ್ಟಿನ್ ಬುಷ್ ಎದುರು ಪರಾಭವಗೊಂಡಿತು.

51 ನಿಮಿಷ ನಡೆದ ಹೋರಾಟದಲ್ಲಿ ಮೊದಲ ಗೇಮ್ ಗೆದ್ದರೂ ಭಾರತದ ಜೋಡಿ, ಆ ಬಳಿಕ ಪಂದ್ಯದ ಮೇಲಿನ ಹಿಡಿತ ಕೈಬಿಟ್ಟಿತು.

'ಇತ್ತೀಚಿನ ಕೆಲ ಸಮಯಗಳಿಂದ ಯಾವುದೇ ಟೂರ್ನಿ ಗೆದ್ದಿರಲಿಲ್ಲ. ತನೀಷಾ ಮತ್ತು ನಾನು ಕಳೆದ ಜನವರಿಯಿಂದ ಜತೆಗೆ ಆಡುತ್ತಿದ್ದು, ಪ್ರಶಸ್ತಿ ಜಯಿಸಿರುವುದು ನಿಜವಾಗಿಯೂ ಸಂತಸ ಉಂಟುಮಾಡಿದೆ' ಎಂದು ಅಶ್ವಿನಿ ಪ್ರತಿಕ್ರಿಯಿಸಿದ್ದಾರೆ.

ಅಂತರ ರಾಜ್ಯ ಅಥ್ಲೆಟಿಕ್ಸ್: ಹರ್ಡಲ್ಸ್‌ನಲ್ಲಿ ಕರ್ನಾಟಕದ ಸ್ಪರ್ಧಿಗಳ ಸಾಧನೆ

ಯಶಸ್, ಸಿಂಚಲ್ ಅರ್ಹತೆ

ಭುವನೇಶ್ವರ: ಕರ್ನಾಟಕದ ಪಿ.ಯಶಸ್ ಮತ್ತು ಸಿಂಚಲ್ ಕಾವೇರಮ್ಮ ಅವರು ಇಲ್ಲಿ ಕೊನೆಗೊಂಡ 62ನೇ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಕೂಟದ ಕೊನೆಯ ದಿನ 400 ಮೀ. ಹರ್ಡಲ್ಸ್‌ನಲ್ಲಿ ಅಮೋಘ ಪ್ರದರ್ಶನ ನೀಡಿ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದುಕೊಂಡರು.

ಕಳಿಂಗ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಯಶಸ್ 49.37 ಸೆ.ಗಳಲ್ಲಿ ಗುರಿ ತಲುಪಿ ಚಾಂಪಿಯನ್ ಆದರು. ಏಷ್ಯನ್ ಗೇಮ್ಸ್ ಅರ್ಹತೆಗೆ ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿದ್ದ ಅರ್ಹತಾ ಮಟ್ಟ 49.75 ಸೆ. ಆಗಿದೆ. ಎರಡನೇ ಸ್ಥಾನ ಪಡೆದ ತಮಿಳುನಾಡಿನ ಸಂತೋಷ್ ಕುಮಾರ್ (49.52 ಸೆ.) ಕೂಡಾ ಅರ್ಹತೆ ಪಡೆದರು.

ಮಹಿಳೆಯರ ವಿಭಾಗದಲ್ಲಿ ಸಿಂಚಲ್ 56.76 ಸೆ.ಗಳೊಂದಿಗೆ ಎರಡನೇ ಸ್ಥಾನ ಪಡೆದು ಏಷ್ಯನ್ ಗೇಮ್ಸ್ ಅರ್ಹತಾ ಮಟ್ಟ (57.48 ಸೆ.) ಸಾಧಿಸಿದರು. ತಮಿಳುನಾಡಿನ ಆರ್.ವಿದ್ಯಾ ರಾಮರಾಜ್ (56.01 ಸೆ.) ಅಗ್ರಸ್ಥಾನ ತಮ್ಮದಾಗಿಸಿಕೊಂಡರು.

ಪುರುಷರ 200 ಮೀ. ಓಟದಲ್ಲಿ ಕರ್ನಾಟಕದ ಶಶಿಕಾಂತ್ ವಿರೂಪಾಕ್ಷ (21.08 ಮೀ.) ಎರಡನೆಯವರಾದರೆ, ಮಹಿಳೆಯರ ಹೈಜಂಪ್‌ನಲ್ಲಿ ಅಭಿನಯಾ ಶೆಟ್ಟಿ 1.76 ಮೀ. ಸಾಧನೆಯೊಂದಿಗೆ ಮೂರನೇ ಸ್ಥಾನ ಗಳಿಸಿದರು.

ಪುರುಷರ ಲಾಂಗ್‌ಜಂಪ್‌ನಲ್ಲಿ ನಿರೀಕ್ಷೆಯಂತೆಯೇ ಕೇರಳದ ಮುರಳಿ ಶ್ರೀಶಂಕರ್ (8.29 ಮೀ.) ಅಗ್ರಸ್ಥಾನ ಪಡೆದರು. ಅವರು ಭಾನುವಾರ ಅರ್ಹತಾ ಹಂತದಲ್ಲಿ 8.41 ಮೀ. ದೂರ ಜಿಗಿದು ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡಿದ್ದರು.



ಪಿ.ಯಶಸ್

ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಶೈಲಿ ಸಿಂಗ್ (6.49 ಮೀ.) ಅವರನ್ನು ಹಿಂದಿಕ್ಕಿದ ಕೇರಳದ ಆನ್ಸಿ ಸೋಜನ್ (6.51 ಮೀ.) ಅಗ್ರಸ್ಥಾನ ಪಡೆದರು. ಇಬ್ಬರೂ ಏಷ್ಯನ್ ಗೇಮ್ಸ್ ಅರ್ಹತಾ ಮಟ್ಟ (6.45 ಮೀ.) ದಾಟಿದರು.

ಮಹಿಳೆಯರ ಹ್ಯಾಮರ್ ಥ್ರೋ ಸ್ಪರ್ಧೆಯಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆದ ಉತ್ತರ ಪ್ರದೇಶದ ಕೆ.ಎಂ.ರಚನಾ (65.03 ಮೀ.) ಮತ್ತು ತಾನ್ಯಾ ಚೌಧರಿ (63.16 ಮೀ.) ಅವರು ಏಷ್ಯನ್ ಗೇಮ್ಸ್‌ಗೆ (ಅರ್ಹತಾ ಮಟ್ಟ: 62.03 ಮೀ.) ಪಡೆದರು.

ಮಹಿಳೆಯರ ಶಾಟ್‌ಪಟ್ (ಅರ್ಹತಾ ಮಟ್ಟ: 16.30 ಮೀ.), 800 ಮೀ. ಓಟ (ಅರ್ಹತಾ ಮಟ್ಟ: 2 ನಿ. 4.57 ಸೆ.) ಮತ್ತು ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ (ಅರ್ಹತಾ ಮಟ್ಟ: 78.23 ಮೀ.) ಮೊದಲ ಮೂರು ಸ್ಥಾನಗಳನ್ನು ಪಡೆದವರು ಏಷ್ಯನ್ ಗೇಮ್ಸ್‌ಗೆ ಅರ್ಹತೆ ಗಳಿಸಿದರು.

ಪುರುಷರ 1,500 ಮೀ. ಓಟದ ಫೈನಲ್‌ನಲ್ಲಿ ಸ್ಪರ್ಧಿಸಿದ 12 ಅಥ್ಲೀಟ್‌ಗಳಲ್ಲಿ 11 ಮಂದಿ ಕೂಡಾ ಏಷ್ಯನ್ ಗೇಮ್ಸ್ ಅರ್ಹತಾ ಮಟ್ಟ (3 ನಿ. 47.84 ಸೆ.) ಸಾಧಿಸಿ ಗಮನ ಸೆಳೆದರು.



ಸಿಂಚಲ್ ಕಾವೇರಮ್ಮ

ಅಂತಿಮ ದಿನದ ಆಯ್ದ ಫಲಿತಾಂಶ: ಪುರುಷರ ವಿಭಾಗ: 400 ಮೀ. ಹರ್ಡಲ್ಸ್: ಪಿ.ಯಶಸ್ (ಕರ್ನಾಟಕ, ಕಾಲ: 49.37 ಸೆ.)–1, ಸಂತೋಷ್ ಕುಮಾರ್ (ತಮಿಳುನಾಡು)–2, ಜಾಬಿರ್ (ಕೇರಳ)–3
1,500 ಮೀ. ಓಟ: ಜಿನ್ಸನ್ ಜಾನ್ಸನ್ (ಕೇರಳ, ಕಾಲ: 3 ನಿ. 42.77 ಸೆ.)–1, ಅಜಯ್ ಕುಮಾರ್ (ಉತ್ತರ ಪ್ರದೇಶ)–2, ಶಶಿ ಭೂಷಣ್ ಸಿಂಗ್ (ಬಿಹಾರ)–3
ಲಾಂಗ್‌ಜಂಪ್: ಮುರಳಿ ಶ್ರೀಶಂಕರ್ (ಕೇರಳ, ದೂರ: 8.29 ಮೀ.)–1, ಜೆಸ್ವಿನ್ ಆಲ್ಡ್ರಿನ್ (ತಮಿಳುನಾಡು)–2, ಪಿ.ಡೇವಿಡ್ (ತಮಿಳುನಾಡು)–3
ಜಾವೆಲಿನ್ ಥ್ರೋ: ರೋಹಿತ್ ಯಾದವ್ (ಉತ್ತರ ಪ್ರದೇಶ, ದೂರ: 83.28 ಮೀ.)–1, ಕಿಶೋರ್ ಕುಮಾರ್ ಜೆನಾ (ಒಡಿಶಾ)–2, ಶಿವಪಾಲ್ ಸಿಂಗ್ (ಉತ್ತರ ಪ್ರದೇಶ)–3
ಮಹಿಳೆಯರ ವಿಭಾಗ: 400 ಮೀ. ಹರ್ಡಲ್ಸ್: ಆರ್.ವಿದ್ಯಾ ರಾಮರಾಜ್ (ತಮಿಳುನಾಡು, ಕಾಲ: 56.01 ಸೆ.)–1, ಸಿಂಚಲ್ ಕಾವೇರಮ್ಮ (ಕರ್ನಾಟಕ, 56.76 ಸೆ.)–2, ಆರ್.ಅನು (ಕೇರಳ)–3
800 ಮೀ. ಓಟ: ಚಂದಾ (ದೆಹಲಿ; ಕಾಲ: 2 ನಿ. 3.82 ಸೆ.)–1, ಹರ್‌ಮಿಲನ್ ಬೈನ್ಸ್ (ಪಂಜಾಬ್)–2, ಕೆ.ಎಂ.ದೀಕ್ಷಾ (ಮಧ್ಯಪ್ರದೇಶ)–3
ಲಾಂಗ್‌ಜಂಪ್: ಆನ್ಸಿ ಸೋಜನ್ (ಕೇರಳ, ದೂರ: 6.51 ಮೀ.)–1, ಶೈಲಿ ಸಿಂಗ್ (ಉತ್ತರ ಪ್ರದೇಶ)–2, ಭವಾನಿ ಯಾದವ್ (ಆಂಧ್ರ ಪ್ರದೇಶ)–3
ಹ್ಯಾಮರ್ ಥ್ರೋ: ಕೆ.ಎಂ.ರಚನಾ (ಉತ್ತರ ಪ್ರದೇಶ, ದೂರ: 65.03 ಮೀ.)–1, ತಾನ್ಯಾ ಚೌಧರಿ (ಉತ್ತರ ಪ್ರದೇಶ)–2, ರೇಣು (ಹರಿಯಾಣ)–3
ಶಾಟ್‌ಪಟ್: ಕಿರಣ್ ಬಲಿಯಾನ್ (ಉತ್ತರ ಪ್ರದೇಶ, ದೂರ: 17.17 ಮೀ.)–1, ಮನ್‌ಪ್ರೀತ್ ಕೌರ್ (ಹರಿಯಾಣ)–2, ಅಭಾ ಕಥುವ (ಮಹಾರಾಷ್ಟ್ರ)–3

ತಜಿಂದರ್ ದಾಖಲೆ

ಪುರುಷರ ಶಾಟ್‌ಪಟ್ ಸ್ಪರ್ಧಿ ತಜಿಂದರ್ ಪಾಲ್ ತೂರ್ ತಮ್ಮದೇ ಹೆಸರಿನಲ್ಲಿರುವ ಏಷ್ಯನ್ ದಾಖಲೆ ಮುರಿದರಲ್ಲದೆ, ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದರು. ಪಂಜಾಬ್‌ನ 28 ವರ್ಷದ ಅಥ್ಲೀಟ್ 21.77 ಮೀ. ಸಾಧನೆ ಮಾಡಿದರು.

2021 ರಲ್ಲಿ ಪಟಿಯಾಲದಲ್ಲಿ ನಡೆದಿದ್ದ ಕೂಟದಲ್ಲಿ 21.49 ಮೀ. ದೂರ ಎಸೆದದ್ದು ಅವರ ಈ ಹಿಂದಿನ ಏಷ್ಯನ್ ದಾಖಲೆಯಾಗಿತ್ತು. ವಿಶ್ವ ಚಾಂಪಿಯನ್‌ಷಿಪ್‌ಗೆ 21.40 ಮೀ. ಮತ್ತು ಏಷ್ಯನ್ ಗೇಮ್ಸ್‌ಗೆ 19 ಮೀ. ಅರ್ಹತಾ ಮಟ್ಟ ನಿಗದಿಪಡಿಸಲಾಗಿದೆ.

ಏಷ್ಯನ್ ಫೆನ್ಸಿಂಗ್‌ನಲ್ಲಿ ಕಂಚು: ಭವಾನಿ ಚಾರಿತ್ರಿಕ ಸಾಧನೆ

ನವದೆಹಲಿ (ಪಿಟಿಐ): ಒಲಿಂಪಿಯನ್ ಸಿ.ಎ.ಭವಾನಿ ದೇವಿ ಅವರು ಚೀನಾದ ವುಕ್ಸಿ ನಗರದಲ್ಲಿ ನಡೆಯುತ್ತಿರುವ ಏಷ್ಯನ್ ಫೆನ್ಸಿಂಗ್ ಚಾಂಪಿಯನ್‌ಷಿಪ್ಸ್‌ನ ಸೇಬರ್ ವಿಭಾಗದಲ್ಲಿ ಸೋಮವಾರ ಕಂಚಿನ ಪದಕ ಗೆದ್ದುಕೊಂಡು ಇತಿಹಾಸ ನಿರ್ಮಿಸಿದರು. ಭಾರತ ಈ ಪ್ರತಿಷ್ಠಿತ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದುಕೊಂಡ ಪ್ರಪ್ರಥಮ ಪದಕ ಇದು.

ಬೆಳಿಗ್ಗೆ ಕ್ವಾರ್ಟರ್‌ಫೈನಲ್‌ನಲ್ಲಿ ಹಾಲಿ ವಿಶ್ವ ಚಾಂಪಿಯನ್ ಆಗಿರುವ ಜಪಾನ್‌ನ ಮಿಸಾಕಿ ಎಮುರಾ ಅವರನ್ನು ಸೋಲಿಸಿ ಅಚ್ಚರಿ ಮೂಡಿಸಿದ್ದ ಚೆನ್ನೈನ ಭವಾನಿ ಸೆಮಿಫೈನಲ್‌ನಲ್ಲಿ ಉಜ್ಬೇಕಿಸ್ತಾನದ ಜೇನಾಬ್ ದಯಿಬೆಕೊವಾ ಅವರೆದುರು ಸೋಲನುಭವಿಸಿದರು.

ಮಿಸಾಕಿ ಕೈರೊದಲ್ಲಿ 2022ರಲ್ಲಿ ನಡೆದ ವಿಶ್ವ ಫೆನ್ಸಿಂಗ್ ಚಾಂಪಿಯನ್‌ಷಿಪ್‌ನ ಸೇಬರ್‌ನಲ್ಲಿ ಚಿನ್ನ ಗೆದ್ದಿದ್ದರು. ಇದು ಮಿಸಾಕಿ ವಿರುದ್ಧ ಭವಾನಿಗೆ ಮೊದಲ ಜಯ ಕೂಡ. ಈ ಹಿಂದಿನ ಸೆಣಸಾಟಗಳಲ್ಲಿ ಸೋಲನುಭವಿಸಿದ್ದರು.

64 ಸ್ಪರ್ಧಿಗಳ ವಿಭಾಗದ ಮೊದಲ ಸುತ್ತಿನಲ್ಲಿ 'ಬೈ' ಪಡೆದಿದ್ದ ಭವಾನಿ, ಎರಡನೇ ಸುತ್ತಿನಲ್ಲಿ ಕಜಕಸ್ತಾನದ ದೋಸ್ಪೆ ಕರಿನಾ ಅವರನ್ನು ಮಣಿಸಿದ್ದರು. ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಒಝಾಕಿ ಸೆರಿ ವಿರುದ್ಧ ಗೆಲುವು ಸಾಧಿಸಿದ್ದರು.



ಭವಾನಿ ದೇವಿ

ಭವಾನಿ ಅವರನ್ನು ಭಾರತ ಫೆನ್ಸಿಂಗ್ ಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ರಾಜೀವ್ ಮೆಹ್ತಾ ಅಭಿನಂದಿಸಿದ್ದಾರೆ. 'ಭಾರತಕ್ಕೆ ಫೆನ್ಸಿಂಗ್‌ನಲ್ಲಿ ಇದು ಅತ್ಯಂತ ಹೆಮ್ಮೆಯ ಕ್ಷಣ. ಈ ಹಿಂದೆ ಯಾರೂ ಸಾಧಿಸದ್ದನ್ನು ಭವಾನಿ ಅವರು ಸಾಧಿಸಿ ತೋರಿಸಿದ್ದಾರೆ. ಪ್ರತಿಷ್ಠಿತ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಮೊದಲ ಭಾರತದ ಮೊದಲ ಫೆನ್ಸರ್ ಅವರಾಗಲಿದ್ದಾರೆ. ಫೆನ್ಸಿಂಗ್ ಆಟಕ್ಕೆ ಸಂಬಂಧಿಸಿದ ದೇಶದ ಎಲ್ಲರ ಪರವಾಗಿ ಅವರಿಗೆ ಅಭಿನಂದಿಸುವೆ' ಎಂದು ಮೆಹ್ತಾ ಹೇಳಿದರು.

ಆ್ಯಷಸ್ ಮೊದಲ ಟೆಸ್ಟ್: ಆಸ್ಟ್ರೇಲಿಯಾಕ್ಕೆ 281 ರನ್ ಗುರಿ

ಕುತೂಹಲಕರ ಘಟ್ಟದಲ್ಲಿ ಪಂದ್ಯ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಆ್ಯಷಸ್ ಸರಣಿಯ ಮೊದಲ ಟೆಸ್ಟ್ ಪಂದ್ಯ ಕುತೂಹಲಕರ ಫಲಿತಾಂಶ ಕಾಣುವ ಸಾಧ್ಯತೆ ಇದೆ. ಗೆಲುವಿಗೆ ಆಸ್ಟ್ರೇಲಿಯಾ 281 ರನ್ ಗಳಿಸಬೇಕಾಗಿದ್ದು, ಸೋಮವಾರ ನಾಲ್ಕನೇ ದಿನದಾಟ ಮುಗಿದಾಗ 30 ಓವರುಗಳಲ್ಲಿ 3 ವಿಕೆಟ್‌ಗೆ 107 ರನ್ ಗಳಿಸಿದೆ.

ಮೊದಲ ಇನ್ನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಉಸ್ಮಾನ್ ಖ್ವಾಜಾ 34 ರನ್ ಮತ್ತು 'ನೈಟ್ ವಾಚ್‌ಮನ್' ಸ್ಕಾಟ್ ಬೊಲಾಂಡ್ 13 ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ. ಗೆಲುವಿನ ದಡ ಸೇರಲು ಇನ್ನೂ 174 ರನ್ ಬೇಕಿದೆ.

ಇದಕ್ಕೂ ಮೊದಲು ಆಸ್ಟೇಲಿಯಾ ತಂಡದ ನಾಯಕ, ವೇಗದ ಬೌಲರ್ ಪ್ಯಾಟ್ ಕಮಿನ್ಸ್ (63 ಕ್ಕೆ4) ಮತ್ತು ಸ್ಪಿನ್ನರ್ ನಥಾನ್ ಲಯನ್ (80ಕ್ಕೆ4) ಅವರು ಇಂಗ್ಲೆಂಡ್ ತಂಡ ಎರಡನೇ ಇನಿಂಗ್ಸ್‌ನಲ್ಲಿ ದೊಡ್ಡ ಮೊತ್ತ ಗಳಿಸದಂತೆ ತಡೆದರು. ಟೀ ವಿರಾಮದ ವೇಳೆಗೆ ಇಂಗ್ಲೆಂಡ್ ಎರಡನೇ ಸರದಿಯಲ್ಲಿ 271 ರನ್‌ಗಳಿಗೆ ಆಲೌಟ್ ಆಯಿತು.

ಆಫ್ ಸ್ಪಿನ್ನರ್ ಲಯನ್ ಅವರು ಜೋ ರೂಟ್ (46) ಮತ್ತು ಹ್ಯಾರಿ ಬ್ರೂಕ್ (46) ಅವರ ವಿಕೆಟ್‌ಗಳನ್ನು ಪಡೆದರು. ಸ್ಪಿನ್ನರ್ ಲಯನ್ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಮುನ್ನುಗ್ಗಿದ ರೂಟ್ ಅವರನ್ನು ಅಲೆಕ್ಸ್ ಕ್ಯಾರಿ ಅವರು ಸ್ಟಂಪಿಂಗ್ ಮಾಡಿದರು. 240 ಟೆಸ್ಟ್ ಇನಿಂಗ್ಸ್‌ಗಳಲ್ಲಿ ಅವರು ಸ್ಟಂಪಿಂಗ್ ಆಗಿ ವಿಕೆಟ್ ತೆತ್ತಿದ್ದು ಇದೇ ಮೊದಲು. ಇಂಗ್ಲೆಂಡ್‌ನ ಕೊನೆಯ ಎರಡು ವಿಕೆಟ್‌ಗಳಿಂದ 44 ರನ್ ಸೇರಿಸಿದ್ದರಿಂದ ತಂಡ 250ರ ಮೊತ್ತ ದಾಟಿತು.

ಎಜ್‌ಬಾಸ್ಟನ್‌ನಲ್ಲಿ ಇದುವರೆಗೆ ಕೇವಲ ಮೂರು ತಂಡಗಳು ನಾಲ್ಕನೇ ಇನಿಂಗ್ಸ್‌ನಲ್ಲಿ 200ಕ್ಕಿಂತ ಹೆಚ್ಚು ರನ್ ಮಾಡಿ ಜಯಗಳಿಸಿವೆ. ಕಳೆದ ವರ್ಷ ಭಾರತ ತಂಡದ ವಿರುದ್ಧ ಇಂಗ್ಲೆಂಡ್ 3 ವಿಕೆಟ್‌ಗೆ 378 ರನ್ ಗಳಿಸಿದ್ದು ಇವುಗಳಲ್ಲಿ ಅತ್ಯಧಿಕ ಚೇಸ್ ಎನಿಸಿದೆ.

ಸಂಕ್ಷಿಪ್ತ ಸ್ಕೋರು: ಪ್ರಥಮ ಇನಿಂಗ್ಸ್: ಇಂಗ್ಲೆಂಡ್: 8ಕ್ಕೆ 393 ಡಿಕ್ಲೇರ್ಡ್, ಆಸ್ಟ್ರೇಲಿಯಾ: 386; ಎರಡನೇ ಇನಿಂಗ್ಸ್: ಇಂಗ್ಲೆಂಡ್: 66.2 ಓವರುಗಳಲ್ಲಿ 273 (ಜೋ ರೂಟ್ 46, ಹ್ಯಾರಿ ಬ್ರೂಕ್ 46, ಬೆನ್ ಸ್ಟೋಕ್ಸ್ 43, ಜಾನಿ ಬೇಸ್ಟೊ 20, ಒಲಿ ರಾಬಿನ್ಸನ್ 27; ಪ್ಯಾಟ್ ಕಮಿನ್ಸ್ 63ಕ್ಕೆ4, ಜೋಶ್ ಹ್ಯಾಜಲ್‌ವುಡ್ 48ಕ್ಕೆ1, ನಥಾನ್ ಲಯನ್ 80ಕ್ಕೆ4, ಸ್ಕಾಟ್ ಬೊಲಾಂಡ್ 61ಕ್ಕೆ1).



ಬೆನ್ ಸ್ಟೋಕ್ಸ್ ವಿಕೆಟ್ ಪಡೆದ ಸಂಭ್ರಮದಲ್ಲಿ ಪ್ಯಾಟ್ ಕಮಿನ್ಸ್ –ಎಪಿ ಚಿತ್ರ

ಬಿಸಿಸಿಐ ಜೂನಿಯರ್ ಆಯ್ಕೆ ಸಮಿತಿಗೆ ತಿಲಕ್ ನಾಯ್ಡು ಮುಖ್ಯಸ್ಥ

ನವದೆಹಲಿ (ಪಿಟಿಐ): ಕರ್ನಾಟಕ ತಂಡದ ವಿಕೆಟ್‌ಕೀಪರ್, ಬ್ಯಾಟರ್ ಆಗಿದ್ದ ತಿಲಕ್ ನಾಯ್ಡು ಅವರನ್ನು ಬಿಸಿಸಿಐ 19 ವರ್ಷ ವಯಸ್ಸಿನೊಳಗಿನವರ ತಂಡದ ಆಯ್ಕೆ ಸಮಿತಿಗೆ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

ನಾಯ್ಡು ಅವರನ್ನು ಕೆಲ ದಿನಗಳ ಹಿಂದೆ ಆಯ್ಕೆ ಸಮಿತಿಗೆ ನೇಮಕ ಮಾಡಲಾಗಿತ್ತು. ಐವರು ಸದಸ್ಯರನ್ನೊಳಗೊಂಡ ಸಮಿತಿಯನ್ನು ಅವರೇ ಮುನ್ನಡೆಸಲಿದ್ದಾರೆ ಎಂದು ಬಿಸಿಸಿಐ ಪ್ರಕಟಣೆ ತಿಳಿಸಿದೆ. ರಣದೇವ್ ಬೋಸ್, ಹರ್ವಿಂದರ್ ಸಿಂಗ್ ಸೋಧಿ, ಪಥಿಕ್ ಪಟೇಲ್ ಮತ್ತು ಕೃಷ್ಣ ಮೋಹನ್ ಅವರು ಸಮಿತಿಯ ಇತರ ಸದಸ್ಯರು.

ಮಹಿಳಾ ತಂಡದ ಆಯ್ಕೆಗೆ ಸಮಿತಿಗೆ ಶ್ಯಾಮಾ ಡೆ: ಬಂಗಾಳ ಮತ್ತು ರೈಲ್ವೆ ತಂಡದ ಆಟಗಾರ್ತಿಯಾಗಿದ್ದ ಶ್ಯಾಮಾ ಡೆ ಶಾ ಅವರನ್ನು ರಾಷ್ಟ್ರೀಯ ಮಹಿಳಾ ತಂಡದ ಆಯ್ಕೆ ಸಮಿತಿಗೆ ನೇಮಕ ಮಾಡಲಾಗಿದೆ.



ತಿಲಕ್ ನಾಯ್ಡು

51 ವರ್ಷದ ಶ್ಯಾಮಾ ಅವರು 1995 ರಲ್ಲಿ ಮೂರು ಟೆಸ್ಟ್ ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಎರಡು ಅರ್ಧಶತಕಗಳನ್ನು ಗಳಿಸಿದ್ದರಲ್ಲದೆ, ಐದು ವಿಕೆಟ್ ಪಡೆದಿದ್ದರು. 1995–97ರ ಅವಧಿಯಲ್ಲಿ ಐದು ಏಕದಿನ ಪಂದ್ಯಗಳಲ್ಲಿ ಆಡಿದ್ದರು.

'ಸುಲಕ್ಷಣಾ ನಾಯಕ್, ಅಶೋಕ್ ಮಲ್ಹೋತ್ರಾ ಮತ್ತು ಜತಿನ್ ಪರಾಂಜಪೆ ಅವರನ್ನೊಳಗೊಂಡ ಕ್ರಿಕೆಟ್ ಸಲಹಾ ಸಮಿತಿಯು ಅರ್ಜಿಗಳ ಪರಿಶೀಲನೆ ನಡೆಸಿ ಈ ಆಯ್ಕೆ ಮಾಡಿದೆ' ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಯಾಫ್: ಪಾಕ್ ತಂಡ ಇಂದು ಬೆಂಗಳೂರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ಪಾಕಿಸ್ತಾನ ತಂಡ, ಮಂಗಳವಾರ ರಾತ್ರಿ ಬೆಂಗಳೂರಿಗೆ ತಲುಪಲಿದೆ.

ಭಾನುವಾರ ಬರಬೇಕಿದ್ದ ಪಾಕ್ ತಂಡದವರು ವೀಸಾ ಲಭಿಸದ ಕಾರಣ ಮಾರಿಷಸ್‌ನಲ್ಲೇ ಉಳಿದುಕೊಂಡಿದ್ದರು. ಸೋಮವಾರ ರಾತ್ರಿಯಷ್ಟೇ ವೀಸಾ ಸಮಸ್ಯೆ ಬಗೆಹರಿದಿದ್ದು, ಮಂಗಳವಾರ ಬೆಳಿಗ್ಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಭಾರತ– ಪಾಕ್ ಪಂದ್ಯ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ 7.30ಕ್ಕೆ ನಡೆಯಲಿದೆ. 'ಪಾಕ್ ತಂಡದ ಆಗಮನ ವಿಳಂಬವಾಗಿದೆಯಾದರೂ, ಪಂದ್ಯ ನಿಗದಿತ ವೇಳಾಪಟ್ಟಿಯಂತೆ ನಡೆಯಲಿದೆ' ಎಂದು ಕೆಎಸ್‌ಎಫ್‌ಎ ಮೂಲಗಳು ತಿಳಿಸಿವೆ.

ಭುವನೇಶ್ವರದಲ್ಲಿ ಭಾನುವಾರ ನಡೆದಿದ್ದ ಇಂಟರ್‌ಕಾಂಟಿನೆಂಟಲ್ ಕಪ್ ಟೂರ್ನಿಯ ಫೈನಲ್‌ನಲ್ಲಿ ಆಡಿದ್ದ ಭಾರತ ಮತ್ತು ಲೆಬನಾನ್ ಸೇರಿದಂತೆ ಸ್ಯಾಫ್‌ನಲ್ಲಿ ಪಾಲ್ಗೊಳ್ಳಲಿರುವ ಇತರ ಏಳು ತಂಡಗಳು ಈಗಾಗಲೇ ಬೆಂಗಳೂರು ತಲುಪಿವೆ.

ಅಫ್ಗಾನ್ ವಿರುದ್ಧ ಚೆನ್ನೈನಲ್ಲಿ ಆಡಲು ಪಾಕ್ ಹಿಂದೇಟು?

ಬದಲಿ ತಾಣ: ಪಿಸಿಬಿ ಮನವಿ ಸಾಧ್ಯತೆ

ನವದೆಹಲಿ (ಪಿಟಿಐ): ಮುಂಬರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ಅಫ್ಗಾನಿಸ್ತಾನ ವಿರುದ್ಧ ತನ್ನ ಪಂದ್ಯವನ್ನು ಚೆನ್ನೈನಲ್ಲಿ ಆಡುವುದಕ್ಕೆ ಹಿಂದೇಟು ಹಾಕಿದೆ ಎಂದು ಮೂಲಗಳು ತಿಳಿಸಿವೆ.

ಅಂತೆಯೇ ಆಸ್ಟ್ರೇಲಿಯಾ ವಿರುದ್ಧದ ಪಂದ್ಯವನ್ನು ಬೆಂಗಳೂರಿನಲ್ಲಿ ಆಡುವುದಕ್ಕೂ ಅಸಮ್ಮತಿ ಸೂಚಿಸುವ ಸಾಧ್ಯತೆಯಿದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಯ ಕರಡು ವೇಳಾಪಟ್ಟಿಯನ್ನು ಬಿಸಿಸಿಐ ಈಗಾಗಲೇ ಸಿದ್ಧಪಡಿಸಿ ಐಸಿಸಿಗೆ ನೀಡಿದೆ. ಐಸಿಸಿಯು ಕರಡು ವೇಳಾಪಟ್ಟಿ ಬಗ್ಗೆ ಅಭಿಪ್ರಾಯ ತಿಳಿಸುವಂತೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಸೇರಿದಂತೆ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳುವ ಎಲ್ಲ ದೇಶಗಳ ಕ್ರಿಕೆಟ್ ಮಂಡಳಿಗಳಿಗೆ ನೀಡಿದೆ.

ಪಾಕ್ ಪಂದ್ಯಗಳಿಗೆ ನಿಗದಿಪಡಿಸಿದ ತಾಣಗಳಿಗೆ ಒಪ್ಪಿಗೆ ಸೂಚಿಸುವ ಕಾರ್ಯವನ್ನು ಪಿಸಿಬಿಯು ತಂಡದ ಯೋಜನೆ ರೂಪಿಸುವ ತಜ್ಞರು ಮತ್ತು ಆಯ್ಕೆ ಸಮಿತಿ ಸದಸ್ಯರಿಗೆ ಒಪ್ಪಿಸಿತ್ತು. ಪಾಕಿಸ್ತಾನದ ಪಂದ್ಯಗಳಿಗೆ ನಿಗದಿಪಡಿಸಿರುವ ಎರಡು ತಾಣಗಳ ಬಗ್ಗೆ ಅವರು ಅಸಮ್ಮತಿ ಸೂಚಿಸಿದ್ದಾರೆ ಎಂದು ಪಿಸಿಬಿ ಮೂಲಗಳು ಹೇಳಿವೆ.

'ಚೆನ್ನೈ ಕ್ರೀಡಾಂಗಣದ ಪಿಚ್, ಸ್ಪಿನ್ನರ್‌ಗಳಿಗೆ ನೆರವು ನೀಡುತ್ತದೆ. ಅಫ್ಗಾನಿಸ್ತಾನ ತಂಡದಲ್ಲಿ ಪ್ರಮುಖ ಸ್ಪಿನ್ನರ್‌ಗಳಾದ ರಶೀದ್ ಖಾನ್ ಮತ್ತು ನೂರ್ ಅಹಮದ್ ಇರುವುದರಿಂದ ಪಾಕ್ ಬ್ಯಾಟರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು ಎಂಬ ಅಭಿಪ್ರಾಯವನ್ನು ಅವರು ಪಿಸಿಬಿಗೆ ನೀಡಿದ್ದಾರೆ' ಎಂದು ತಿಳಿಸಿವೆ.

ಆದರೆ, ಬ್ಯಾಟರ್ ಸ್ನೇಹಿ ಪಿಚ್ ಹೊಂದಿರುವ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲು ಪಾಕ್ ಏಕೆ ಹಿಂದೇಟು ಹಾಕುತ್ತಿದೆ ಎಂಬುದು ಸ್ಪಷ್ಟವಾಗಿಲ್ಲ.

'ಅಫ್ಗಾನಿಸ್ತಾನ ವಿರುದ್ಧದ ಪಂದ್ಯವನ್ನು ಬೆಂಗಳೂರಿನಲ್ಲೂ, ಆಸ್ಟ್ರೇಲಿಯಾ ಎದುರಿನ ಪಂದ್ಯವನ್ನು ಚೆನ್ನೈನಲ್ಲೂ ಆಯೋಜಿಸುವಂತೆ ಪಿಸಿಬಿಯು ಐಸಿಸಿ ಹಾಗೂ ಬಿಸಿಸಿಐಗೆ ಮನವಿ ಮಾಡುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

'ಪಾಕ್ ತಂಡ ಭಾರತದಲ್ಲಿ ಆಡಬಾರದು'

ಕರಾಚಿ (ಪಿಟಿಐ): ಭಾರತ ಕ್ರಿಕೆಟ್ ತಂಡವು ಪಾಕಿಸ್ತಾನದ ನೆಲದಲ್ಲಿ ಆಡುವವರೆಗೆ, ಪಾಕಿಸ್ತಾನ ತಂಡವು ಭಾರತದಲ್ಲಿ ಆಡಬಾರದು ಎಂದು ಪಾಕ್ ಕ್ರಿಕೆಟ್ ತಂಡದ ಮಾಜಿ ಆಟಗಾರ ಜಾವೇದ್ ಮಿಯಾಂದಾದ್ ಹೇಳಿದ್ದಾರೆ.

'ಪಾಕ್ ತಂಡ 2012 ಮತ್ತು 2016 ರಲ್ಲಿ ಭಾರತದಲ್ಲಿ ಆಡಿತ್ತು. ಇದೀಗ ಪಾಕಿಸ್ತಾನದಲ್ಲಿ ಆಡುವ ಸರದಿ ಭಾರತ ತಂಡದ್ದಾಗಿದೆ' ಎಂದು 66 ವರ್ಷದ ಬ್ಯಾಟರ್ ತಿಳಿಸಿದ್ದಾರೆ.

'ವಿಶ್ವಕಪ್ ಸೇರಿದಂತೆ ಯಾವುದೇ ಪಂದ್ಯವನ್ನಾಡಲು ಭಾರತಕ್ಕೆ ತೆರಳಬಾರದು ಎಂಬುದು ನನ್ನ ಅಭಿಪ್ರಾಯ. ನಾವು ಭಾರತದಲ್ಲಿ ಆಡಲು ಪ್ರತಿ ಬಾರಿಯೂ ಸಿದ್ಧರಿರುತ್ತೇವೆ. ಆದರೆ ಅವರು (ಭಾರತ) ಪಾಕಿಸ್ತಾನದಲ್ಲಿ ಆಡಲು ಒಪ್ಪುವುದಿಲ್ಲ' ಎಂದಿದ್ದಾರೆ.



ಜಾವೇದ್ ಮಿಯಾಂದಾದ್

ವಿಂಬಲ್ಡನ್ ವಿಜೇತರಿಗೆ ₹24 ಕೋಟಿ ಬಹುಮಾನ

ಲಂಡನ್ (ಎಪಿ): ವಿಂಬಲ್ಡನ್ ಟೆನಿಸ್ ಟೂರ್ನಿಯ ಒಟ್ಟು ಬಹುಮಾನದ ಮೊತ್ತವನ್ನು ಶೇ 11ರಷ್ಟು ಹೆಚ್ಚಳ ಮಾಡಲಾಗಿದೆ. ಪುರುಷ ಮತ್ತು ಮಹಿಳಾ ಸಿಂಗಲ್ಸ್‌ನ ವಿಜೇತರು ಈ ಬಾರಿ ತಲಾ ₹24 ಕೋಟಿ ನಗದು ಬಹುಮಾನ ಪಡೆಯಲಿದ್ದಾರೆ.

ಒಟ್ಟು ಬಹುಮಾನ ಮೊತ್ತವನ್ನು ₹463 ಕೋಟಿಗೆ ಹೆಚ್ಚಿಸಲಾಗಿದೆ. 2019ರ ಟೂರ್ನಿಗೆ ಹೋಲಿಕೆ ಮಾಡಿದರೆ ಚಾಂಪಿಯನ್ನರಿಗೆ ಲಭಿಸುವ ಬಹುಮಾನ ಮೊತ್ತ ಶೇ 17.1ರಷ್ಟು ಏರಿಕೆಯಾಗಿದೆ ಎಂದು ಆಲ್ ಇಂಗ್ಲೆಂಡ್ ಕ್ಲಬ್ ಹೇಳಿದೆ.

ಸಿಂಗಲ್ಸ್ ವಿಜೇತರು 2021ರಲ್ಲಿ ₹17 ಕೋಟಿ, ಕಳೆದ ವರ್ಷ ₹20.9 ಕೋಟಿ ಬಹುಮಾನ ಪಡೆದಿದ್ದರು.

ಮೊದಲ ಸುತ್ತಿನಲ್ಲಿ ಸೋತವರು ₹ 56.98 ಲಕ್ಷ ಪಡೆಯಲಿದ್ದು, ಕಳೆದ ವರ್ಷಕ್ಕಿಂತ ಶೇ 10ರಷ್ಟು ಏರಿಕೆಯಾಗಿದೆ.

ಈ ಬಾರಿ ವಿಂಬಲ್ಡನ್ ಟೂರ್ನಿ ಜುಲೈ 3ರಿಂದ 16ರವರೆಗೆ ನಡೆಯಲಿದೆ.

ಅಲ್ಟಿಮೇಟ್ ಟೇಬಲ್ ಟೆನಿಸ್ 4ನೇ ಆವೃತ್ತಿ ಜುಲೈ 13ರಿಂದ

ಮುಂಬೈ: ಅಲ್ಟಿಮೇಟ್ ಟೇಬಲ್ ಟೆನಿಸ್ (ಯುಟಿಟಿ) 4ನೇ ಆವೃತ್ತಿಯು ಜುಲೈ 13ರಂದು ಪುಣೆಯ ಬಾಲೇವಾಡಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಆರಂಭವಾಗಲಿದೆ. ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಚೆನ್ನೈ ಲಯನ್ಸ್ ತಂಡವು ಪುಣೇರಿ ಪಲ್ಟನ್ ತಂಡವನ್ನು ಎದುರಿಸಲಿದೆ.

ಜುಲೈ 14ಕ್ಕೆ ಬೆಂಗಳೂರು ಸ್ಮಾಷರ್ಸ್ ಮತ್ತು ಯು ಮುಂಬಾ ಟಿಟಿ, ಜುಲೈ 15ರಂದು ದಬಾಂಗ್ ಡೆಲ್ಲಿ ಟಿಟಿಸಿ ಮತ್ತು ಗೋವಾ ಚಾಲೆಂಜರ್ಸ್ ತಮ್ಮ ಆರಂಭಿಕ ಪಂದ್ಯವನ್ನು ಆಡಲಿವೆ ಪಂದ್ಯಗಳು ಸ್ಪೋರ್ಟ್ಸ್ 18 ಮತ್ತು ಜಿಯೋ ಸಿನೆಮಾದಲ್ಲಿ ನೇರ ಪ್ರಸಾರ ಇರಲಿದೆ.

ತೈಪೆ ಓಪನ್: ಪ್ರಣಯ್ ಭರವಸೆ

ತೈಪೆ (ಪಿಟಿಐ): ಇಂಡೊನೇಷ್ಯಾ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪರಾಭವಗೊಂಡಿದ್ದ ಎಚ್.ಎಸ್. ಪ್ರಣಯ್ ಅವರು ಮಂಗಳವಾರ ಇಲ್ಲಿ ಆರಂಭವಾಗಲಿರುವ ತೈಪೆ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸುವರು.

ಪುರುಷರ ಸಿಂಗಲ್ಸ್‌ನಲ್ಲಿ 9ನೇ ರ್‍ಯಾಂಕ್ ಹೊಂದಿರುವ ಪ್ರಣಯ್, ಮಲೇಷ್ಯಾ ಮಾಸ್ಟರ್ ಸೂಪರ್ 300 ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಇಂಡೊನೇಷ್ಯಾ ಓಪನ್ ಟೂರ್ನಿಯಲ್ಲಿ ನಾಲ್ಕರ ಘಟಕ್ಕೆ ತಲುಪಿ, ಶನಿವಾರ ವಿಶ್ವದ ಅಗ್ರಮಾನ್ಯ ಆಟಗಾರ ಡೆನ್ಮಾರ್ಕ್‌ನ ವಿಕ್ಟರ್ ಆಕ್ಸೆಲ್‌ಸನ್ ಎದುರು ಸೋತಿದ್ದರು.

ಈ ಟೂರ್ನಿಯಲ್ಲಿ ಮೂರನೇ ಶ್ರೇಯಾಂಕ ಹೊಂದಿರುವ ಅವರು, ಅರ್ಹತಾ ಸುತ್ತಿನಲ್ಲಿ ಗೆದ್ದು ಬರುವ ಆಟಗಾರನನ್ನು ಆರಂಭಿಕ ಸುತ್ತಿನಲ್ಲಿ ಎದುರಿಸುವರು. ಭಾರತದ ಮತ್ತೊಬ್ಬ ಆಟಗಾರ ಮೈಸ್ನಮ್ ಮೀರಾಬಾ ಅವರು ಐದನೇ ಶ್ರೇಯಾಂಕದ ಆಟಗಾರ ಹಾಂಗ್‌ಕಾಂಗ್‌ನ ಅಂಗಸ್ ಕಾ ಲಾಂಗ್ ಅವರನ್ನು ಎದುರಿಸುವರು.

ಭಾರತದ ಕಿರಣ್ ಜಾರ್ಜ್, ಸತೀಶ್ ಕುಮಾರ್ ಕರುಣಾಕರನ್, ಮಿಥುನ್ ಮಂಜುನಾಥ್ ಮತ್ತು ಎಸ್. ಶಂಕರ್ ಮುತ್ತುಸಾಮಿ ಸುಬ್ರಹ್ಮಣ್ಯನ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ. ಒಲಿಂಪಿಕ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್, ಮಾಳವಿಕಾ ಬನ್ಸೋಡ್, ಆಕರ್ಷಿ ಕಶ್ಯಪ್ ಮತ್ತು ರುತ್ವಿಕಾ ಶಿವಾನಿ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ.

ಹಸರಂಗ ಮಾರಕ ಬೌಲಿಂಗ್

ಬುಲಾವಯೊ (ಪಿಟಿಐ): ಲೆಗ್ ಸ್ಪಿನ್ನರ್ ವನಿಂದು ಹಸರಂಗ 24 ರನ್ನಿಗೆ ಆರು ವಿಕೆಟ್ ಪಡೆದು ಶ್ರೀಲಂಕಾ ತಂಡ, ಐಸಿಸಿ ಏಕದಿನ ವಿಶ್ವಕಪ್ ಅರ್ಹತಾ ಟೂರ್ನಿಯ ಲೀಗ್ ಪಂದ್ಯದಲ್ಲಿ ಸೋಮವಾರ ಯುಎಇ ತಂಡವನ್ನು 175 ರನ್‌ಗಳ ದೊಡ್ಡ ಅಂತರದಿಂದ ಸೋಲಿಸಲು ನೆರವಾದರು.

ಪ್ರಮುಖ ಬ್ಯಾಟರ್‌ಗಳ ಉಪಯುಕ್ತ ಕೊಡುಗೆಗಳ ನೆರವಿನಿಂದ ಶ್ರೀಲಂಕಾ 50 ಓವರುಗಳಲ್ಲಿ 6 ವಿಕೆಟ್‌ಗೆ 355 ರನ್‌ಗಳ ದೊಡ್ಡ ಮೊತ್ತ ಗಳಿಸಿತು. ಆಮೇಲೆ ಆರ್‌ಸಿಬಿ ಸ್ಪಿನ್ನರ್ ಕೂಡ ಆಗಿರುವ ಹಸರಂಗ ಮಿಂಚಿದರು. ತಮ್ಮ ಸಾಧನೆಯ ಹಾದಿಯಲ್ಲಿ ಏಕದಿನ ಕ್ರಿಕೆಟ್‌ನಲ್ಲಿ 50 ವಿಕೆಟ್‌ಗಳನ್ನು ಪೂರೈಸಿದರು.

ಒಮಾನ್ ತಂಡ, ಇನ್ನೊಂದು ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಐದು ವಿಕೆಟ್‌ಗಳಿಂದ ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 50 ಓವರುಗಳಲ್ಲಿ 6 ವಿಕೆಟ್‌ಗೆ 355 (ಕುಶಾಲ್ ಮೆಂಡಿಸ್ 78, ಸಂದೀಪ್ ಸಮರವಿಕ್ರಮ 73, ಚರಿತ್ ಅಸಲಂಕ ಔಟಾಗದೇ 48; ಅಲಿ ನಾಸಿರ್ 44ಕ್ಕೆ2); ಯುಎಇ: 39 ಓವರುಗಳಲ್ಲಿ 180 (ಮುಹಮ್ಮದ್ ವಾಸಿಂ 39, ವೃತ್ಯ ಅರವಿಂದ್ 39; ವನೀಂದು ಹಸರಂಗ 24ಕ್ಕೆ6).

ಐರ್ಲೆಂಡ್: 50 ಓವರುಗಳಲ್ಲಿ 7 ವಿಕೆಟ್‌ಗೆ 281 (ಜಾರ್ಜ್ ಡಾಕ್ರೆಲ್ 91, ಹ್ಯಾರಿ ಟೆಕ್ಟರ್ 52; ಬಿಲಾಲ್ ಖಾನ್ 64ಕ್ಕೆ2); ಒಮಾನ್: 48.1 ಓವರುಗಳಲ್ಲಿ 5 ವಿಕೆಟ್‌ಗೆ 285 (ಕಶ್ಯಪ ಪ್ರಜಾಪತಿ 72, ಜೀಶನ್ ಮಕ್ಸೂದ್ 59).